

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 24 ಭಾನುವಾರ 2025

ಸಂಪುಟ: 46 | ಸಂಚಿಕೆ: 128 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com







‘ಬುರುಡೆ’ ಮಾಸ್ಕ್‌ಮ್ಯಾನ್ ಅಲಿಯಾಸ್ ಚಿನ್ನಯ್ಯ ಬಂಧನ



- ಹೆಚ್ಚಿನ ತನಿಖೆಗಾಗಿ 10 ದಿನ ಎಸ್‌ಐಟಿ ವಶಕ್ಕೆ
- ‘ಬುರುಡೆ’ ಬಯಲು ಮಾಡಿದ ಎಸ್‌ಐಟಿ



ಮಾಸ್ಕ್‌ಮ್ಯಾನ್ ಅಲಿಯಾಸ್ ಚಿನ್ನಯ್ಯ

ಬೆಳ್ತಂಗಡಿ, ಆ.23–ಧರ್ಮಸ್ಥಳದಲ್ಲಿ ನೂರಾರು ಯುವತಿಯರು ಹಾಗೂ ಮಹಿಳೆಯರ ಮೇಲೆ ಅತ್ಯಾಚಾರವೆಸಗಿ ಹತ್ಯೆ ಮಾಡಲಾಗಿದ್ದು, ಅವರ ಶವಗಳನ್ನು ನಾನೇ ಹೂತು ಹಾಕಿದ್ದೇನೆ ಎಂದು ಹೇಳಿ ತಲೆಬುರುಡೆಯೊಂದಿಗೆ ಬೆಳ್ತಂಗಡಿ ಪೊಲೀಸ್ ಠಾಣೆಗೆ ಆಗಮಿಸಿ ದೂರು ನೀಡಿದ ನಂತರ ನ್ಯಾಯಾಧೀಶರ ಮುಂದೆಯೂ ಕಲಂ 164ರ ಅಡಿ ಹೇಳಿಕೆ ನೀಡಿದ್ದ ಮುಸುಕುಧಾರಿ ಬಿಟ್ಟಿದ್ದೆಲ್ಲಾ ಬುರುಡೆ ಎಂಬುದು ಈಗ ಬಯಲಾಗಿದ್ದು, ಆತನನ್ನು ಶನಿವಾರ ಎಸ್‌ಐಟಿ ಪೊಲೀಸರು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಈ ವೇಳೆ ಹೆಚ್ಚಿನ ತನಿಖೆಗಾಗಿ ಆತನನ್ನು 10 ದಿನಗಳ ಕಾಲ ಎಸ್‌ಐಟಿ ವಶಕ್ಕೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿ ಸಂರಕ್ಷಣಾ ಕಾಯ್ದೆಯಡಿ ರಕ್ಷಣೆ ಪಡೆದುಕೊಂಡಿದ್ದ ಕಾರಣಕ್ಕಾಗಿ ಆತನ ವಿವರಗಳನ್ನು ಬಹಿರಂಗಪಡಿಸಿರಲಿಲ್ಲ. ಇದೀಗ ಆತ ಹೇಳಿದ್ದೆಲ್ಲಾ ಸುಳ್ಳು ಎಂಬುದು ಬಯಲಾದ ನಂತರ ಎಸ್‌ಐಟಿ ಮನವಿ ಮೇರೆಗೆ ನ್ಯಾಯಾಲಯವು ಸಾಕ್ಷಿ ಸಂರಕ್ಷಣಾ ಕಾಯ್ದೆಯಡಿಯ ರಕ್ಷಣೆಯನ್ನು ತೆರವುಗೊಳಿಸಿ ಆತನನ್ನು ಆರೋಪಿಯನ್ನಾಗಿ ಉಲ್ಲೇಖಿಸಿದ ನಂತರ ಮುಸುಕುಧಾರಿ ಅನಾಮಿಕ ಯಾರು ಎಂಬುದನ್ನು ಎಸ್‌ಐಟಿ ಬಹಿರಂಗಪಡಿಸಿದೆ. ಈ ಹಿಂದೆ ಧರ್ಮಸ್ಥಳ ▶ 6ನೇ ಪುಟಕ್ಕೆ

ಒಂದೊಂದೇ ಸತ್ಯಗಳು ಹೊರಗೆ ಬರುತ್ತಿವೆ

ಧರ್ಮಸ್ಥಳ: ಮಾಸ್ಕ್‌ಮ್ಯಾನ್ ಚಿನ್ನಯ್ಯನ ಬಂಧನದ ನಂತರ ಬುರುಡೆ ಗ್ಯಾಂಗ್‌ನ ಒಂದೊಂದೇ ಬಣ್ಣ ಬಯಲಾಗುತ್ತಿದ್ದು, ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆಯವರು ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದ್ದಾರೆ.



ಡಾ.ವೀರೇಂದ್ರ ಹೆಗ್ಗಡೆ

ಧರ್ಮಸ್ಥಳಕ್ಕೆ ಬಂದು ಬೆಂಬಲ ಸೂಚಿಸುವ ಎಲ್ಲರಿಗೂ ಧನ್ಯವಾದಗಳು. ಈಗ ಒಂದೊಂದೇ ಸತ್ಯಗಳು ಹೊರಗೆ ಬರುತ್ತಿವೆ. ಸತ್ಯಗಳನ್ನು ತೊಳೆದು ಇಟ್ಟಂತಾಗಿದೆ. ಕ್ಷೇತ್ರದ ಮೇಲಿನ ಭಕ್ತರ ಅಭಿಮಾನ ಹೀಗೇ ಇರಲಿ. ಎಲ್ಲರ ಪ್ರೀತಿ–ವಿಶ್ವಾಸ ಹೀಗೆಯೇ ಇರಲಿ ಎಂದು ನಾನು ಆಶಿಸ್ತೇನೆ. ಬೆಂಬಲಕ್ಕೆ ನಿಂತ ಎಲ್ಲರಿಗೂ ಧನ್ಯವಾದಗಳು. ಎಸ್‌ಐಟಿ ತನಿಖೆ ಹಂತದಲ್ಲಿರುವುದರಿಂದ ಈ ಬಗ್ಗೆ ನಾನು ಹೆಚ್ಚು ಮಾತ ನಾಡಲ್ಲ ಎಂದು ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದ್ದಾರೆ.

ಇದು ಅಣ್ಣಪ್ಪ ಸ್ವಾಮಿಯ ಸತ್ಯ ದರ್ಶನ: ಹೆಗ್ಗಡೆಯವರ ವಿಡಿಯೋ ಮತ್ತೆ ವೈರಲ್

ಮಂಗಳೂರು: ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತಿಟ್ಟಿದ್ದೇನೆ ಎಂದು ಬುರುಡೆ ಬಿಟ್ಟಿದ್ದ ಮಾಸ್ಕ್‌ಮ್ಯಾನ್ ಅಲಿಯಾಸ್ ಚಿನ್ನಯ್ಯನನ್ನು ಬಂಧಿಸಿದ ಬೆನ್ನಲ್ಲೇ ಸಾಮಾಜಿಕ ಜಾಲತಾಣದಲ್ಲಿ ವೀರೇಂದ್ರಹೆಗ್ಗಡೆಯವರು ಈ ಹಿಂದೆ ಅಣ್ಣಪ್ಪಸ್ವಾಮಿ ಪವಾಡದ ಬಗ್ಗೆ ಮಾತನಾಡಿದ್ದ ವೀಡಿಯೋ ಮತ್ತೆ ವೈರಲ್ ಆಗಿದೆ. ಧರ್ಮಸ್ಥಳದಲ್ಲಿ ಮಂಜುನಾಥ ಅನುಗ್ರಹ ನೀಡುವ ದೇವರು. ಮಂಜುನಾಥನಿಗೆ ಕೋಪ ಬರಲ್ಲ. ಆದರೆ, ಅಣ್ಣಪ್ಪಸ್ವಾಮಿ ಕೋಪಿಷ್ಟ, ಅನ್ಯಾಯಿಗಳನ್ನು, ಅಧರ್ಮಿಗಳನ್ನು ಶಿಕ್ಷಿಸದೇ ಬಿಡಲ್ಲ. ಧರ್ಮದೇವತೆಗಳ ಬಂಟ ಅಣ್ಣಪ್ಪಸ್ವಾಮಿ ಪವಾಡವಿದು. ಅಣ್ಣಪ್ಪಸ್ವಾಮಿ ಧರ್ಮಸ್ಥಳ ದೇಗುಲದ ಕಾವಲುಗಾರ ಎಂಬ ನಂಬಿಕೆಯಿದೆ ಎಂದು ಈ ಹಿಂದೆ ಹೆಗ್ಗಡೆಯವರು ಹೇಳಿದ್ದರು.

ಧರ್ಮಸ್ಥಳ ದೇಗುಲದಿಂದ ಶಿವ ರುದ್ರತಾಂಡವದ ಫೋಟೋ ಅಪ್ಲೋಡ್



ಮಂಗಳೂರು: ಮಾಸ್ಕ್‌ಮ್ಯಾನ್ ಚಿನ್ನಯ್ಯನ ಬಂಧನವಾದ ಬೆನ್ನಲ್ಲೇ ಧರ್ಮಸ್ಥಳ ದೇವಸ್ಥಾನದ ಅಧಿಕೃತ ಸಾಮಾಜಿಕ ಜಾಲತಾಣ ಪುಟದಲ್ಲಿ ಶಿವ ರುದ್ರತಾಂಡವ ಮಾಡುತ್ತಿರುವ ಫೋಟೋವನ್ನು ಅಪ್ಲೋಡ್ ಮಾಡಲಾಗಿದೆ. ಧರ್ಮಸ್ಥಳ ದೇವರ ಪಾವಿತ್ರ್ಯತೆಗೆ ಧಕ್ಕೆ ತರುವಂತಹ ಷಡ್ಯಂತ್ರ ಮಾಡಿದ ಗ್ಯಾಂಗ್ ಸುಳ್ಳಿನಕೋಟೆ ಕಟ್ಟಿತ್ತು. ಒಂದೊಂದೇ ಸುಳ್ಳಿನ ಕೋಟೆಗಳು ಕಳಚಿಬಿದ್ದು ಷಡ್ಯಂತ್ರ ಮಾಡುತ್ತಿದ್ದವರು ಬಂಧನವಾಗುತ್ತಿದ್ದಂತೆ ಆಡಳಿತ ಮಂಡಳಿ ಶಿವರುದ್ರ ತಾಂಡವದ ಫೋಟೋ ಹಾಕಿ ‘ನವೋ ಮಂಜುನಾಥ’ ಎಂದು ಬರೆದು ಅಪಪ್ರಚಾರ ಮಾಡಿದವರಿಗೆ ಸಂದೇಶ ಕಳುಹಿಸಿದೆ.

ಏನಿದು ಸಂದೇಶ?: ಶಿವರುದ್ರ ತಾಂಡವ ಸಂತೋಷ ಮತ್ತು ಭಾವಪರವಶತೆ, ಕೋಪವನ್ನು ಸಂಕೇತಿಸುತ್ತದೆ. ಅಧರ್ಮದ ವಿನಾಶವನ್ನು, ಅಹಂಕಾರದ ನಾಶವನ್ನು ಶಿವರುದ್ರ ತಾಂಡವ ಸೂಚಿಸುತ್ತದೆ. ಢಮರುಗ ಹಿಡಿದ ರೌದ್ರತೆ ತೋರುವ ಶಿವನ ಉಗ್ರ ಮತ್ತು ವಿನಾಶಕಾರಿ ಸ್ವರೂಪವನ್ನು ಬಿಂಬಿಸುತ್ತದೆ.

20X30ಕ್ಕೆ 2 ಕೋಟಿ, 50X80 ಸೈಟ್‌ಗೆ 9 ಕೋಟಿ ಬಿಗ್ ಬಿಡ್!

ಮೈಸೂರು ರಿಯಲ್ ಎಸ್ಟೇಟ್ ಕರಾಮತ್ತು!

- ಆಗಸ್ಟ್ 26ರಂದು ಹರಾಜು ಪ್ರಕ್ರಿಯೆ ಪೂರ್ಣ
- ಆಗಸ್ಟ್ 27ರಂದು ಬಿಡ್ ಓಪನ್
- ಬಿಡ್‌ದಾರರ ಪರಿಶೀಲನೆಗೆ ಉಪಸಮಿತಿ ರಚನೆ



ಮೈಸೂರು, ಆ.23(ಬಿಎಲ್‌ಯು)– ಮೈಸೂರಿನ ವಿಜಯನಗರದಲ್ಲಿ ಎರಡು ನಿವೇಶನಗಳನ್ನು ಕೋಟ್ಯಾಂತರ ಬೆಲೆಗೆ ಹರಾಜಿನಲ್ಲಿ ಖರೀದಿ ಮಾಡಿರುವವರು ಯಾರು...? ಯಾರು...?

ವಿಜಯನಗರ 4ನೇ ಹಂತದ 2ನೇ ಫೇಸ್‌ನಲ್ಲಿ 20X30 ನಿವೇಶನಕ್ಕೆ 2 ಕೋಟಿ ಹಾಗೂ 50X80 ನಿವೇಶನಕ್ಕೆ 9 ಕೋಟಿ ಕೂಗಿದವರ ಬಗ್ಗೆ ಮೈಸೂರು ಜನರಲ್ಲಿ ಭಾರೀ ಕುತೂಹಲ ಮೂಡಿದೆ. ಆದರೆ, ಸಾರ್ವಜನಿಕ ವಲಯದಲ್ಲಿ ಇದು ರಿಯಲ್ ಎಸ್ಟೇಟ್ ಟ್ರಿಕ್ ಎಂಬ ಚರ್ಚೆ ವ್ಯಾಪಕವಾಗಿದೆ.

ಕೆಲ ರಿಯಲ್ ಎಸ್ಟೇಟ್ ಉದ್ಯಮಿಗಳು ಸೇರಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ನಿವೇಶನ ಹರಾಜು ಪ್ರಕ್ರಿಯೆಯಲ್ಲಿ ಕರಾಮತ್ತು ತೋರಿದ್ದಾರೆ. ಅವರ ಉದ್ದೇಶ ಮಾರುಕಟ್ಟೆ ಕುದುರಿಸುವುದೇ ಆಗಿದೆ. ಎರಡು ಲಕ್ಷ ಇಎಂಡಿ ಹಣ ಹೋದರೂ ಸರಿ ನಾವು ಮಾರ್ಕೆಟಿಂಗ್ ಮಾಡಲು ಇದು ಸರಿಯಾದ ಸಮಯ ಎಂದು ತೀರ್ಮಾನಿಸಿ ಯದ್ವಾ ತದ್ವಾ ಬಿಡ್ ಕೂಗಿದ್ದಾರೆ. ಹೀಗೆ ಬಿಡ್ ಕೂಗಿದವರು ನಿವೇಶನವನ್ನು ನಿಜವಾಗಿಯೂ ಖರೀದಿ ಮಾಡುವುದೇ ಅನುಮಾನ ಎಂದು ಅಭಿಪ್ರಾಯ ಪಡಲಾಗಿದೆ. ಎಂಡಿಎ ನಿವೇಶನದ ಬೆಲೆ ಇಷ್ಟಿರುವಾಗ ನಮ್ಮ ನಿವೇಶನಗಳ ದರ ನೀವೇ ನಿರ್ಧರಿಸಿ ಎಂದು ಜನರ ತೀರ್ಮಾನಕ್ಕೆ ಬಿಡುವಂತೆ ಗಿಮಿಕ್ ಮಾಡಿ ಅಧಿಕ ಬೆಲೆಗೆ ತಮ್ಮ ನಿವೇಶನ ಮಾರಾಟ ಕುದುರಿಸುವ ಪ್ಲಾನ್ ಇದರಲ್ಲಿ ಇಲ್ಲದೇ ಇಲ್ಲ ಎಂದು ಹೇಳಲಾಗುತ್ತಿದೆ.

ಗುಪ್ತ್... ಗುಪ್ತ್...: ಈ ಎರಡು ನಿವೇಶನ ಖರೀದಿ ಮಾಡಿದವರ ಹೆಸರನ್ನು ಸದ್ಯ ಎಂಡಿಎ ನಿಯಮದಂತೆ ಗೌಪ್ಯವಾಗಿಡಲಾಗಿದೆ. ಹರಾಜು ಪ್ರಕ್ರಿಯೆ ಮುಗಿದ ನಂತರ ಬಿಡ್ ಕೂಗಿದವರ ಹೆಸರು ಬಹಿರಂಗಪಡಿಸಲಾಗುತ್ತದೆ. ಮೈಸೂರು ಇತಿಹಾಸದಲ್ಲಿ ದಾಖಲೆಯ ಬೆಲೆಗೆ ಬಿಡ್ ಕೂಗಿದವರು ಸ್ಥಳೀಯರೋ ಇಲ್ಲ ಹೊರಗಿನವರೋ ಎಂಬ ▶ 6ನೇ ಪುಟಕ್ಕೆ



ಮೈಸೂರು ಮಿತ್ರ

ಸಹಕಾರ ಕ್ಷೇತ್ರದಲ್ಲಿ ಮೀಸಲಾತಿ ವಿರೋಧಿಸುವ ಜಿ.ಟಿ.ದೇವೇಗೌಡರ ವಿರುದ್ಧ ಹೋರಾಟ ನಿರ್ಧಾರ

ಮೈಸೂರು,ಆ.23(ಜಿಎ)–ಶಾಸಕ ಜಿ.ಟಿ. ದೇವೇಗೌಡರು ಸಹಕಾರ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ, ವರ್ಗಗಳಿಗೆ ಮೀಸಲಾತಿ ನೀಡುವುದನ್ನು ವಿರೋಧಿಸುವ ಮೂಲಕ ಜಾತೀವಾದದ ಮನಸ್ಥಿತಿ ಪ್ರದರ್ಶಿಸಿದ್ದಾರೆ. ಹೀಗಾಗಿ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ಆ.25ರ ಸಂಜೆ 6ಕ್ಕೆ ನಗರದ ಅಶೋಕಪುರಂ ವೃತ್ತದಲ್ಲಿ ಪ್ರತಿಕೃತಿ ದಹಿಸುವ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.



ಪುರುಷೋತ್ತಮ್


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಣ್ಣ ಅವರು ಸಚಿವರಾಗಿದ್ದ ವೇಳೆ ಪರಿಶಿಷ್ಟ ಜಾತಿ, ವರ್ಗಗಳಿಗೆ ಸಹಕಾರ ಕ್ಷೇತ್ರದಲ್ಲಿ ಮೀಸಲಾತಿ ಕಲ್ಪಿಸಲು ಸಮಿತಿ ರಚಿಸಿದ್ದರು. ಆ ಬಗ್ಗೆ ಸದನದಲ್ಲಿ ಚರ್ಚೆ ನಡೆಯುವಾಗ ಜಿ.ಟಿ.ದೇವೇಗೌಡರು ಅದನ್ನು ವಿರೋಧಿಸಿದ್ದಲ್ಲದೆ, ಒಂದು ವೇಳೆ ಪರಿಶಿಷ್ಟರಿಗೆ ಸಹಕಾರ ಕ್ಷೇತ್ರದಲ್ಲಿ ಮೀಸಲಾತಿ ನೀಡುವುದಿದ್ದರೆ ಸಹಕಾರ ಕ್ಷೇತ್ರವನ್ನೇ ಮುಚ್ಚಿಬಿಡಿ ಎಂದು ಹೇಳಿರುವುದು ದಲಿತರ ಮೇಲಿನ ದೌರ್ಜನ್ಯವಾಗಿದೆ. ಹೀಗಾಗಿ ಪ್ರತಿಭಟನೆಂಯೊಡನೆ ದೌರ್ಜನ್ಯ ವಿರೋಧಿ ಕಾಯ್ದೆ ಅಡಿಯಲ್ಲಿ ಕಾನೂನು ಹೋರಾಟ ನಿರಂತರವಾಗಿ ಮುಂದುವರಿದು, ಅವರು ಹಾಗೂ ಅವರ ಪುತ್ರ ಹರೀಶ್‌ಗೌಡ ರಾಜೀನಾಮೆ ನೀಡುವವರೆಗೂ ನಿಲ್ಲುವುದಿಲ್ಲ ಎಂದು ಎಚ್ಚರಿಸಿದರು.

ಜಿ.ಟಿ.ದೇವೇಗೌಡ'ರು ಚಾಮುಂಡೇಶ್ವರಿ ಕ್ಷೇತ್ರದಲ್ಲಿರುವ ಸುಮಾರು ಒಂದು ಲಕ್ಷದಷ್ಟು ಪರಿಶಿಷ್ಟ ಜಾತಿ, ವರ್ಗದವರ ಮತ ಪಡೆದಿದ್ದಾರೆ. ಹುಣಸೂರಿನಲ್ಲಿಯೂ ಇದೇ ಆಗಿದೆ. ಬಡವರ ಜಮೀನನ್ನು ಅಲ್ಪ ಹಣಕ್ಕೆ ಖರೀದಿಸಿ ದೊಡ್ಡ ಮೊತ್ತಕ್ಕೆ ಮಾರಾಟ ಮಾಡಿ ಬಂದ ಹಣದಿಂದ ಮತದಾರರಿಗೆ ಆಮಿಷ ಒಡ್ಡಿ ಗೆದ್ದವರಾಗಿದ್ದಾರೆ ಎಂದು ಆರೋಪಿಸಿದರು.

ಇವರು ತಮ್ಮ ಮಾತಿನ ಮೂಲಕ ತಮ್ಮ ವ್ಯಕ್ತಿತ್ವಕ್ಕೆ ತಾವೇ ಮಸಿ ಬಳಿದುಕೊಂಡಿದ್ದಾರೆ. ನಮಗೆ ಕುಟುಂಬ ರಾಜಕಾರಣದ ಸಹಕಾರ ಕ್ಷೇತ್ರ ಬೇಕಿಲ್ಲ. ಜಾತಿ ರಹಿತವಾದ ಸಹಕಾರ ಕ್ಷೇತ್ರ ಉನ್ನತೀಕರಿಸಬೇಕಾಗಿದ್ದವರು ಈ ಕ್ಷೇತ್ರವನ್ನು ಅಪ್ಪನ ಮನೆ ಆಸ್ತಿ ಎಂಬಂತೆ ಮಾಡಿಕೊಂಡಿದ್ದಾರೆ. ಇದರೊಡನೆ ದಮನಿತರನ್ನು ಇನ್ನಷ್ಟು ದಮನ ಮಾಡುವ ಇವರ ಮನೋಭಾವ ಎದ್ದು ಕಾಣಿಸುತ್ತದೆ. ಆರ್ಥಿಕವಾಗಿ ದಲಿತರು ಮುಂದೆ ಬರದಂತೆ ನೋಡಿಕೊಂಡಿದ್ದಾರೆ. ಹೀಗಾಗಿ ಇವರ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಸಾಹಿತಿ ಸಿದ್ದಸ್ವಾಮಿ, ಮಣಿಯಯ್ಯ, ಪುಟ್ಟರಾಜು, ಸುನಿಲ್ ಉಪಸ್ಥಿತರಿದ್ದರು.

17 ಷರತ್ತು ಪಾಲಿಸಲು ಕಟ್ಟುನಿಟ್ಟಿನ ಸೂಚನೆ: ಕೆಎಸ್‌ಸಿಎಗೆ ಪತ್ರ ಬರೆದ ಪೊಲೀಸ್ ಇಲಾಖೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಳೆದ ಜೂನ್‌ನಲ್ಲಿ ಬೆಂಗಳೂರು ರಾಯಲ್ ಚಾಲೆಂಜರ್ಸ್ (ಆರ್‌ಸಿಬಿ) ವಿಜಯೋತ್ಸವದ ವೇಳೆ ನಡೆದಿದ್ದ ಕಾಲ್ತುಳಿತ ಘಟನೆಯ ಬಳಿಕ ಎಚ್ಚೆತ್ತಿರುವ ನಗರ ಪೊಲೀಸರು, ಈ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಾವಳಿಯನ್ನು ಮತ್ತೆ ಆಯೋಜಿಸಬೇಕಿದ್ದರೆ 17 ಷರತ್ತು ಪಾಲಿಸುವಂತೆ ಕಟ್ಟಪ್ಪಣೆ ವಿಧಿಸಿದ್ದಾರೆ.



ಜಿಲ್ಲಾಡಳಿತ, ನಗರ ಪೊಲೀಸರು, ಗುಪ್ತಚರ ವಿಭಾಗ, ಅಗ್ನಿಶಾಮಕ ದಳ ಸೇರಿದಂತೆ ಹಲವು ಇಲಾಖೆಗಳು ಸೇರಿಕೊಂಡು ಷರತ್ತು ರೂಪಿಸಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ(ಕೆಎಸ್‌ಸಿಎ) ಪತ್ರ ಬರೆದಿದ್ದಾರೆ. ಅಂತರರಾಷ್ಟ್ರೀಯ ಹಾಗೂ ದೇಶೀಯ ಕ್ರಿಕೆಟ್ ಪಂದ್ಯಾವಳಿ ಆಯೋಜನೆಗೂ ಮೊದಲು ಕ್ರೀಡಾಂಗಣವನ್ನು ಮರು ಮೌಲ್ಯಮಾಪನ ಮಾಡಬೇಕು. ಪಂದ್ಯ ಆಯೋಜಿಸಲು ಯೋಗ್ಯವೆಂದು ಘೋಷಿಸುವ ಮೊದಲು 17 ಷರತ್ತುಗಳನ್ನು ಪಾಲಿಸಿ ಎಂದು ಕೆಎಸ್‌ಸಿಎಗೆ ಪೊಲೀಸರು ಸೂಚನೆ ನೀಡಿದ್ದಾರೆ.

ಷರತ್ತುಗಳೇನು: ಕ್ರೀಡಾಂಗಣವು ನಗರದ ಕೇಂದ್ರ ಭಾಗದಲ್ಲಿದೆ. ಕ್ರೀಡಾಂಗಣದ ಸುತ್ತಮುತ್ತ ಪ್ರಮುಖ ರಸ್ತೆಗಳಿದ್ದು, ವಾಹನಗಳ ನಿಲುಗಡೆಗೆ ನಿಗದಿತ ಸ್ಥಳವಿಲ್ಲ. ಪಾರ್ಕಿಂಗ್ ಸೌಲಭ್ಯ ಒದಗಿಸಬೇಕು. ಪ್ರೇಕ್ಷಕರಿಗೆ ಪ್ರತ್ಯೇಕ ಮಾರ್ಗ ಕಲ್ಪಿಸಬೇಕು. ಎಲ್ಲಾ ಪ್ರವೇಶ ದ್ವಾರಗಳಲ್ಲೂ ಬ್ಯಾಗ್ ಸ್ಕ್ಯಾನರ್ ಅಳವಡಿಸಬೇಕು ಎಂದು ಷರತ್ತು ವಿಧಿಸಲಾಗಿದೆ. ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲು ಕೆಎಸ್‌ಸಿಎ ಹಾಗೂ ಫ್ರಾಂಚೈಸಿಗಳು ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರ ಪಡೆಯಬೇಕು. ಮಹಿಳೆಯರು ಮತ್ತು ಮಕ್ಕಳಿಗೆ ಪ್ರತ್ಯೇಕ ಪ್ರವೇಶ ದ್ವಾರ ನಿರ್ಮಿಸಬೇಕು. ಯಾವುದೇ ಸಮಸ್ಯೆಗಳು ಆಗದಂತೆ ನಿಗಾ ವಹಿಸಬೇಕು. ಪ್ರೇಕ್ಷಕರು ಬರುವುದಕ್ಕೂ ಮುನ್ನವೇ ಸ್ಥಳದಲ್ಲಿ ವೈದ್ಯರು, ನರ್ಸ್ ಹಾಗೂ ಆಂಬುಲೆನ್ಸ್‌ಗಳು ಇರುವಂತೆ ನೋಡಿಕೊಳ್ಳಬೇಕು. ಆಟಗಾರರಿಗೆ ಪ್ರತ್ಯೇಕ ಪ್ರವೇಶ ಮತ್ತು ನಿರ್ಗಮನ ದ್ವಾರದ ವ್ಯವಸ್ಥೆ ಮಾಡಬೇಕು. ಅಗ್ನಿನಂದಕ ಉಪಕರಣ ಅಳವಡಿಸಬೇಕು. ಪ್ರೇಕ್ಷಕರ ಮೇಲೆ ನಿಗಾ ಇಡಲು ವಿಶೇಷ ತಂತ್ರಜ್ಞಾನ ಬಳಕೆ ಮಾಡಬೇಕು. ಕ್ರೀಡಾಂಗಣದ ಸುತ್ತಲೂ ಇರುವ ಗೇಟ್‌ಗಳ ಗಾತ್ರ ಹೆಚ್ಚಿಸಬೇಕು ಎಂದು ಸೂಚಿಸಲಾಗಿದೆ.

ಆ.28, ವಿಶ್ವ ಪತ್ರಿಕಾ ವಿತರಕರ ದಿನಾಚರಣೆ
5ನೇ ರಾಜ್ಯ ಪತ್ರಿಕಾ ವಿತರಕರ ಸಮ್ಮೇಳನ

ಮೈಸೂರು, ಆ. 23– ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ವತಿಯಿಂದ ಆ.28ರಂದು ಬೆಳಗ್ಗೆ 11.30ಕ್ಕೆ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಅಂಗವಾಗಿ 5ನೇ ರಾಜ್ಯ ಪತ್ರಿಕಾ ವಿತರಕರ ಸಮ್ಮೇಳನವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಘಟಿಕೋತ್ಸವ ಭವನದಲ್ಲಿ ಆಯೋಜಿಸಲಾಗಿದೆ.

ಸಾನ್ನಿಧ್ಯವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ಗಣಪತಿ ಸಚ್ಚಿದನಂದ ಸ್ವಾಮೀಜಿ ವಹಿಸುವರು. ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕಾರ್ಮಿಕ ಸಚಿವ ಸಂತೋಷ್ ಎಸ್.ಲಾಡ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್‌ಬೋಸ್, ಶಾಸಕ ಅನಿಲ್ ಚಿಕ್ಕಮಾದು, ಸಮ್ಮೇಳನಾಧ್ಯಕ್ಷ ಎಂ.ಎನ್.ನಾಗರಾಜ್ ಉಪಸ್ಥಿತರಿರುವರು. ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಸಂಘದ ರಾಜ್ಯಾಧ್ಯಕ್ಷ ಕೆ.ಶಂಭುಲಿಂಗ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಜೆ.ಎಸ್.ಹೋಮದೇವ ಅಧ್ಯಕ್ಷತೆ ವಹಿಸಲಿದ್ದಾರೆ.

ಅತಿಥಿಗಳಾಗಿ ಶಾಸಕರಾದ ತನ್ವೀರ್‌ಸೇಠ್, ಡಿ.ರವಿಶಂಕರ್, ಸಿ.ಎನ್.ಮಂಜೇಗೌಡ, ಜಿ.ಟಿ. ದೇವೇಗೌಡ, ದರ್ಶನ್ ಧ್ರುವನಾರಾಯಣ, ಎಚ್.ವಿಶ್ವನಾಥ್, ಟಿ.ಎಸ್.ಶ್ರೀವತ್ಸ, ಡಾ.ಎಸ್. ಯತೀಂದ್ರ, ಮಧು ಜಿ.ಮಾದೇಗೌಡ, ಜಿ.ಡಿ. ಹರೀಶ್‌ಗೌಡ, ಡಾ.ಡಿ. ತಿಮ್ಮಯ್ಯ, ಕೆ.ವಿವೇಕಾನಂದ, ಐಎಫ್‌ಡಬ್ಲ್ಯುಜೆ ಅಧ್ಯಕ್ಷ ಜಿ.ವಿ.ಮಲ್ಲಿಕಾರ್ಜುನಯ್ಯ, ಡಾ.ಎಸ್.ನಾಗಣ್ಣ, ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಮಾಜಿ ಸಚಿವ ಎಸ್.ಎ. ರಾಮದಾಸ್, ಮಾಜಿ ಸಂಸದ ಪ್ರತಾಪ್ ಸಿಂಹ, ಆಯೇಷಾ ಖಾನಂ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಶಿವಕುಮಾರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ನಾರಾಯಣ ವಿ. ಹೆಗಡೆ, ಎಂ.ಕೆ.ಸೋಮಶೇಖರ್, ಆರ್.ರಘು (ನೈಪುಣ್ಯ) ಭಾಗವಹಿಸಲಿದ್ದಾರೆ.

ಆ.29, ಡಿ.ದೇವರಾಜ ಅರಸ್ ಅವರ ಕೊಡುಗೆಗಳ ಬಗ್ಗೆ ವಿಶೇಷ ಉಪನ್ಯಾಸ

ಮೈಸೂರು, ಆ. 23–ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್, ಅನ್ವೇಷಣಾ ಸೇವಾ ಟ್ರಸ್ಟ್ ಸಹಯೋಗದೊಂದಿಗೆ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಅವರ 110ನೇ ಹುಟ್ಟುಹಬ್ಬ ಆಚರಣೆ ಅಂಗವಾಗಿ ದೇವರಾಜ ಅರಸು ಅವರು ಹಿಂದುಳಿದ ವರ್ಗಗಳಿಗೆ ರೂಪಿಸಿದ ವಿವಿಧ ಯೋಜನೆಗಳ ಬಗ್ಗೆ ವಿಶೇಷ ಉಪನ್ಯಾಸವನ್ನು ಆಗಸ್ಟ್ 29ರಂದು ಬೆಳಗ್ಗೆ 10.30ಕ್ಕೆ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.



ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್ ಅಧ್ಯಕ್ಷತೆ ವಹಿಸುವರು. ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮತ್ತು ಅನ್ವೇಷಣಾ ಸೇವಾ ಟ್ರಸ್ಟಿನ ಅಧ್ಯಕ್ಷ ಡಾ.ಎಂ.ಜಿ.ಆರ್.ಅರಸ್, ಡಿ.ದೇವರಾಜ ಅರಸ್ ಅವರ ಸಿದ್ಧಿ ಸಾಧನೆ ಕುರಿತು ಮಾತನಾಡುವರು. ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಎಚ್.ಎ.ವೆಂಕಟೇಶ್, ಅನ್ವೇಷಣಾ ಸೇವಾ ಟ್ರಸ್ಟ್ ಸ್ಥಾಪಕ ಅಧ್ಯಕ್ಷ ಆರ್ಯ ಅಮರನಾಥರಾಜೇ ಅರಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ವಿದ್ಯಾರ್ಥಿನಿಲಯ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು,ಆ.23–2025–26ನೇ ಸಾಲಿನಲ್ಲಿ ಮೈಸೂರಿನಲ್ಲಿ ಬಿಸಿಎ, ಎಂಸಿಎ, ಎಂಬಿಎ, ಬಿ.ಎಡ್., ಬಿ.ಇ. ಮತ್ತು ಸ್ನಾತಕೋತ್ತರ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಶ್ರೀ ಮದ್ದಾನೇಶ್ವರ ವಿದ್ಯಾರ್ಥಿನಿಲಯದಲ್ಲಿ ಅತ್ಯಂತ ಕಡಿಮೆ ದರದಲ್ಲಿ ತಿಂಡಿ, ಊಟ, ವಸತಿ ಸೌಲಭ್ಯ ಕಲ್ಪಿಸಲಾಗುವುದು. ಆಸಕ್ತರು ಪ್ರವೇಶ ಅರ್ಜಿಗಳನ್ನು ನಿಲಯಪಾಲಕರು, ಶ್ರೀ ಮದ್ದಾನೇಶ್ವರ ವಿದ್ಯಾರ್ಥಿನಿಲಯ, ಜೆಎಲ್‌ಬಿ ರಸ್ತೆಯಲ್ಲಿರುವ ಕಚೇರಿಯಲ್ಲಿ ಅರ್ಜಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೊ. 8884565185, 9980971176 ಸಂಪರ್ಕಿಸಬಹುದು.


ಇಂಟರ‍್ಯಾಕ್ಟ್ ಪದವಿ ಪ್ರದಾನ



ಮೈಸೂರಿನ ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ರೋಟರಿ ಇಂಟರ‍್ಯಾಕ್ಟ್ ಪದವಿ ಪ್ರದಾನವನ್ನು ನಿಯೋಜಿತ ಜಿಲ್ಲಾ ರೋಟರಿ ಗವರ್ನರ್ ಯಶಸ್ವಿ ಸೋಮಶೇಖರ್ ನೆರವೇರಿಸಿಕೊಟ್ಟರು. ಚಂದ್ರಶೇಖರ್, ರಾಜೇಂದ್ರ, ಪಾಪೇಗೌಡ, ಚನ್ನಬಸವರಾಜ್, ನೂತನ ಇಂಟರ‍್ಯಾಕ್ಟ್ ಅಧ್ಯಕ್ಷ ಪೃಥ್ವಿರಾಜ್ ಮತ್ತಿತರರು ಉಪಸ್ಥಿತರಿದ್ದರು.

ಗಣಪತಿ ಹಬ್ಬದ ಪ್ರಯುಕ್ತ ಪೌರಾಣಿಕ ನಾಟಕಗಳ ಗೀತೆಗಳ ರಂಗ ಸಂಗೀತ

ಮೈಸೂರು, ಆ. 23– ನಗರದ ಗದ್ದಿಗೆ ರಸ್ತೆಯಲ್ಲಿರುವ ಕೆ. ಹೆಮ್ಮನಹಳ್ಳಿಯ (ಬೋಗಾದಿ ರಸ್ತೆ– 9ನೇ ಕಿಲೋಮೀಟರ್) ಪುರಾತನ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಬುಧವಾರ ಶ್ರೀ ಗಣಪತಿ ಹಬ್ಬವನ್ನು ಆಚರಿಸಲಾಗುವುದು. ಈ ಸಂಭ್ರಮಾಚರಣೆಯ ವೈಶಿಷ್ಟ್ಯತೆ ಪೌರಾಣಿಕ ನಾಟಕಗಳ ಗೀತೆಗಳ ರಂಗ ಸಂಗೀತ ಪ್ರಸ್ತುತಿ. ಅಂದು ಬೆಳಗ್ಗೆ 8 ಗಂಟೆಗೆ ದೇವರಿಗೆ ವಿಶೇಷ ಅಭಿಷೇಕ, ಅಲಂಕಾರ ಸೇವೆ, ಹಾಗೂ ಮಹಾ ಮಂಗಳಾರತಿ ನಡೆಯಲಿದೆ. ಬಳಿಕ ಪ್ರಸಾದ ವಿನಿಯೋಗ ನಡೆಯಲಿದೆ.



ಬೆಳಗ್ಗೆ 10 ಗಂಟೆಯಿಂದ ರಂಗ ಸಂಗೀತ ಕಾರ್ಯಕ್ರಮ ನಡೆಯಲಿದೆ. ಕೆ. ಹೆಮ್ಮನಹಳ್ಳಿಯ ಆರ್ ಮಂಜುನಾಥ್ ಅವರು ಹಾರ್ಮೋನಿಯಂ ನುಡಿಸಲಿದ್ದು, ತಬಲಾ, ಕ್ಲಾರಿಯೋನೆಟ್ ಸಮೇತ ಈ ರಂಗ ಸಂಗೀತ ಪ್ರಸ್ತುತಪಡಿಸಲಾಗುವುದು. 30ಕ್ಕೂ ಅಧಿಕ ಕಲಾವಿದರು ಪೌರಾಣಿಕ ನಾಟಕಗಳ ಗೀತೆಗಳನ್ನು ಹಾಡಲಿದ್ದಾರೆ. ಮಾಹಿತಿಗೆ ಮೊ. 9449264920 ಸಂಪರ್ಕಿಸಬಹುದು.

ಗಾಣಿಗನಕೊಪ್ಪಲು ಗ್ರಾಮದೇವತೆ ಹಬ್ಬ



ಮೈಸೂರು ಜಿಲ್ಲೆಯ ಸೋಸಲೆ ಹೋಬಳಿ ಗಾಣಿಗನಕೊಪ್ಪಲು ಗ್ರಾಮದಲ್ಲಿ ಶ್ರೀ ಕಾಳಮ್ಮ ಗ್ರಾಮದೇವತೆಯ ಹಬ್ಬವು ವಿಜೃಂಭಣೆಯಿಂದ ನೆರವೇರಿತು. ಈ ವೇಳೆ ಗುಡ್ಡಪ್ಪ ಬೋರಣ್ಣ, ಯಜಮಾನರಾದ ನಾಡಗೌಡ, ಉಮೇಶ್, ಗೋಪಾಲ, ಕೇಶವ, ನರಸಿಂಹಯ್ಯ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ನಿಧನ



ಸೈಯದ್ ಸಲೀಂ–ಉ–ದಿನ್

ಮೈಸೂರು, ಆ.23– ಮೈಸೂರಿನ ಫೋರ್ಟ್ ಮೊಹಲ್ಲಾ ನಿವಾಸಿ ಸೈಯದ್ ಸಲೀಂ–ಉ–ದಿನ್ (54) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ತಾಯಿ, ಸಹೋದರಿಯರು, ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೈಯದ್ ಓವೇಜ್, ಮೊಮ್ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಮೈಸೂರಿನ ಟಿಪ್ಪು ಸರ್ಕಲ್ ಹಿಂಭಾಗ, ಮೈಸೂರು–ಬೆಂಗಳೂರು ಹೈವೇ ಬಳಿ ಇರುವ ಮುಸ್ಲಿಮರ ಸ್ಮಶಾನ ಗೇಟ್ ನಂ.3ರಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಿ.ಆರ್.ಅಶೋಕ್‌ಕುಮಾರ್



ಮೈಸೂರು,ಆ.23– ಮೈಸೂರಿನ ಶಿವರಾಂಪೇಟೆಯ ನಂದ ಮೆಡಿಕಲ್ಸ್ ಮಾಲೀಕ ಹಾಗೂ ಮೈಸೂರು ವಿಜಯನಗರ 2ನೇ ಹಂತದ ನಿವಾಸಿ ಪಿ.ಆರ್.ಅಶೋಕ್‌ಕುಮಾರ್ (71) ಶನಿವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತ್ನಿ, ಪುತ್ರ, ಸಹೋದರರು, ಸಹೋದರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಶೋಕ್‌ಕುಮಾರ್ ಅವರು, ದಿವಂಗತ ಪಿ.ರಾಮಸ್ವಾಮಿಶೆಟ್ಟಿ ಅವರ ಪುತ್ರ. ಕೆನಡಾದಿಂದ ಮೃತರ ಪುತ್ರ ಬಂದ ಬಳಿಕ ನಾಳೆ (ಆ.24) ವಿಜಯನಗರದ 4ನೇ ಹಂತದ ಮುಕ್ತಿಧಾಮ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.08.2025 ಭಾನುವಾರ, ಮಳೆ ನಕ್ಷತ್ರ: ಮಖ 17.08.2025 ರಿಂದ 30.08.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪುಬ್ಬ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 9 ರಿಂದ ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಹೈಪೋಥೈರಾಯ್ಡಿಸಮ್‌ಗೆ ಚಿಕಿತ್ಸಾ ಶಿಬಿರ, ಮಧುಮೇಹದ ಗಾಯಗಳಿಗೆ ಚಿಕಿತ್ಸೆ, ಮೈಗ್ರೇನ್‌ಗೆ ಪರಿಹಾರ ಹಾಗೂ ಆಕ್ಯುಪಂಕ್ಚರ್ ಚಿಕಿತ್ಸೆ, ಎಲ್ಲಾ ತರಹದ ತಲೆನೋವಿಗೆ ಚಿಕಿತ್ಸೆ, ಆರ್ಥರೈಟಿಸ್‌ಗೆ, ಕುತ್ತಿಗೆ ನೋವು ಮತ್ತು ಭುಜದ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸಯಾಟೀಕ, ಗೃಧ್ರಸಿ ರೋಗದ ಚಿಕಿತ್ಸಾ ಶಿಬಿರ, ವರ್ಷಾ ಬಸ್ತಿ ಚಿಕಿತ್ಸಾ ಶಿಬಿರ, ಸ್ಥಳ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಬೀಜ ಗ್ರಂಥಿ ದೋಷ, ಮಕ್ಕಳಲ್ಲಿ ಕಂಡು ಬರುವ ಕೆಮ್ಮು, ಅಸ್ತಮಾ, ಬೆನ್ನುನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷದ್ :** ಬಹುಭಾಷಾ ದೇಶಭಕ್ತಿ ಗೀತ ಗಾಯನ ಸ್ಪರ್ಧೆ, ಬೆಳಗ್ಗೆ 10.15ಕ್ಕೆ ಉದ್ಘಾಟನೆ : ಉದ್ಯಮಿ ಜಗನ್ನಾಥ್ ಶೆಣೈ, ಉಪಸ್ಥಿತರು : ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ್ ವಿ. ಭೈರಿ, ಅಭಾಸಾಪ ಅಧ್ಯಕ್ಷ ಎಸ್. ಸುಬ್ರಹ್ಮಣ್ಯ, ಪ್ರಾಂತ ಸಂಪರ್ಕ ಪ್ರಮುಖ ಡಾ. ವಿ. ರಂಗನಾಥ್, ಮಧ್ಯಾಹ್ನ 4ಕ್ಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಪ್ರಾಂತ ಸಂಪರ್ಕ ಪ್ರಮುಖ ಡಾ. ವಿ. ರಂಗನಾಥ್, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಹೋಟೆಲ್ ಮಾಲೀಕರ ಸಂಘದ ಉಪಾಧ್ಯಕ್ಷ ರವಿಶಾಸ್ತ್ರೀ, ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ.ಕೆ. ಹನುಮಂತಾಚಾರ್ ಜೋಶಿ, ಪ್ರಾಂತ ಉಪಾಧ್ಯಕ್ಷ ಬೆಳಗೋಡು ರಮೇಶ್ ಭಟ್, ಸ್ಥಳ: ವಿಜಯ ವಿಠ್ಠಲ ಪದವಿಪೂರ್ವ ಕಾಲೇಜು, ಸರಸ್ವತಿಪುರಂ.

■ **ಮೈಸೂರು ಜಿಲ್ಲಾ ಟ್ರಾವೆಲ್ಸ್ ಮಾಲೀಕರ ವಿವಿಧೋದ್ದೇಶ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಸ್ಥಳ: ಮಲೈ ಮಹದೇಶ್ವರ ಮಿನಿ ಫಂಕ್ಷನ್ ಹಾಲ್, ನ್ಯೂ ಕಾಂತರಾಜ ಅರಸ್ ರಸ್ತೆ, ನಿವೇದಿತಾನಗರ, ಬೆಳಗ್ಗೆ 10ಕ್ಕೆ.

■ **ಬಿಲ್ಲವ ಸಂಘ :** ಸಂಘದ ಸದಸ್ಯರು, ಕುಟುಂಬದವರಿಗೆ ಕ್ರೀಡಾಕೂಟ, ಸ್ಥಳ: ರೂಪಾನಗರ, ಬೆಳಗ್ಗೆ 10ಕ್ಕೆ

■ **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನೌಕರರ ಪತ್ತಿನ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಸ್ಥಳ: ಎಂ.ಎಲ್. ವರ್ಧಮಾನಯ್ಯ ಸಭಾಂಗಣ, ಶ್ರೀಹರ್ಷ ರಸ್ತೆ, ಬೆಳಗ್ಗೆ 10ಕ್ಕೆ.

■ **ಅಮೃತ ವಿಶ್ವವಿದ್ಯಾಪೀಠಂ :** 15ನೇ ಪದವಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಇನ್ಫೋಸಿಸ್ ಹಿರಿಯ ಉಪಾಧ್ಯಕ್ಷ ವಿನಾಯಕ ಹೆಗಡೆ, ಮಾತಾ ಅಮೃತಾನಂದಮಯಿ ಮಠದ ಪ್ರಧಾನ ಕಾರ್ಯದರ್ಶಿ ಸಂಪೂಜ್ಯ ಸ್ವಾಮಿ ಪೂರ್ಣಾಮೃತಾನಂದ ಪುರಿ ಅವರಿಂದ ಆಶೀರ್ವಚನ, ಸ್ಥಳ: ಅಮೃತ ವಿಶ್ವವಿದ್ಯಾಪೀಠಂ ಆವರಣ, ಬೋಗಾದಿ 2ನೇ ಹಂತ, ಬೆಳಗ್ಗೆ 10ಕ್ಕೆ.

■ **ಮಾ ಫೌಂಡೇಷನ್ :** ಚಿತ್ರಕಲಾ ಸ್ಪರ್ಧೆ, ನೃತ್ಯ ಸ್ಪರ್ಧೆ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಎಸ್.ಐ. ನಯನ, ಡಾ. ಪೂಜಾ ಜೋಶಿ, ಆರ್ಯನ್, ಆರ್.ಜೆ. ಸುನಿಲ್, ಜಗದೀಶ್, ಡಿ. ಅನಿತಾ, ಪಿ. ಅಭಿಷೇಕ್, ಎಸ್. ರೂಪ, ಚಂದ್ರಕಾಂತ್, ರವಿಕುಮಾರ್, ಪೂಜಾ ಕೇಶವ್, ಸ್ಥಳ: ನಿವೇದಿತಾ ಉದ್ಯಾನವನ, ನಿವೇದಿತಾನಗರ, ಬೆಳಗ್ಗೆ 10ಕ್ಕೆ.

■ **ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ.ಎಸ್. ರುದ್ರಸ್ವಾಮಿ, ಸ್ಥಳ: ನಟರಾಜ ಕಲ್ಯಾಣ ಮಂಟಪ, ಶಂಕರ ಮಠದ ರಸ್ತೆ, ಬೆಳಗ್ಗೆ 10.30ಕ್ಕೆ

■ **ಮೈಸೂರು ವಾಸುದೇವಾಚಾರ್ಯ ಭವನ :** ಹಿರಿಯ ಗಾಯಕ ಡಾ. ಕೆ. ವಾಗೀಶ ಕೃಷ್ಣ ಅವರಿಂದ ಸಂಗೀತ ಗಾಯನ, ವಿದ್ವಾನ್ ಕೇಶವ್ ಮೋಹನಕುಮಾರ್–ವಯೋಲಿನ್, ವಿದ್ವಾನ್ ಮೈಸೂರು ಎ. ರಾಧೇಶ್–ಮೃದಂಗ, ವಿದ್ವಾನ್ ವಿ.ಎಸ್.ರಮೇಶ್–ಮೋರ್ಚಿಂಗ್, ಸ್ಥಳ: ವಾಸುದೇವಾಚಾರ್ಯ ಭವನ, ಬೆಳಗ್ಗೆ 10.30ಕ್ಕೆ

■ **ಜೋಳಿಗೆ ಪ್ರಕಾಶನ ಮತ್ತು ಅಭ್ಯಾಸಿ ಟ್ರಸ್ಟ್, ಚಾಮರಾಜನಗರ :** ಮಂಜು ಕೋಡಿಉಗನೆ ಅವರ ಬೋಧಿ ವೃಕ್ಷದ ಹಾಡು ಕವನ ಸಂಕಲನ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ : ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ, ಅಧ್ಯಕ್ಷತೆ : ಸಂಸ್ಕೃತಿ ಚಿಂತಕ ಬಿ. ಮಹೇಶ್ ಹರವೆ, ಕೃತಿ ಕುರಿತು : ವಿಮರ್ಶಕ ವಿ.ಎಲ್. ನರಸಿಂಹಮೂರ್ತಿ, ಉಪಸ್ಥಿತರು : ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಡಾ. ರವಿಕುಮಾರ್ ಬಾಗಿ, ಲೇಖಕ ಮಂಜು ಕೋಡಿಉಗನೆ, ಅಭ್ಯಾಸಿ ಟ್ರಸ್ಟ್ ಅಧ್ಯಕ್ಷ ಕಿರಣ್ ಗಿರ್ಗಿ, ಸ್ಥಳ : ಶ್ರೀರಂಗ ಸಭಾಂಗಣ, ರಂಗಾಯಣ ಆವರಣ, ಬೆಳಗ್ಗೆ 10.30ಕ್ಕೆ.

■ **ಕೇರಳ ಸಮಾಜ, ಮೈಸೂರು :** ಓಣಂ ಹಬ್ಬ ಆಚರಣೆ ಅಂಗವಾಗಿ ಸಾಂಪ್ರದಾಯಿಕ ಕುತಂಪಲ್ಲಿ ಹ್ಯಾಂಡ್‌ಲೂಮ್ ಫ್ಯಾಬ್ರಿಕ್ಸ್ ಮತ್ತು ಗಾರ್ಮೆಂಟ್ಸ್ ಪ್ರದರ್ಶನ ಮತ್ತು ಮಾರಾಟ, ಉಚಿತ ಹೃದಯ ತಪಾಸಣಾ ಶಿಬಿರ, ಸ್ಥಳ: ಸಮಾಜದ ಸಭಾಂಗಣ, ವಿಜಯನಗರ, ಬೆಳಗ್ಗೆ 10.30 ರಿಂದ.

■ **ಸಂವಹನ : ಪ್ರಕಾಶಕರು, ಮೈಸೂರು, ಕನ್ನಡ ಸಾಹಿತ್ಯ ಕಲಾಕೂಟ :** ಸಾಹಿತಿ ಎಸ್. ರಾಮಪ್ರಸಾದ್ ಅವರ 84ನೇ ಹುಟ್ಟುಹಬ್ಬದ ಸಂಭ್ರಮ ಮತ್ತು ಮೂರು ಕೃತಿಗಳ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ: ಇಸ್ರೋ ವಿಶ್ರಾಂತ ಅಧ್ಯಕ್ಷ ಡಾ.ಎ.ಎಸ್.ಕಿರಣ್‌ಕುಮಾರ್, ಅಧ್ಯಕ್ಷತೆ : ವಿಜ್ಞಾನಿ ಪದ್ಮಶ್ರೀ ಡಾ.ವಿ.ಪ್ರಕಾಶ್, ವಿಶೇಷ ಆಹ್ವಾನಿತರು : ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್, ಕೃತಿಗಳ ಕುರಿತು : ಜವಹರಲಾಲ್ ನೆಹರು ತಾರಾಲಯ ನಿರ್ದೇಶಕ ಡಾ.ಬಿ.ಆರ್. ಗುರುಪ್ರಸಾದ್, ವಿಶ್ರಾಂತ ಅಭಿಲೇಖನಾಧಿಕಾರಿ ಮೋಹನ ವರ್ಣೇಕರ್, ಪ್ರಾಸ್ತಾವಿಕ ನುಡಿ :ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ಪ್ರಕಾಶಕ ಡಿ.ಎನ್. ಲೋಕಪ್ಪ, ಮೈಸೂರು ಸಾಹಿತ್ಯ ದಾಸೋಹ ಪ್ರಕಾಶಕ ಎಂ.ಆರ್. ಆನಂದ್, ಕೃತಿಕಾರ ಎಸ್.ರಾಮಪ್ರಸಾದ್, ಸ್ಥಳ: ರೋಟರಿ ಮೈಸೂರು ಪಶ್ಚಿಮ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಹತ್ತಿರ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ಏಕೀಕರಣ ಟ್ರಸ್ಟ್ :** ಕರ್ನಾಟಕ ಏಕೀಕರಣ ಹೋರಾಟಗಾರರ ಉಪನ್ಯಾಸ ಮಾಲೆ, ಉಪನ್ಯಾಸ : ರಂಗ ಚಿಂತಕ ಎನ್. ಧನಂಜಯ, ಪ್ರಾಸ್ತಾವಿಕ : ಎಸ್. ವಿಶ್ವನಾಥ್, ಅಧ್ಯಕ್ಷತೆ : ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಡಾ. ಸುಜಾತ ಅಕ್ಕಿ, ಸ್ಥಳ: ಚಿಂತನ ಚಾವಡಿ, ಕಲಾಮಂದಿರ ಮುಂಭಾಗ, ಬೆಳಗ್ಗೆ 10.30 ರಿಂದ.

■ **ಪ್ರಗತಿ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ. ರವಿಕುಮಾರ್, ಸ್ಥಳ: ಹೊಯ್ಸಳ ಗಾರ್ಡನ್ ರೆಸ್ಟೋರೆಂಟ್ ಬಾಂಕ್ವೆಟ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ

■ **ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿಯಮಿತ :** ಹಿರಿಯ ಸಹಕಾರಿಗಳ ಸನ್ಮಾನ, ಪ್ರತಿಭಾ ಪುರಸ್ಕಾರ, ಸಾನ್ನಿಧ್ಯ : ಶ್ರೀ ಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮೀಜಿ, ಉದ್ಘಾಟನೆ : ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 11ಕ್ಕೆ.

■ **ಶ್ರೀ ಗುರುಮಲ್ಲೇಶ್ವರ ಗೃಹ ನಿರ್ಮಾಣ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಅಶ್ವಿನ್ ಆರ್. ಪಾಳೇಗಾರ್, ಸ್ಥಳ: ಅನುರಾಗ ಮಕ್ಕಳ ಮನೆ ಒಳ ಆವರಣ, ಶ್ರೀ ಗುರುಮಲ್ಲೇಶ್ವರ ಬಡಾವಣೆ ಹತ್ತಿರ, ಬೆಳಗ್ಗೆ 11ಕ್ಕೆ.

■ **ಮಾಧವ ಕೃಪಾ :** 38ನೇ ವರ್ಷದ ಮಾಧವಕೃಪಾ ಗಣೇಶ ಉತ್ಸವ, ಪರಿಸರ ಸ್ನೇಹಿ ಗಣೇಶ ವಿಗ್ರಹ ತಯಾರಿ ಮತ್ತು ಪ್ರಾತ್ಯಕ್ಷಿಕೆ, ಸ್ಥಳ: ಮಾಧವ ಕೃಪಾ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 3ಕ್ಕೆ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ, ಹೆಬ್ಬಾಳು :** 59ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ, ಮುಖ್ಯ ಅತಿಥಿಗಳು : ಮೈಕ್ಯಾಸ್ ಗ್ರೂಪ್ ಆಫ್ ಇನ್ಸ್‌ಟಿಟ್ಯೂಷನ್ಸ್ ನಿರ್ದೇಶಕ ಡಾ. ಜಿ. ರಾಮಚಂದ್ರನ್, ಕಂಪನಿ ಸೆಕ್ರೆಟರಿ ವಿಶ್ವಾಸ್ ಕೃಷ್ಣ, ನಟ ಕ್ಷಮಾ ಕತ್ವಾರ್, ಕಲಾತ್ಮಕ ನಿರ್ದೇಶಕ ಕೃಪಾ ಬಳಗ, ಎಂ.ವಿ. ಸುಧಾಕೃಷ್ಣ, ವಿದ್ವಾನ್ ಆರ್.ಕೆ. ಪದ್ಮನಾಭ ಅವರಿಂದ ವೀಣಾವಾದನ, ಗುರು ಆರತಿ ಅರುಣ್ ಮತ್ತು ಶ್ರೀ ಗಣೇಶ್ ಸಂಗೀತ ನೃತ್ಯಾಲಯದ ಶಿಷ್ಯಂದಿರಿಂದ ಭರತನಾಟ್ಯ, ಸುಜಾ ಸಂದೀಪ್ ಅವರಿಂದ ಭರತನಾಟ್ಯ, ವಿದುಷಿ ಕೀರ್ತನಾ ಸತೀಶ್ ಕುಮಾರ್ ಮತ್ತು ಅವಿನ್ಯಾ ಕಲಾಕ್ಷೇತ್ರದ ಶಿಷ್ಯಂದಿರಿಂದ ಭರತನಾಟ್ಯ, ಸ್ಥಳ: ಕಲೆಮನೆ ಸಭಾಂಗಣ, ಹೆಬ್ಬಾಳು, ಮಧ್ಯಾಹ್ನ 3.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠ :** ಚಾತುರ್ಮಾಸ್ಯದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ, ವಿದ್ವಾನ್ ಲಕ್ಷ್ಮಣ್ ಮುಕುಂದನ್ ಅವರಿಂದ ವೇದಾಂತ ದೇಶಿಕರ ದೇವನಾಯಕ ಪಂಚಾಶತ್ ಕುರಿತು ಉಪನ್ಯಾಸ, ಸ್ಥಳ: ಶ್ರೀ ಪರಕಾಲ ಮಠ, ಜಗನ್ಮೋಹನ ಅರಮನೆ ಸಮೀಪ, ಸಂಜೆ 6ಕ್ಕೆ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಕೆ. ಕೃಷ್ಣಮೂರ್ತಿ ತುಂಗಾ ಅವರ ನಿರ್ದೇಶನದಲ್ಲಿ ದೇವಿದಾಸರು ವಿರಚಿತ 'ಬಬ್ರುವಾಹನ ಕಾಳಗ' ಯಕ್ಷಗಾನ ರಂಗ ಪ್ರಯೋಗ, ಸ್ಥಳ: ಭೂಮಿಗೀತ ಕಿರುರಂಗ ಮಂದಿರ, ರಂಗಾಯಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ – ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಿ.ಪುಷ್ಪಲತಾ, ಸಿ.ವಿಶ್ವನಾಥ್, ವ್ಯಾಖ್ಯಾನ–ಪ್ರೊ.ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು– ಎಂ.ಎಸ್.ಲಕ್ಷ್ಮೀಶ, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಜೀರ್ಣಾಂಗದ ಆರೋಗ್ಯಕ್ಕೆ ಆಯುರ್ವೇದ ಪರಿಹಾರ ಕುರಿತು ಆಯುರ್ವೇದ ತಜ್ಞರಾದ ಡಾ.ಶ್ರೀಶ ಕೃಷ್ಣ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ– ಹೊಸಕೋಟೆಯ ಶ್ರೀ ಗುರುಮಹಾಂತೇಶ್ವರ ಆಂಗ್ಲ ಮಾಧ್ಯಮ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 KRISH TRISH and Balty boy ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ ಮಾರ್ಗದರ್ಶಿ ಕಲಿಕೆಗೊಂದು ಸೋಪಾನ ಭಾಗವಹಿಸುತ್ತಾರೆ–ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ. ಸಿ. ವೆಂಕಟೇಶ್, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.00 ವನಿತಾ ವಿಹಾರ–ಶಾರದಾ ಗಾನಾಮೃತ ತಂಡದ ಸದಸ್ಯರಿಂದ ಗೌರಿ ಗಣೇಶ ಹಬ್ಬದ ಆಚರಣೆ ಕುರಿತ ಕಾರ್ಯಕ್ರಮ, 12.35 ದೇವರನಾಮ, 12.45 ಜನಪದ ಸಂಗೀತ : ನಾಗಮಂಗಲ ತಾಲೂಕು ಕಂಚಿನ ಕೋಟೆಯ ಅನ್ನಪೂರ್ಣ ಹಾಗೂ ಸಂಗಡಿಗರಿಂದ ಭೈರವನ ಹಾಡು, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಎಸ್.ಪ್ರವೀಣ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ ಧೈರ್ಯಲಕ್ಷ್ಮಿ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ: ಮೈಸೂರು ಎಂ. ನಾಗರಾಜ್ ಅವರ ವೈಯೋಲಿನ್ ಹಾಗೂ ಪ್ರವೀಣ್ ಗೋಡ್ಖಿಂಡಿ ಅವರ ಬಾನ್ಸುರಿ ವಾದನದ ಜುಗಲ್ ಬಂದಿ 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವ ಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ–ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಫಸ್ಟ್ ಫಿಲ್ಮ್, ಪ್ರಸ್ತುತಿ: ಎಸ್.ಶ್ರೀಮಾನ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಕಿರಗಸೂರು ರಾಜಪ್ಪ, 9.30 ರಾಷ್ಟ್ರೀಯ ವಿಜ್ಞಾನ ಸಂಚಿಕೆ–ರೇಡಿಯೋ ಸ್ಕೋಪ್, 10.00 ರವಿವಾಸರೀಯ ಅಖಿಲ ಭಾರತ ಸಂಗೀತ ಸಭಾ, ವಿದುಷಿ ಮಂಜುಳ ಮೃಣಾಲಿನಿ – ವಯೋಲಿನ್ ವಾದನ

ಈಗ ಮುಸುಕುಧಾರಿ ಮುಖ್ಯ ಅಲ್ಲ; ಇದರ ಹಿಂದೆ ಇರೋರ್‍ಯಾರು!!



- ಧರ್ಮಸ್ಥಳಕ್ಕೆ ಕಾಂಗ್ರೆಸ್ ಸರ್ಕಾರ ಮೋಸ ಮಾಡಿದೆ
- ಇದನ್ನು ಎನ್‌ಐಎ ತನಿಖೆಗೆ ನೀಡದೇ ಇದ್ದರೆ ಪ್ರಕರಣದಲ್ಲಿ ಕಾಂಗ್ರೆಸ್ ಇದೆ ಎಂದರ್ಥ

ಸಮಗ್ರ ತನಿಖೆಯಾಗಬೇಕು; ವಿಪಕ್ಷ ನಾಯಕ ಆರ್.ಅಶೋಕ್ ಆಗ್ರಹ

ಬೆಂಗಳೂರು, ಆ.23– ಈಗ ಮುಸುಕು ಧಾರಿ ಮುಖ್ಯ ಅಲ್ಲ, ಇದರ ಹಿಂದೆ ಇರೋರು ಯಾರು? ಎಂಬುದರ ಬಗ್ಗೆ ತನಿಖೆ ಆಗಬೇಕು ಎಂದು ವಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದ್ದಾರೆ.

ಎಸ್‌ಐಟಿಯಿಂದ ಮಾಸ್ಕ್ ಮ್ಯಾನ್ ಬಂಧನದ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳ ಕೇಸ್ ಆದಾಗಿನಿಂದ ಷಡ್ಯಂತ್ರ ಎಂದು ಹೇಳಿದ್ದೆವು. ಸರ್ಕಾರ ಆತುರದ ನಿರ್ಧಾರ ಮಾಡಿತು. ದೂರು ಕೊಟ್ಟವನ ಪೂರ್ವಾಪರ ನೋಡದೆ, ಯೋಚನೆಯನ್ನು ಮಾಡದೇ ಸಿಎಂ ಜೊತೆ ಇರುವ ಪ್ರಗತಿಪರರ ಮಾತು ಕೇಳಿ ಎಸ್‌ಐಟಿ ರಚನೆ ಮಾಡಿದರು. ಎಸ್‌ಐಟಿ ತನಿಖೆಯಿಂದ ಬುರುಡೆ ಬಂತು ಅಷ್ಟೇ. ಸಿಎಂ ಕಾಮನ್ ಸೆನ್ಸ್ ಉಪಯೋಗ ಮಾಡಬೇಕಿತ್ತು. ಧರ್ಮಸ್ಥಳದ ಭಕ್ತರ ಭಾವನೆಗೆ ನೋವು ಆಗಿದೆ. ಇದನ್ನು ಸಿದ್ದರಾಮಯ್ಯ ವಾಪಸ್ ಕೊಡಲು ಆಗುತ್ತಾ. ಇದು ಸರ್ಕಾರದ ತಪ್ಪು ಎಂದಾಯಿತು. ಮಾಸ್ಕ್ ಮ್ಯಾನ್ ಬಗ್ಗೆ ಮೊದಲೇ ತನಿಖೆ ಮಾಡಿದ್ದರೆ ಮುಗಿದು ಹೋಗುತ್ತಿತ್ತು ಎಂದು ಕಿಡಿಕಾರಿದರು.



ಆರ್.ಅಶೋಕ್

ಅನನ್ಯ ಭಟ್ ಅವರದು ಸುಳ್ಳು ಅಂತ ಗೊತ್ತಾಗಿದೆ. ಎಲ್ಲರೂ ದುಡ್ಡು ತೆಗೆದುಕೊಂಡು ಕೆಲಸ ಮಾಡಿದ್ದಾರೆ. ಮಾಸ್ಕ್ ಮ್ಯಾನ್ ಹಿಂದೆ ಇರೋದು ಸಮೀರ್. ಸಮೀರ್ ಇದರ ಸೂತ್ರಧಾರ. ಎಲ್ಲರನ್ನು ಜೊತೆಗಾರರನ್ನಾಗಿ ಮಾಡಿಕೊಳ್ಳುತ್ತಾನೆ, ಪ್ರಗತಿಪರರ ಟೀಂ ಸೆಟಪ್ ಮಾಡಿಕೊಳ್ಳುತ್ತಾನೆ. ಡ್ರಾಮಾ ಮಾಡಲು ಮಾಸ್ಕ್ ಮ್ಯಾನ್, ಅನನ್ಯ ಭಟ್ ಹುಡುಕುತ್ತಾರೆ. ತನಿಖೆ ಹೇಗೆ ಮಾಡಬೇಕು ಎಂದು ಇವರೇ ನಿರ್ಧಾರ ಮಾಡುತ್ತಾರೆ. ಭದ್ರತೆ ಕೊಡಬೇಕು ಎಂದು ಹೇಳುತ್ತಾರೆ. 25 ದಿನ ಮಾಸ್ಕ್ ಮ್ಯಾನ್‌ಗೆ ಸಿಎಂಗಿಂತ ಹೈ ಸೆಕ್ಯೂರಿಟಿ ಯಾಕೆ ಕೊಟ್ಟರು ಎಂದು ಪ್ರಶ್ನಿಸಿದರು.

ಮಂಜುನಾಥನನ್ನು ಅವಹೇಳನ ಮಾಡಬೇಕು. ಇದು ಮತಾಂತರ ಷಡ್ಯಂತ್ರ, ಇಲ್ಲದಿದ್ದರೆ ಸಮೀರ್ ಯಾಕೆ ಬರುತ್ತಾರೆ, ಧರ್ಮಸ್ಥಳದ ಬಗ್ಗೆ ಕೇಳೋಕೆ ಇವರು ಯಾರು? ಬೇಕಾದಷ್ಟು ಮಸೀದಿಗಳ ಮೇಲೆ ದೂರು ಬಂದಿದೆ. ಯಾವುದಾದರೂ ಮಸೀದಿ ಅಗೆದರೇ? ಹಿಂದೂಗಳನ್ನು ಟಾರ್ಗೆಟ್ ಮಾಡುವುದು ಸಿಎಂ ಮತ್ತು ಅವರ ಸಂಪುಟದ ಕೆಲಸ. ಇಷ್ಟೆಲ್ಲಾ ಕೇಸ್ ಆಗಲು ಸಿಎಂ ಕಾರಣ. ಪೊಲೀಸರ ಕೆಲಸ ಬಿಟ್ಟು ಬುರುಡೆ ಹುಡುಕಲು ಬಿಟ್ಟರು. ತನಿಖೆಗೆ ಕೋಟ್ಯಂತರ ರೂಪಾಯಿ ಖರ್ಚು ಆಗಿದೆ. ಅದನ್ನು ಯಾರು ಕೊಡುತ್ತಾರೆ, ಬೆಟ್ಟ ಅಗೆದು ಇಲಿಯೂ ಸಿಗಲಿಲ್ಲ. ಕರ್ನಾಟಕದ ಇತಿಹಾಸದಲ್ಲಿ ಇಂತಹ ಪ್ರಹಸನ ಆಗಿರಲಿಲ್ಲ. ಕಾಂಗ್ರೆಸ್ ಪಕ್ಷ ರಾಜ್ಯದ ಜನರ ಕ್ಷಮೆ ಕೇಳಬೇಕು. ಬಿಜೆಪಿ ಅವರು ಮೊದಲು ಮಾತಾಡಿಲ್ಲ ಅಂದರು. ನಾನೇ ಮೈಸೂರಿನಲ್ಲಿ ಮಾತಾಡಿದ್ದೆ . ತನಿಖೆ ಮಾಡಿ ಇದು ಷಡ್ಯಂತ್ರ ಎಂದು ಹೇಳಿದ್ದೆ. ಬಿಜೆಪಿ ಹೋರಾಟ ಮಾಡಿರಲಿಲ್ಲ ಅಂದರೆ ಬುರುಡೆ ತಂದು ಇದೇ ನಿಜ ಅನ್ನುತ್ತಿದ್ದರು. ನಾವು ಹೋರಾಟ ಮಾಡಿದ್ದಕ್ಕೆ ಇದು ಇಲ್ಲಿಗೆ ಬಂದು ನಿಂತಿದೆ. ಧರ್ಮಸ್ಥಳಕ್ಕೆ ಕಾಂಗ್ರೆಸ್ ಪಕ್ಷ ಮೋಸ ಮಾಡಿದೆ ಎಂದು ವಾಗ್ದಾಳಿ ನಡೆಸಿದರು.

ಮಾಸ್ಕ್ ಮ್ಯಾನ್‌ಗೆ ಆವಿಷ ಪೊಡ್ಡಿದ್ದಾರೆ ಎಂದು ಅಸೆಂಬ್ಲಿಯಲ್ಲಿ ನಾನು ಹೇಳಿದ್ದೆ. ಈಗ ಆತನ ಬಂಧನ ವಾಗಿದೆ. ಮಾಸ್ಕ್ ಮ್ಯಾನ್ ನೋಡಿದರೆ ಪಾಪ ಅನ್ನಿಸುತ್ತೆ. ಇವರ ಹಿಂದೆ ಯಾರು ಇದ್ದಾರೆ ಅಂತ ತಿಳಿಯಲು ಎಸ್‌ಐಟಿ ಮಾಡಿ. ಕಾಂಗ್ರೆಸ್, ಸಿದ್ದರಾಮಯ್ಯ, ಡಿಕೆಶಿಗೆ ಸತ್ಯ ಹೊರ ಬರುವ ಮನಸ್ಸು ಇದ್ದರೆ ಎನ್‌ಐಎ ತನಿಖೆಗೆ ಕೊಡಿ. ಇವರು ಎನ್‌ಐಎಗೆ ಕೊಡಲಿಲ್ಲ ಅಂದರೆ ಕಾಂಗ್ರೆಸ್ ಪಾತ್ರ ಇದೆ ಎಂದು ಗೊತ್ತಾಗುತ್ತದೆ ಎಂದು ಆರೋಪಿಸಿದರು.



ನಿರೀಕ್ಷಣಾ ಜಾಮೀನಿನ ಬಳಿಕ ಪೊಲೀಸ್ ಸಮನ್ಸ್ ಜಾರಿ

ಯೂಟ್ಯೂಬರ್ ಸಮೀರ್‌ಗೆ ಬಂಧನ ಭೀತಿ

ಮಂಗಳೂರು, ಆ.23– ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ಪಡೆದಿರುವ ಯೂಟ್ಯೂಬರ್ ಎಂ.ಡಿ.ಸಮೀರ್‌ಗೆ ಪೊಲೀಸರು ಸಮನ್ಸ್ ಜಾರಿ ಮಾಡಿದ್ದು, ಆ.24 ರಂದು ತನಿಖಾಧಿಕಾರಿಯ ಮುಂದೆ ಹಾಜರಾಗುವಂತೆ ಸೂಚಿಸಿದ್ದಾರೆ.



ಸಮೀರ್ ಇದೀಗ ವಿಶೇಷ ತನಿಖಾ ತಂಡದ (ಎಸ್‌ಐಟಿ) ಪರಿಶೀಲನೆಯಲ್ಲಿದ್ದು ಬಂಧನದ ಭೀತಿ ಎದುರಿಸುತ್ತಿದ್ದಾರೆ.

ಮಂಗಳೂರು ನ್ಯಾಯಾಲಯವು ಸಮೀರ್ ಅವರಿಗೆ ಆ.21 ರಂದು ನಿರೀಕ್ಷಣಾ ಜಾಮೀನು ನೀಡಿದ ನಂತರ ಆಧಾರ್‌ನಲ್ಲಿರುವ ಅವರ ಬಳ್ಳಾರಿ ನಿವಾಸಕ್ಕೆ ಪೊಲೀಸರು ಸಮನ್ಸ್ ಅನ್ನು ಅಂಟಿಸಿದ್ದಾರೆ.

ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಸಮೀರ್ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 192 (ಗಲಭೆಯನ್ನು ಉಂಟು ಮಾಡುವ ಉದ್ದೇಶದಿಂದ ಉದ್ದೇಶಪೂರ್ವಕವಾಗಿ ಪ್ರಚೋದನೆ ನೀಡುವುದು), 240 (ಸುಳ್ಳು ಮಾಹಿತಿ ನೀಡುವುದು) ಮತ್ತು 353(1)(ಬಿ) (ಸಾರ್ವಜನಿಕ ಕಿರುಕುಳಕ್ಕೆ ಕಾರಣವಾಗುವ ಹೇಳಿಕೆಗಳು) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಪೊಲೀಸರ ಪ್ರಕಾರ ಸಮೀರ್ ಪ್ರಕರಣಕ್ಕೆ ಸಂಬಂಧಿಸಿದ ಆರೋಪಗಳಿರುವ ವೀಡಿಯೊವನ್ನು ಅಪ್‌ಲೋಡ್ ಮಾಡಿದ್ದಾರೆ. ಹಾಲಿ ನಡೆಯುತ್ತಿರುವ ತನಿಖೆಯ ಭಾಗವಾಗಿ ಎಸ್‌ಐಟಿ ಅವರ ಪಾತ್ರವನ್ನು ಸಹ ಪರಿಶೀಲಿಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಧಿಕಾರಿಗಳು ಅವರ ಇತ್ತೀಚಿನ ವಿಷಯವು ಪ್ರಚೋದನೆ ಮತ್ತು ತಪ್ಪು ಮಾಹಿತಿಯ ಹರಡುವಿಕೆಗೆ ಕಾರಣವಾಗಿದ್ದು, ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ತರುವ ಸಾಧ್ಯತೆಯಿದೆ ಎಂದು ಆರೋಪಿಸಿದ್ದಾರೆ. ಹೀಗಾಗಿ ಯಾವುದೇ ಕ್ಷಣದಲ್ಲೂ ಎಂಡಿ ಸಮೀರ್‌ನನ್ನು ಪೊಲೀಸರು ವಶಕ್ಕೆ ಪಡೆಯುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಮಾಸ್ಕ್‌ಮ್ಯಾನ್ ಬಂಧನ ಒಳ್ಳೆಯ ಬೆಳವಣಿಗೆ; ಆತನಿಗೆ ಮಂಪರು ಪರೀಕ್ಷೆ ಆಗಲಿ

ಗಿರೀಶ್ ಮಟ್ಟಣ್ಣನವರ್ ಪ್ರತಿಕ್ರಿಯೆ

ಬೆಳ್ತಂಗಡಿ, ಆ.23– ಧರ್ಮಸ್ಥಳದಲ್ಲಿ ಶವ ಹೂತು ಹಾಕಿದ್ದೇನೆ ಎಂದು ದೂರು ನೀಡಿದ್ದ ಮಾಸ್ಕ್‌ಮ್ಯಾನ್‌ನನ್ನು ಬಂಧಿಸಿರುವುದಕ್ಕೆ ಪ್ರತಿಕ್ರಿಯೆ ನೀಡಿದ ಸೌಜನ್ಯ ಪರ ಹೋರಾಟಗಾರ ಗಿರೀಶ್ ಮಟ್ಟಣ್ಣನವರ್, ಇದು ಒಳ್ಳೆಯ ಬೆಳವಣಿಗೆ, ಮಾಸ್ಕ್‌ಮ್ಯಾನ್ ಮಂಪರು ಪರೀಕ್ಷೆ ನಡೆಸಬೇಕು ಎಂದಿದ್ದಾರೆ.



ಬೆಳ್ತಂಗಡಿ ಪೊಲೀಸ್ ಠಾಣೆ ಮುಂಭಾಗ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲದಕ್ಕೂ ಎಸ್‌ಐಟಿ ಅಧಿಕಾರಿಗಳು ಉತ್ತರ ಕೊಡಬೇಕು. ದೂರುದಾರನ ಬಂಧನ ಆಗಿದೆ. ಅದನ್ನು ನಾವು ಸ್ವಾಗತಿಸುತ್ತೇವೆ. ಅದು ಒಳ್ಳೆಯ ಬೆಳವಣಿಗೆ ಎಂದರು.

ಎಸ್‌ಐಟಿ ತನಿಖೆಯ ನಿರ್ಧಾರ ಮಾಡುವುದಕ್ಕೆ ಸಂಪೂರ್ಣ ಅಧಿಕಾರ ಹೊಂದಿದೆ. ಆ ವ್ಯಕ್ತಿಗೆ ಮಂಪರು ಪರೀಕ್ಷೆ ಕೂಡಾ ಮಾಡಬೇಕು. ಯಾಕೆಂದರೆ ದೂರಿನಲ್ಲೇ ಮಂಪರು ಪರೀಕ್ಷೆ ಬಗ್ಗೆ ಉಲ್ಲೇಖವಿದೆ. ಆದರೆ ಅದು ಪ್ರಾರಂಭಿಕ ಹಂತದಲ್ಲಿ ಬೇಡ ಎಂಬುದಿತ್ತು. ತನಿಖೆ ಈಗ ಒಂದು ಹಂತಕ್ಕೆ ಬಂದಿದೆ. ಹಲವು ಕಡೆ ಅಗೆದಿದ್ದಾರೆ. ಹೀಗಾಗಿ ಈ ಹಂತದಲ್ಲಿ ಮಂಪರು ಪರೀಕ್ಷೆ ಮಾಡಿ ಸತ್ಯಾಸತ್ಯತೆಯನ್ನು ತಿಳಿಸುವುದು ಎಸ್‌ಐಟಿ ಜವಾಬ್ದಾರಿಯಾಗಿದೆ ಎಂದರು. ಹೀಗಾಗಿ ಈ ಬೆಳವಣಿಗೆಯನ್ನು ನಾವು ಸ್ವಾಗತಿಸುತ್ತೇವೆ. ಇದು ಆಗಬೇಕಿತ್ತು ಎಂದು ಅಭಿಪ್ರಾಯಪಟ್ಟರು.

ಯಾರು ಸಂಚು ಮಾಡಿದ್ದಾರೆಂದು ಎಸ್‌ಐಟಿಯವರು ಹೇಳಬೇಕು. ಪ್ರಕರಣ ಮುಚ್ಚಿಹಾಕಲು, ಎಸ್‌ಐಟಿ ತನಿಖೆ ದಿಕ್ಕುತಪ್ಪಿಸಲು ಸಂಚು ಇದೆ ಎಂದು ನನಗೂ ಅನಿಸುತ್ತದೆ. ಈ ಪ್ರಕರಣದಲ್ಲಿ ನನ್ನನ್ನು ತನಿಖೆಗೆ ಕರೆದರೆ ಹಾಜರಾಗುತ್ತೇನೆ ಎಂದ ಅವರು, ಚಿನ್ನಯ್ಯ ಎಷ್ಟು ವರ್ಷದ ಪರಿಚಯ ಎಂದು ಕೇಳಿದಾಗ ಇದನ್ನು ಎಸ್‌ಐಟಿಗೆ ಹೇಳುತ್ತೇನೆ ಎಂದು ಹೇಳಿದ್ದಾರೆ.

ಸುಜಾತಾ ಭಟ್ ಪ್ರಕರಣ: ಸುಜಾತಾ ಭಟ್ ಬಗ್ಗೆ ಅರ್ಧ ಸತ್ಯ ಅಷ್ಟೆ ಹುಡುಕಲಾಗುತ್ತಿದೆ. ಅವರ ಆಸ್ತಿ ಕಬಳಿಸಿರುವ ಬಗ್ಗೆ ಯಾಕೆ ತನಿಖೆ ನಡೆಯುತ್ತಿಲ್ಲ? ಅದನ್ನು ವಿಚಾರಿಸಲಿ. ಸುಜಾತಾ ಭಟ್ ಅವರನ್ನು ಪದೇ ಪದೆ ಮಾಧ್ಯಮ ವಿಚಾರಣೆ ನಡೆಸುವುದು ಬೇಡ, ಅವರನ್ನು ಅವರ ಪಾಡಿಗೆ ಬಿಟ್ಟುಬಿಡಿ ಎಂದು ಕೇಳಿಕೊಂಡಿದ್ದಾರೆ. ಎಲ್ಲದಕ್ಕೂ ಎಸ್‌ಐಟಿ ಉತ್ತರ ಕೊಡಲಿದೆ. ಸೌಜನ್ಯ ಪರ ಹೋರಾಟಗಾರರು ಯಾರೂ ಎಸ್‌ಐಟಿ ವಿರುದ್ಧ ಸಿಟ್ಟಾಗುವುದು ಬೇಡ. ಎಸ್‌ಐಟಿಗೆ ಪೂರ್ತಿಯಾಗಿ ಕೆಲಸ ಮಾಡಲು ಬಿಡಿ ಎಂದು ಹೇಳಿದ್ದಾರೆ.

ಬಿ.ಎಲ್. ಸಂತೋಷ್ ವಿರುದ್ಧ ಹೇಳಿಕೆ: ಮಹೇಶ್ ತಿಮರೋಡಿಗೆ ಷರತ್ತು ಬದ್ಧ ಜಾಮೀನು

ಧರ್ಮಸ್ಥಳ ಪ್ರಕರಣದಲ್ಲಿ ಮತ್ತೆ ಬಂಧನದ ಭೀತಿ

ಉಡುಪಿ, ಆ.23– ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದ ಹಿನ್ನೆಲೆಯಲ್ಲಿ ಕಳೆದೆರಡು ದಿನಗಳಿಂದ ನ್ಯಾಯಾಂಗ ಬಂಧನದಲ್ಲಿದ್ದ ಮಹೇಶ್ ಶೆಟ್ಟಿ ತಿಮರೋಡಿ ಅವರಿಗೆ ಇಂದು ಉಡುಪಿ ಜಿಲ್ಲಾ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.



ಇದಕ್ಕೂ ಮುನ್ನ ಉಡುಪಿ ನ್ಯಾಯಾಲಯದಲ್ಲಿ ಆರೋಪಿ ಮಹೇಶ್ ಶೆಟ್ಟಿ ತಿಮರೋಡಿ ಪರ ವಾದ ಮಂಡಿಸಿದ ವಕೀಲರು, ಬಂಧಿಸಿದ ಪ್ರಕ್ರಿಯೆ ಕ್ರಮಬದ್ಧವಾಗಿಲ್ಲ. ಪ್ರಥಮ ನೋಟಿಸ್ ನೀಡಿ ಅದರ ಅವಧಿ ಮುಗಿಯುವ ಮುನ್ನವೇ ಎರಡನೇ ನೋಟಿಸ್ ನೀಡಿದ್ದಾರೆ. ತಿಮರೋಡಿಯವರ ಹೇಳಿಕೆಯಿಂದ ಯಾವುದೇ ಕೋಮು ಗಲಭೆಗಳು ಆಗಿಲ್ಲ. ತಿಮರೋಡಿ ಕೂಡ ಓರ್ವ ಹಿಂದೂ ನಾಯಕ. ಇನ್ನೊಂದು ಧರ್ಮವನ್ನು ಅವರು ದೂಷಿಸಿಲ್ಲ ಎಂದು ಹೇಳಿದರು. ಈ ವೇಳೆ ಪ್ರತಿವಾದಿಗಳಿಂದ ಆಕ್ಷೇಪ ಮಾಡಲಾಯಿತು. ಆದರೆ, ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರಾದ ನಾಗೇಶ್, ಮಹೇಶ್ ಶೆಟ್ಟಿ ತಿಮರೋಡಿಗೆ ಷರತ್ತುಬದ್ಧ ಜಾಮೀನು ನೀಡಿ ಆದೇಶ ಹೊರಡಿಸಿದ್ದಾರೆ. ಮುಂದೆ ಈ ರೀತಿ ಮಾಡದಂತೆ ಎಚ್ಚರಿಕೆ ನೀಡಿ ಜಾಮೀನು ನೀಡಲಾಗಿದೆ..

ಮತ್ತೊಂದೆಡೆ ಧರ್ಮಸ್ಥಳ ಪ್ರಕರಣದಲ್ಲಿ ಮಹೇಶ್ ತಿಮರೋಡಿ ಮನೆಯಲ್ಲಿ ನಾಲ್ಕು ದಿನಗಳ ಕಾಲ ನಾನು ಇದ್ದಿದ್ದು ನಿಜ ಎಂದು ಸುಜಾತ ಭಟ್ ಹೇಳಿಕೆ ನೀಡಿದ್ದು, ಇದರಲ್ಲಿ ಮತ್ತೆ ಬಂಧನಕ್ಕೊಳಗಾಗುವ ಸಾಧ್ಯತೆಯೂ ಇದೆ.

ಧರ್ಮದ ವಿಚಾರದಲ್ಲಿ ರಾಜಕೀಯ ಬೇಡ, ನಾವು ಯಾರ ಪರವೂ ಇಲ್ಲ; ಡಿ.ಕೆ ಶಿವಕುಮಾರ್

ಬೆಂಗಳೂರು, ಆ.23– ನಾವು ಯಾರ ಪರವೂ ಇಲ್ಲ, ನ್ಯಾಯದ ಪರವಷ್ಟೇ. ಧರ್ಮದ ವಿಚಾರದಲ್ಲಿ ರಾಜಕೀಯ ಬೇಡ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶನಿವಾರ ಹೇಳಿದ್ದಾರೆ. ಸದಾಶಿವ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳ ಪ್ರಕರಣದಲ್ಲಿ ಸಾಕ್ಷಿ ದೂರುದಾರನ ಬಂಧನವಾಗಿದೆ. ಈ ಪ್ರಕರಣದ ಬಗ್ಗೆ ಬಿಜೆಪಿಯವರು ಏನೂ ಮಾತಾಡಿರಲಿಲ್ಲ. ಬಿಜೆಪಿಯವರು ಅಡ್ಡಗೋಡೆ ಮೇಲೆ ದೀಪ ಇಡುವ ಕೆಲಸ ಮಾಡುತ್ತಿದ್ದರು. ಷಡ್ಯಂತ್ರದ ಕುರಿತು ನಾನು ಪ್ರಸ್ತಾವನೆ ಮಾಡಿದ ಮೇಲೆ ಅವರು ಮಾತನಾಡಿದ್ದಾರೆಂದು ಹೇಳಿದರು.



ಎಸ್‌ಐಟಿ ತನಿಖೆಯನ್ನು ಧರ್ಮಸ್ಥಳದ ಕುಟುಂಬದವರೇ ಸ್ವಾಗತಿಸಿದ್ದಾರೆ. ಸ್ವತಃ ಅವರ ಕುಟುಂಬದವರೇ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ವಿಷಯ ತಿಳಿಸಿದ್ದಾರೆ. ಇನ್ನು ಇದನ್ನು ಅಧಿವೇಶನದಲ್ಲಿ ಬಾಲಕೃಷ್ಣ ಅವರು ಮಾತನಾಡಿದ್ದಾರೆ ಎಂದು ತಿಳಿಸಿದರು., ಧರ್ಮಸ್ಥಳದ ವಿಚಾರದಲ್ಲಿ ಯಾರ್‍ಯಾರ ತಪ್ಪಿದೆ ಅವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಸರ್ಕಾರ, ಗೃಹ ಸಚಿವರು, ಮುಖ್ಯಮಂತ್ರಿಗಳು ಹೇಳಿದ್ದಾರೆ. ಆ ಕೆಲಸ ನಾವು ಮಾಡುತ್ತಿದ್ದೇವೆ. ಎಸ್‌ಐಟಿ ತನಿಖೆ ನಡೆಯುತ್ತಿದೆ. ನಾವು ನ್ಯಾಯದ ಪರ. ಅವರ ಪರನೂ ಅಲ್ಲ, ಇವರ ಪರನೂ ಅಲ್ಲ. ಆದರೆ, ಧರ್ಮದ ರಾಜಕಾರಣ ಮಾಡಬೇಡಿ ಎಂದರು.

ವಸಂತಿ ಸಾವಿನ ಹಿಂದೆ ಸುಜಾತ ಭಟ್ ಕೈವಾಡ; ಸಹೋದರನಿಂದ ತನಿಖೆಗೆ ಆಗ್ರಹ

ವಿರಾಜಪೇಟೆ, ಆ.23– ನನ್ನ ತಂಗಿಯ ಸಾವಿನ ಹಿಂದೆ ಸುಜಾತ ಭಟ್ ಕೈವಾಡ ಇರಬಹುದು. ಅದನ್ನು ಸರಿಯಾಗಿ ತನಿಖೆ ಮಾಡಿ ಎಂದು ವಸಂತಿಯ ಸಹೋದರ ವಿಜಯ್ ಆಗ್ರಹಿಸಿದ್ದಾರೆ.



ವಿರಾಜಪೇಟೆಯಲ್ಲಿ ಇಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ವಸಂತಿಯ ಮತ್ತೊಂದು ಫೋಟೋವನ್ನು ತೋರಿಸಿದ್ದಾರೆ. ಶ್ರೀವತ್ಸ ಅವರೊಂದಿಗೆ ವಸಂತಿ ವಿವಾಹವಾಗಿದ್ದ ಮದುವೆ ಆಮಂತ್ರಣ ಪತ್ರಿಕೆಯನ್ನು ತೋರಿಸಿದ್ದಾರೆ. ಸುಜಾತ ಭಟ್ ಎರಡು ವರ್ಷಗಳ ಹಿಂದೆ ವಿರಾಜಪೇಟೆಗೆ ಬಂದು ನನ್ನ ತಂಗಿಯ ಡೆತ್ ಸರ್ಟಿಫಿಕೇಟ್ ತೆಗೆದು ಕೊಂಡಿದ್ದಾಳೆ. ಆಕೆ ಯಾವ ಉದ್ದೇಶಕ್ಕಾಗಿ ಡೆತ್ ಸರ್ಟಿಫಿಕೇಟ್ ತೆಗೆದುಕೊಂಡಿದ್ದಾಳೆ ಎಂದು ಪ್ರಶ್ನಿಸಿದ್ದಾರೆ. ನನ್ನ ತಂಗಿ ಸಾವಿಗೀಡಾದಾಗ ಆಕೆಯ ಖಾತೆಯಲ್ಲೂ ಸಾಕಷ್ಟು ಹಣವಿತ್ತು ಅದನ್ನೆಲ್ಲಾ ಆಕೆ ಕ್ಲೈಂ ಮಾಡಿಕೊಳ್ಳುವುದಕ್ಕಾಗಿ ಡೆತ್ ಸರ್ಟಿಫಿಕೇಟ್ ತೆಗೆದುಕೊಂಡು ಹೋಗಿರಬಹುದು ಎಂದು ವಿಜಯ್ ಆರೋಪಿಸಿದ್ದಾರೆ. 2004 ರಿಂದಲೇ ಸುಜಾತ ಭಟ್‌ಗೆ ರಂಗಪ್ರಸಾದ್ ಪರಿಚಯವಿತ್ತು ಶ್ರೀವತ್ಸ ಅವರನ್ನು ಮದುವೆ ಆದ ಬಳಿಕ ನನ್ನ ತಂಗಿ ಸಾವನ್ನಪ್ಪಿದ್ದು 2007ರಲ್ಲಿ. ಅಂದ ಮೇಲೆ ನನ್ನ ತಂಗಿಯ ಸಾವಿನಲ್ಲಿ ಸುಜಾತ ಭಟ್ ಕೈವಾಡವಿದೆ ಆಕೆಯನ್ನು ಸರಿಯಾಗಿ ತನಿಖೆ ಮಾಡಿದರೆ ಎಲ್ಲವೂ ಬಯಲಾಗುತ್ತದೆ ಎಂದರು.

ಧರ್ಮಸ್ಥಳ ಪ್ರಕರಣದಲ್ಲಿ ಒಂದು ಗುಂಪಿನ ಕೈವಾಡವಂತೂ ಇದೆ

ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ ಆದ ಶಾಸಕ ಎ.ಎಸ್. ಪೊನ್ನಣ್ಣ ಪ್ರತಿಕ್ರಿಯೆ

ಮೈಸೂರು, ಆ.23(ಜಿಎ)–ಧರ್ಮಸ್ಥಳ ಪ್ರಕರಣದಲ್ಲಿ ಯಾವುದೋ ಒಂದು ಗುಂಪಿನ ಕೈವಾಡ ಇದೆ ಎಂಬುದು ಮೇಲ್ನೋಟಕ್ಕೆ ಗೋಚರಿಸುತ್ತಿದೆ. ಎಲ್ಲವನ್ನೂ ತನಿಖಾ ಸಂಸ್ಥೆಗೆ ಬಿಡುವುದು ಒಳ್ಳೆಯದು ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅಭಿಪ್ರಾಯಪಟ್ಟರು.



ಮೈಸೂರಿನ ವಿಜಯನಗರದ ಕೊಡವ ಸಮಾಜದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ, ದೂರುದಾರ ಅನಾಮಿಕನ ಬಂಧನ ವಿಚಾರಕ್ಕೆ ಪ್ರತಿಕ್ರಿಯಿಸಿ, ಪಾರದರ್ಶಕ ತನಿಖೆ ಆಗಬೇಕು ಎಂದು ನಾವು ಹೇಳಿದ್ದೇವೆ. ಯಾರೇ ತಪ್ಪಿತಸ್ಥರಿದ್ದರೂ ಅವರನ್ನು ಗುರುತಿಸಿ, ಶಿಕ್ಷಿಸುವ ಕೆಲಸ ಸರ್ಕಾರ ಮಾಡಲಿದೆ. ಕೇವಲ ರಾಜಕೀಯಕ್ಕಾಗಿ ಆರೋಪ ಮಾಡಿ, ಇಂತಹ ಪ್ರಯತ್ನ ಮಾಡಿರೋದು ಸರಿಯಲ್ಲ. ಧರ್ಮಸ್ಥಳ ಪಾವಿತ್ರ್ಯತೆ ಕಾಪಾಡುವ ಸಲುವಾಗಿ ತನಿಖೆ ಆಗಬೇಕು ಎಂದು ಸರ್ಕಾರ ಹೇಳಿದೆ. ಆದರೆ ತನಿಖೆಯೇ ಆಗಬಾರದು ಎನ್ನಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಯಾರೋ ಒಬ್ಬ ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಿದ್ದ. ಪೊಲೀಸರು ತನಿಖೆ ಮಾಡಿ ಬೇರೆ ಬೇರೆ ಅಂಶಗಳು ಇಂದು ಹೊರ ಬಂದಿರುವ ಸಾಧ್ಯತೆ ಇದೆ. ದೂರು ಕೊಟ್ಟವರಿಗೂ ಜವಾಬ್ದಾರಿ ಇದೆ. ಸುಳ್ಳು ದೂರು ಕೊಟ್ಟು, ಇಂತಹ ವಾತಾವರಣ ಸೃಷ್ಟಿ ಮಾಡಿದ್ದರೆ ಅಪರಾಧ. ಅದಕ್ಕಾಗಿಯೇ ದೂರುದಾರನನ್ನು ಬಂಧಿಸಲಾಗಿದೆ. ಎಸ್‌ಐಟಿಯಿಂದಲೇ ಸತ್ಯ ಹೊರ ಬರಲು ಸಾಧ್ಯವಾಗಿದೆ ಎಂದರು.

ತಪಿತಸ್ಥರು ಯಾರೆಂದು ಗುರುತಿಸಲು ಯಾರಿಂದಲೂ ಸಾಧ್ಯವಿಲ್ಲ. ತನಿಖೆಯಿಂದಲೇ ಅದೆಲ್ಲವೂ ಬೆಳಕಿಗೆ ಬರಬೇಕು. ದೂರುದಾರರೂ ತಪಿತಸ್ಥರಾಗಿರಬಹುದು ಎಂದು ಇಂದು ಗೋಚರವಾಗುತ್ತಿದೆ. ಎಸ್‌ಐಟಿ ಪೂರ್ಣ ಶ್ರಮ ವಹಿಸಿ ತನಿಖೆ ಮಾಡಿದೆ. ಯಾರೇ ತಪಿತಸ್ಥರಿದ್ದರೂ ಗುರುತಿಸುವ ಕೆಲಸ ಇಂದು ಆಗಿದೆ. ಷಡ್ಯಂತರ ಯಾರು ಮಾಡಿದ್ದಾರೆ ಅದು ಹೊರಗೆ ಬರಲಿ ಎಂದರು.

ಬಿಜೆಪಿಯವರಿಗೆ ಈ ವಿಚಾರದಲ್ಲಿ ಯಾಕೆ ಭಯ. ನಾವೆಲ್ಲ ಧರ್ಮಸ್ಥಳದ ಭಕ್ತರಲ್ಲವಾ? ರಾಜಕಾರಣ ಮಾಡಲು ಇವರು ಧರ್ಮಸ್ಥಳಕ್ಕೆ ಹೋಗಿದ್ದಾರೆ. ಆದರೆ, ಎಸ್‌ಐಟಿಯನ್ನು ಹೆಗಡೆಯವರೇ ಸ್ವಾಗತ ಮಾಡಿದ್ದಾರೆ. ಬಿಜೆಪಿ ಯಾಕೆ ಕಡ್ಡಿ ಆಡಿಸುವ ಕೆಲಸ ಮಾಡುತ್ತಿದೆ ಎಂದು ಕಿಡಿಕಾರಿದರು.

ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ಮಾಡಲಾಗುತ್ತಿದೆಯೇ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಧಾರ್ಮಿಕ ಭಾವನೆ ಕೆರಳಿಸಿ ರಾಜಕಾರಣ ಮಾಡುವಂತಹದು ಒಂದೇ ಗುಂಪು. ಇತಿಹಾಸದಲ್ಲಿ ಇಂತಹ ಪ್ರಕರಣಗಳ ಹಿಂದೆ ಯಾರಿದ್ದಾರೆ ಎಂಬುದು ತಿಳಿದು ಬಂದಿದೆ. ಇದರಲ್ಲೂ ಸತ್ಯಾಂಶ ಹೊರ ಬರುತ್ತದೆ. ಬುರುಡೆ ಪ್ರಕರಣ ಷಡ್ಯಂತ್ರ ಎನ್ನಲು ನಾನ್ಯಾರು. ಷಡ್ಯಂತ್ರ ಇರಬಹುದು ಎನ್ನುತ್ತೇನೆ. ಇರುವ ಸಾಧ್ಯತೆಗಳು ಕಾಣುತ್ತೆ. ಅದು ನಿಜವೇ ಆಗಿದ್ದರೆ ಯಾರು ಇದರ ಹಿಂದೆ ಇದ್ದಾರೆ ಗೊತ್ತಾಗುತ್ತೆ ಎಂದು ತಿಳಿಸಿದರು.

ಶ್ರೀ ಕ್ಷೇತ್ರಕ್ಕೆ ಕಪ್ಪು ಚುಕ್ಕೆ ತರುವ ಕೆಲಸ ಮಾಡಿ, ಸುಳ್ಳು ದೂರು ಕೊಟ್ಟು, ಸಮಾಜದ ಸ್ವಾಸ್ಥ್ಯ ಕೆಡಿಸುವ ಕೆಲಸ ಮಾಡಿರುವವರ ಮೇಲೆಲ್ಲಾ ಕ್ರಮ ಆಗುತ್ತೆ. ಸುಜಾತ ಭಟ್ ವಶಕ್ಕೆ ಪಡೆಯುವ ವಿಚಾರ ಪೊಲೀಸರಿಗೆ ಬಿಟ್ಟಿದ್ದು. ಕಾನೂನು ಬದ್ಧವಾಗಿ ಪೊಲೀಸರು ಆ ಕೆಲಸ ಮಾಡುತ್ತಾರೆ ಎಂದರು.

ದೇಶದ ಗಮನ ಸೆಳೆದಿದ್ದ ಧರ್ಮಸ್ಥಳ !!

ಧರ್ಮಸ್ಥಳ, ಆ.23– ರಾಜ್ಯವಷ್ಟೇ ಅಲ್ಲ. ಇಡೀ ದೇಶದ ಕಣ್ಣು ಧರ್ಮಸ್ಥಳದತ್ತ ನೆಟ್ಟಿತ್ತು. ವಿದೇಶಿ ಮಾಧ್ಯಮಗಳಲ್ಲೂ ಧರ್ಮಸ್ಥಳ ಕ್ಷೇತ್ರದ ಸುದ್ದಿ ನಿರಂತರವಾಗಿ ಬಿತ್ತರವಾಗಿತ್ತು. ಧರ್ಮಸ್ಥಳದ ಸುತ್ತ ಮುತ್ತ ನೂರಾರು ಹೆಣಗಳನ್ನು ಹೂತಿದ್ದೇನೆ ಎಂದು ಪೊಲೀಸರಿಗೆ ದೂರು ನೀಡಿದ್ದ ಮಾಸ್ಕ್‌ಮ್ಯಾನ್. ನಾನು ಶವಗಳನ್ನು ಹೂತಿಟ್ಟ ಜಾಗ ನನಗೆ ಗೊತ್ತು, ತೋರಿಸುತ್ತೇನೆ ಎಂದು ಸ್ಥಳಗಳನ್ನು ಗುರುತಿಸಿದ್ದ. ಈಗ ಮಾಸ್ಕ್‌ಮ್ಯಾನ್ ಚಿನ್ನಯ್ಯನನ್ನು ಎಸ್‌ಐಟಿ ಪೊಲೀಸರು ಬಂಧಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ ಏನೇನಾಗಿದೆ ಬನ್ನಿ ನೋಡೋಣ;

- ಜುಲೈ ಮೊದಲ ವಾರದಲ್ಲಿ ಧರ್ಮಸ್ಥಳದಲ್ಲಿ ನಡೆದ ಸಾಮೂಹಿಕ ಸಮಾಧಿ ಪ್ರಕರಣಕ್ಕೆ ಸಂಬಂಧಿಸಿದಂತೆ ಶವಗಳನ್ನು ಹೂತು ಹಾಕಿದ್ದ ವ್ಯಕ್ತಿ ಶರಣಾಗತಿಗೆ ಸಿದ್ಧನಾಗಿದ್ದಾನೆ ಎಂದು ವಕೀಲರೊಬ್ಬರ ಲೆಟರ್ ಹೆಡ್‌ನಲ್ಲಿ ಪತ್ರ ವೈರಲ್ ಆಗಿತ್ತು.
- ಜುಲೈ 11–ಬುರುಡೆ ಸಮೇತ ಪೊಲೀಸರ ಮುಂದೆ ಹಾಜರಾಗಿದ್ದ ಮುಸುಕುಧಾರಿ.
- ಜುಲೈ 18– ಎಸ್‌ಐಟಿ ರಚನೆಗೆ ಮನವಿ ಮಾಡಿದ್ದ ದೂರುದಾರ
- ಜುಲೈ 19– ಎಸ್‌ಐಟಿ ರಚನೆ ಮಾಡಿದ್ದ ಸರ್ಕಾರ
- ಜುಲೈ 25– ಮಂಗಳೂರಿಗೆ ಆಗಮಿಸಿದ್ದ ಎಸ್‌ಐಟಿ ತಂಡ
- ಜುಲೈ 26, 27– ದೂರುದಾರನ ವಿಚಾರಣೆ
- ಜುಲೈ 27– ಬೆಳ್ತಂಗಡಿಯಲ್ಲಿ ಎಸ್‌ಐಟಿ ಕಚೇರಿ ಓಪನ್
- ಜುಲೈ 28– ದೂರುದಾರನ ಜೊತೆ ಸ್ಥಳ ಮಹಜರು ಪ್ರಕ್ರಿಯೆ ಆರಂಭ
- ಜುಲೈ 28– ನೇತ್ರಾವತಿ ಸ್ನಾನಘಟ್ಟದಲ್ಲಿ 13 ಸ್ಥಳಗಳನ್ನು ಗುರುತಿಸಿದ ದೂರುದಾರ
- ಜುಲೆ 29– ದೂರುದಾರ ಗುರುತಿಸಿದ ಸ್ಥಳದಲ್ಲಿ ಅಗೆಯುವ ಪ್ರಕ್ರಿಯೆ ಆರಂಭ
- ಜುಲೈ 30– ಪಾಯಿಂಟ್ ನಂ.2, 3, 4ರಲ್ಲಿ ಕಾರ್ಯಾಚರಣೆ
- ಜುಲೈ 31– 6ನೇ ಪಾಯಿಂಟ್ ಉತ್ಖನನ ವೇಳೆ ಎಲುಬುಗಳು ಪತ್ತೆ
- ಆಗಸ್ಟ್ 1– 5ನೇ ದಿನದ ಕಾರ್ಯಾಚರಣೆ 7,8ನೇ ಸ್ಥಳದಲ್ಲಿ ಉತ್ಖನನ
- ಆಗಸ್ಟ್ 2– ದೂರುದಾರ ಗುರುತಿಸಿದ 9ನೇ ಸ್ಥಳದಲ್ಲಿ ಉತ್ಖನನ.
- ಆಗಸ್ಟ್ 4– ಕಾಡಿನ ಪ್ರದೇಶಕ್ಕೆ ಕರೆದೊಯ್ದ ದೂರುದಾರ
- ಆಗಸ್ಟ್ 5– 11ನೇ ಸ್ಥಳದಲ್ಲಿ ಅಗೆಯುವಿಕೆ ಸಿಗದ ಕುರುಹು
- ಆಗಸ್ಟ್ 6– ಧರ್ಮಸ್ಥಳದ ಗ್ರಾಮ ಪಂಚಾಯ್ತಿಯಿಂದ ದಾಖಲೆ ಪಡೆದುಕೊಂಡ ಎಸ್‌ಐಟಿ
- ಆಗಸ್ಟ್ 6– ಎಸ್‌ಐಟಿ ಮುಂದೆ ಬಂದ ಮೂರನೇ ದೂರುದಾರ, ಮಾಸ್ಕ್ ಮ್ಯಾನ್ ಹೂತುಹಾಕುತ್ತಿದ್ದ ಸ್ಥಳಗಳನ್ನು ನೋಡಿದ್ದೇನೆ ಎಂದಿದ್ದ
- ಆಗಸ್ಟ್ 8– ಹೊಸ ಸ್ಥಳದಲ್ಲಿ ಪರಿಶೀಲನೆ ಆರಂಭಿಸಿದ ಎಸ್‌ಐಟಿ ತಂಡ
- ಆಗಸ್ಟ್ 9– ಎರಡನೇ ದೂರುದಾರ ಜಯಂತ್ ಟಿ. ಮಾಹಿತಿ ಕಲೆ ಹಾಕಿದ ಎಸ್‌ಐಟಿ
- ಆಗಸ್ಟ್ 9– ಯೂಟ್ಯೂಬರ್‌ಗಳ ಮೇಲೆ ಹಲ್ಲೆ ಸಂಬಂಧ 6 ಮಂದಿ ಬಂಧನ
- ಆಗಸ್ಟ್ 11– ಜಿ.ಪಿ.ಆರ್ ಯಂತ್ರ ಬಳಸಲು ಮುಂದಾದ ಎಸ್‌ಐಟಿ.
- ಆಗಸ್ಟ್ 12– 13ನೇ ಸ್ಥಳದಲ್ಲಿ ಜಿಪಿಆರ್ ಮೂಲಕ ಪರಿಶೀಲನೆ, ಸಿಗದ ಕುರುಹು
- ಆಗಸ್ಟ್ 14– ರಿಂದ ಮುಸುಕುಧಾರಿಯ ನಿರಂತರ ವಿಚಾರಣೆ
- ಆಗಸ್ಟ್ 23– ತೀವ್ರ ವಿಚಾರಣೆ ಬಳಿಕ ಮುಸುಕುಧಾರಿಯ ಬಂಧನ.

ಧರ್ಮಸ್ಥಳ ಅಪಖ್ಯಾತಿಗೊಳಿಸುವ ದೊಡ್ಡ ಪಿತೂರಿ; ಅಣ್ಣಾಮಲೈ ಕಿಡಿ

ಚೆನ್ನೈ, ಆ.23– ಧರ್ಮಸ್ಥಳ ಪ್ರಕರಣ ಕುರಿತು ತಮಿಳುನಾಡು ಬಿಜೆಪಿ ಮಾಜಿ ಅಧ್ಯಕ್ಷ ಅಣ್ಣಾಮಲೈ ಪ್ರತಿಕ್ರಿಯೆ ನೀಡಿದ್ದು, ಈ ಘಟನೆಯು ಧರ್ಮಸ್ಥಳ ದೇವಾಲಯವನ್ನು ಅಪಖ್ಯಾತಿಗೊಳಿಸುವ ದೊಡ್ಡ ಪಿತೂರಿಯ ಭಾಗವಾಗಿದೆ. ಇದು ಕೇವಲ ಒಬ್ಬ ವ್ಯಕ್ತಿ ಮಾಡಿಲ್ಲ, ಆತನ ಹಿಂದೆ ದೊಡ್ಡ ವ್ಯವಸ್ಥೆಯೇ ಇದೆ. ಈಗ ಆತನ ಮುಖವಾಡ ಮಾತ್ರ ಬಯಲಾಗಿದೆ. ಆದರೆ ಇನ್ನೂ ಮುಖವಾಡ ತೆಗೆಯದ ದೊಡ್ಡ ಷಡ್ಯಂತ್ರದ ಅಸಲಿ ಮುಖ ಬಯಲಾಗಬೇಕಿದೆ ಎಂದು ಹೇಳಿದ್ದಾರೆ.



ಒಬ್ಬ ಮುಖವಾಡ ಧರಿಸಿದ ವ್ಯಕ್ತಿ ಒಂದು ತಿಂಗಳಿಗೂ ಹೆಚ್ಚು ಕಾಲ ಕರ್ನಾಟಕ ರಾಜ್ಯದ ಸಂಪೂರ್ಣ ಸರ್ಕಾರಿ ಯಂತ್ರವನ್ನು ಹಗುರವಾಗಿ ಬಳಸಿಕೊಂಡಿದ್ದಾನೆ ಎಂಬುದು ಅತ್ಯಂತ ಬೇಸರದ ಸಂಗತಿ. ಇದು ಕೇವಲ ಒಬ್ಬ ವ್ಯಕ್ತಿ ಮಾಡಿಲ್ಲ, ಬದಲಾಗಿ ಇನ್ನೂ ಬಹಿರಂಗ ಪಡಿಸದ ದೊಡ್ಡ ಪಿತೂರಿಯಾಗಿದೆ ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಮುಖವಾಡ ಧರಿಸಿದ ವ್ಯಕ್ತಿಯ ಆಧಾರರಹಿತ ಆರೋಪಗಳಿಗೆ ಪ್ರಾಥಮಿಕ ಪುರಾವೆಗಳಿಲ್ಲದೆಯೇ ಕಾನೂನು ಬದ್ಧತೆಯನ್ನು ನೀಡಿದ್ದು ಮೂರ್ಖತನ ಈ ಪಿತೂರಿಯ ನಿಜವಾದ ಸೂತ್ರಧಾರಿಗಳನ್ನು ಬಹಿರಂಗಪಡಿಸಬೇಕು ಮತ್ತು ಹೊಣೆಗಾರರನ್ನಾಗಿ ಮಾಡಬೇಕು ಎಂದು ಅಣ್ಣಾಮಲೈ ಆಗ್ರಹಿಸಿದ್ದಾರೆ.

ಮಾಸ್ಕ್‌ಮ್ಯಾನ್ ಚಿನ್ನಯ್ಯನ ಅಣ್ಣನೂ ಎಸ್‌ಐಟಿ ವಶಕ್ಕೆ

ಬೆಳ್ತಂಗಡಿ, ಆ.23– ಧರ್ಮಸ್ಥಳ ಪ್ರಕರಣದಲ್ಲಿ ಮಾಸ್ಕ್‌ಮ್ಯಾನ್ ಚಿನ್ನಯ್ಯ ತನ್ನ ಅಣ್ಣ ತಾನಾಸಿ ಹೆಸರು ಪ್ರಸ್ತಾಪಿಸಿದ್ದರಿಂದ ಪೊಲೀಸರು ತಾನಾಸಿಯನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ನಾನು ಹೆಣ ಹೂತಿದ್ದು ನನ್ನ ಅಣ್ಣ ತಾನಾಸಿಗೂ ಗೊತ್ತಿತ್ತು ಎಂದು ಚಿನ್ನಯ್ಯ ಹೇಳಿಕೆ ನೀಡಿದ್ದ. ಈ ಹಿನ್ನೆಲೆಯಲ್ಲಿ ಸತ್ಯಾಸತ್ಯತೆಯ ವಿಚಾರಣೆಗಾಗಿ ಚಿನ್ನಯ್ಯನ ಅಣ್ಣ ತಾನಾಸಿಯನ್ನು ಎಸ್‌ಐಟಿ ಪೊಲೀಸರು ವಿಚಾರಣೆಗಾಗಿ ವಶಕ್ಕೆ ಪಡೆದಿದ್ದಾರೆ. ಬೆಳ್ತಂಗಡಿಯ ಎಸ್‌ಐಟಿ ಕಚೇರಿಯಲ್ಲಿ ವಿಚಾರಣೆ ನಡೆಯುತ್ತಿದ್ದು, ಈ ವೇಳೆ ತಾನಾಸಿ ಶವ ಹೂತಿದ್ದು ನನಗೆ ಗೊತ್ತೇ ಇಲ್ಲ ಎಂದಿದ್ದಾರೆ ಎಂಬ ಮಾಹಿತಿ ಲಭ್ಯವಿದೆ.

ಮಾಸ್ಕ್‌ಮ್ಯಾನ್ ಫ್ರಾಡ್ ಎಂದು ನಾನು ಮುಂಚೆಯೇ ಹೇಳಿದ್ದೆ

ಕೇಂದ್ರ ಸಚಿವ ಸೋಮಣ್ಣ ಸಿಡಿಮಿಡಿ; ಸಿಎಂ ಸಿದ್ದರಾಮಯ್ಯ ಬೆಲೆ ತೆರಬೇಕಾಗುತ್ತೆ!

ತುಮಕೂರು, ಆ.23– ಧರ್ಮಸ್ಥಳ ಸಾವಿರಾರೂ ವರ್ಷಗಳ ಇತಿಹಾಸವಿರುವ ಕ್ಷೇತ್ರ. ಈ ದೇಶದ ಪ್ರತಿಯೊಬ್ಬ ಭಕ್ತರಿಗೆ ನೆಮ್ಮದಿ ಕೊಡುವ ಕ್ಷೇತ್ರ. ಎಸ್‌ಐಟಿ ರಚನೆ ಆದಾಗ ನಾನು ದೆಹಲಿಯಲ್ಲಿ ಒಬ್ಬ ಮುಖ್ಯಸ್ಥರನ್ನು ಭೇಟಿಯಾಗಿ ಇದು ಫೇಕ್ ಎಂದು ಹೇಳಿದ್ದೆ. ಸತ್ಯ ಎಷ್ಟೇ ಕಹಿಯಾಗಿದ್ದರೂ ಕೊನೆಗೆ ಅದು ಗೆಲ್ಲುತ್ತದೆ ಎಂದು ಎಸ್‌ಐಟಿಯಿಂದ ಮಾಸ್ಕ್ ಮ್ಯಾನ್ ಬಂಧನ ವಿಚಾರವಾಗಿ ಕೇಂದ್ರ ಸಚಿವ ವಿ.ಸೋಮಣ್ಣ ಹೇಳಿದ್ದಾರೆ.



ಸುಳ್ಳಿನ ಕಂತೆ ಎಷ್ಟೇ ದೊಡ್ಡದಿದ್ದರು ಅದು ಸೋಲುತ್ತದೆ. ಈ ಸುಳ್ಳಿನ ಕಂತೆಯನ್ನು ಇಡೀ ವಿಶ್ವವೇ ನೋಡಿತು. ಮಾಧ್ಯಮದವರು ಸಹ ಅದನ್ನೇ ಅನಿವಾರ್ಯವಾಗಿ ಫಾಲೋ ಮಾಡಬೇಕಾಯಿತು. ಆದರೇ ಇಂತಹ ಪಾಪದ ಕೃತ್ಯ ನಡೆದಿರೋದು ದುರಂತ ಎಂದರು.

ಸತ್ಯಕ್ಕೆ ಮನ್ನಣೆ ಸಿಗುತ್ತೆ ಎಂಬುದು ಈಗ ಗೊತ್ತಾಗಿದೆ. ಭಾರತ ಮಾತೆ ಸತ್ಯವನ್ನು ತೋರಿಸಿದ್ದಾರೆ. ಆದರೆ ಈ ಸರ್ಕಾರ ನಡೆದು ಕೊಂಡ ರೀತಿ ತರವಲ್ಲ. ಈ ಪಾಪದ ಕೃತ್ಯಕ್ಕೆ ಯಾರಾದರೂ ಹೊಣೆಗಾರರಿದ್ದರೆ ಅದು ರಾಜ್ಯದ ಸಿಎಂ ಸಿದ್ದರಾಮಯ್ಯ. ಈ ಕೃತ್ಯಕ್ಕೆ ಸಿಎಂ ಸಿದ್ದ ರಾಮಯ್ಯ ಬೆಲೆ ತೆರಬೇಕಾಗುತ್ತದೆ. ದೇಶದ ಕೋಟ್ಯಾಂತರ ಭಕ್ತರ ನಂಬಿಕೆಗೆ ದ್ರೋಹ ಆಗಿದೆ. ಆ ಮಾಸ್ಕ್ ಮ್ಯಾನ್ ಫ್ರಾಡ್ ಎಂದು ನಾನು ಹಿಂದೆ ಹಲವಾರು ಬಾರಿ ಹೇಳಿದ್ದೇ. ಈಗ ಆತ ಅರೆಸ್ಟ್ ಆಗಿದ್ದಾನೆ ಲೆಫ್ಟಿಸ್ಟ್ ಗಳ ಮಾತನ್ನು ಕೇಳಿಕೊಂಡು ಕರ್ನಾಟಕದ ಆರು ಕೋಟಿ ಜನರ ಭಾವನೆಗೆ ಧಕ್ಕೆ ತಂದಿದ್ದಾರೆ ಎಂದು ತಿಳಿಸಿದರು.

ಸರ್ಕಾರಕ್ಕೆ ಈ ವಿಚಾರ ಈ ಕ್ಷಣದಲ್ಲೇ ಭಗ್ನಿಗೂಟ ಆಗಲಿದೆ. ಘಜ್ನಿ ಮಹಮದ್ 17 ಬಾರಿ ದಾಳಿ ಮಾಡಿದರೂ ಭಾರತೀಯ ಸಂಸ್ಕೃತಿ ಒಡೆಯಲಾಗಲಿಲ್ಲ. ಎಸ್‌ಐಟಿಯವರನ್ನು ಈಗ ಮೆಚ್ಚಿಕೊಳ್ಳುತ್ತೇನೆ. ಎಲ್ಲವೂ ಫೇಕ್, ವ್ಯವಸ್ಥಿತ ಷಡ್ಯಂತ್ರ ಎಂದು ಎಸ್‌ಐಟಿಯವರು ಬಹಿರಂಗಪಡಿಸಿದ್ದಾರೆ. ಸಿದ್ದರಾಮಯ್ಯನವರು ಈ ಪಾಪದ ಪ್ರಾಯಶ್ಚಿತಕ್ಕಾಗಿ ಧರ್ಮಸ್ಥಳದಲ್ಲಿ ಮೂರು ದಿನ ಇದ್ದು ಪಾಪ ಕಳೆದುಕೊಂಡು ಬರಲಿ. ಧರ್ಮಸ್ಥಳದ ಮಂಜುನಾಥ ಸ್ವಾಮಿ ಹಾಗೂ ಅಣ್ಣಪ್ಪ ಸ್ವಾಮಿಯ ದರ್ಶನ ಮಾಡಿ ಕೈ ಮುಗಿದು, ನಾನು ಯಾರದ್ದೋ ಮಾತು ಕೇಳಿ ಇಂತಹ ಪಾಪ ಕೃತ್ಯ ಮಾಡಿದೆ ಎಂದು ಕ್ಷಮೆ ಕೇಳಲಿ. ಕ್ಷಮೆ ಕೇಳಿದರೆ ಸಿದ್ದರಾಮಯ್ಯರಿಗೂ ಒಳ್ಳೆಯದು, ರಾಜ್ಯಕ್ಕೂ ಒಳ್ಳೆಯದು ಎಂದು ಸೋಮಣ್ಣ ಹೇಳಿದ್ದಾರೆ.

ಮುಸುಕುಧಾರಿ ಹಿಂದಿರುವ ಜಾಲವನ್ನು ಪತ್ತೆ ಮಾಡಲಾಗುವುದು

ಗೃಹ ಸಚಿವ ಡಾ.ಜಿ.ಪರಮೇಶ್ವರ್

ಮಂಗಳೂರು, ಆ.23– ಧರ್ಮಸ್ಥಳ ಗ್ರಾಮದಲ್ಲಿ ನೂರಾರು ಶವಗಳನ್ನು ಹೂತಿಟ್ಟ ಪ್ರಕರಣದಲ್ಲಿ ಮುಸುಕುಧಾರಿ ಬಂಧನ ಆಗಿರುವುದಾಗಿ ಹೇಳಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮುಸುಕುಧಾರಿ ಹಿಂದಿರುವ ಜಾಲವನ್ನು ಪತ್ತೆ ಮಾಡಲಾಗುವುದು ಎಂದಿದ್ದಾರೆ.

ಮಾಸ್ಕ್‌ಮ್ಯಾನ್ ಬಂಧನ ಆಗಿರುವುದು ನಿಜ. ಆತ ಪೊಲೀಸ್ ಕಸ್ಟಡಿಯಲ್ಲಿ ಇದ್ದಾನೆ. ತನಿಖೆ ಪೂರ್ಣಗೊಳ್ಳುವವರೆಗೆ ಯಾವುದೇ ಮಾಹಿತಿ ನೀಡಲು ಸಾಧ್ಯವಿಲ್ಲ. ಅಧಿಕಾರಿಗಳು ತನಿಖೆ ಮುಂದುವರಿಸುತ್ತಾರೆ. ಹೆಚ್ಚಿನ ಮಾಹಿತಿ ಎಸ್‌ಐಟಿಯಿಂದ ಪಡೆಯುತ್ತೇನೆ. ಇದರ ಹಿಂದೆ ಯಾವ ಜಾಲ ಇದೆ ಅನ್ನುವುದನ್ನು ಪತ್ತೆ ಮಾಡಲಾಗುವುದು ಎಂದು ಹೇಳಿದರು.



ಎಸ್‌ಐಟಿ ತನಿಖೆಯು ಮುಕ್ತಾಯ ಆಗುತ್ತಾ ಎಂದು ಹೇಳಲು ಬರುವುದಿಲ್ಲ. ಜೊತೆಗೆ ಬಂಧಿತನಿಗೆ ಮಂಪರು ಪರೀಕ್ಷೆ ಮಾಡಬೇಕಾ? ಬೇಡವಾ ಎಂದುದನ್ನು ಎಸ್‌ಐಟಿ ನಿರ್ಧಾರ ಮಾಡುತ್ತದೆ. ಅಲ್ಲದೇ ಸುಜಾತ ಭಟ್ ವಿಚಾರ ಕೂಡ ತನಿಖೆಯಲ್ಲಿದೆ. ತನಿಖೆಯ ವರದಿಗಳು ಬರುವವರೆಗೆ ಬಹಿರಂಗಪಡಿಸಲು ಸಾಧ್ಯವಿಲ್ಲ. ಯಾವುದೇ ವಿಚಾರ ಬಹಿರಂಗೊಂಡರೆ ಎಸ್‌ಐಟಿ ತನಿಖೆಗೆ ಅಡ್ಡಿಯಾಗುತ್ತದೆ. ಯಾವುದನ್ನೂ ಈಗ ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದರು.

ಬಿಜೆಪಿಯವರು ಅನೇಕ ಆರೋಪಗಳನ್ನು ಮಾಡಬಹುದು. ಬೇರೆ ಬೇರೆ ರೀತಿಯ ಹೇಳಿಕೆಗಳು ಬರಬಹುದು. ಅವರ ಹೇಳಿಕೆಗಳ ಆಧಾರದಲ್ಲಿ ತನಿಖೆ ಮಾಡಲು ಆಗಲ್ಲ. ಎಸ್‌ಐಟಿ ತನ್ನ ಅಂತಿಮ ವರದಿ ಸಲ್ಲಿಸುವವರೆಗೆ ಏನು ಹೇಳಲು ಆಗಲ್ಲ. ಯಾವ ಸೆಕ್ಷನ್‌ನಲ್ಲಿ ಬಂಧಿಸಲಾಗಿದೆ ಅನ್ನುವುದು ಎಸ್‌ಐಟಿಯವರಿಗೆ ಗೊತ್ತು. ದೂರುದಾರನ ಹೇಳಿಕೆ ಆಧಾರದಲ್ಲಿ ತನಿಖೆ ಪ್ರಾರಂಭಿಸಿದ್ದೆವು. ಆದರೆ, ಎಸ್‌ಐಟಿ ಹೇಳಿದ್ದೆಲ್ಲವನ್ನೂ ಹೇಳಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಇದಕ್ಕೂ ಮುನ್ನ ಮಂಗಳೂರು ಏರ್‌ಪೋರ್ಟ್‌ನಲ್ಲಿ ಎಸ್‌ಐಟಿ ಮುಖ್ಯಸ್ಥ ಪ್ರಣಬ್ ಮೊಹಂತಿ ಅವರಿಂದ ಗೃಹ ಸಚಿವರು ಮಾಹಿತಿ ಪಡೆದರು. ಬುರುಡೆ ಚಿನ್ನಯ್ಯನ ವಿಚಾರಣೆ ಹಾಗೂ ನಾಲ್ಕು ದಿನದ ಬೆಳವಣಿಗೆ ಬಗ್ಗೆ ಪಿನ್ ಟು ಪಿನ್ ಡೀಟೇಲ್ಸ್ ಪಡೆದರು. ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್, ದಕ್ಷಿಣ ಕನ್ನಡ ಎಸ್ಪಿ ಡಾ. ಕೆ.ಅರುಣ್, ಎಸ್‌ಐಟಿ ಟೀಮ್‌ನ ಅಧಿಕಾರಿಗಳು ಈ ಸಂದರ್ಭದಲ್ಲಿದ್ದರು.

ನಕ್ಕರೆ ಅದೇ ಸ್ವರ್ಗ

ಕಳ್ಳನೊಬ್ಬ ಮನೆಗೆ ಕನ್ನ ಹಾಕಿ ಟಿವಿ ಕದ್ದುಕೊಂಡು ಹೋದ ಮರುದಿನವೂ ಅದೇ ಮನೆಗೆ ಕನ್ನ ಹಾಕಿ ಸಿಕ್ಕಿ ಬಿದ್ದ.
ಕೋರ್ಟ್‌ನಲ್ಲಿ ವಿಚಾರಣೆ ನಡೀತಾ ಇತ್ತು.

ಜಡ್ಜ್ : ಏನಮ್ಮ ಪೆದ್ದ, ಎರಡನೇ ದಿನವೂ ಅದೇ ಮನೆಗೆ ಯಾಕೇ ಕಳ್ಳತನ ಮಾಡೋಕೆ ಹೋಗಿದ್ದೆ!

ಕಳ್ಳ : ಸ್ವಾಮಿ... ಟಿವಿ ರಿಮೋಟ್ ಮರೆತು ಬಿಟ್ಟಿದ್ದೆ...!

ಮೈಸೂರು ಮಿತ್ರ
ಭಾನುವಾರ, 24 ಆಗಸ್ಟ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ವೇದಗಳನ್ನು ಓದಿದವರು ದೊಡ್ಡವರಾಗುವುದಿಲ್ಲ. ಜನರ ವೇದನೆಗಳನ್ನು ಅರಿತವರು ಮಾತ್ರ ದೊಡ್ಡವರಾಗುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಿಂದಿನದನ್ನು ನೆನೆದು ಹಿತ್ತಲಲ್ಲಿ ಕುಳಿತು ಅತ್ತಂತೆ

ನಿಮ್ಮ ಪತ್ರಗಳು

ಆತ್ಮಹತ್ಯೆ ಮತ್ತು ಪರಿಹಾರ!

ಮಾನ್ಯರೆ,

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್‌ಗಳ ಹಾವಳಿಯಿಂದ ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿಗಳ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಪರಿಷತ್ತಿನಲ್ಲಿ ಘೋಷಿಸಿದ್ದಾರೆ!

('ಮೈಸೂರು ಮಿತ್ರ' 23.08.2025)

ಮೈಕ್ರೋ ಫೈನಾನ್ಸ್ ಕಂಪನಿಗಳ ಕಿರುಕುಳದಿಂದ ಯಾರಾದರೂ ಆತ್ಮಹತ್ಯೆ ಮಾಡಿಕೊಂಡರೆ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದ ಮೇಲೆ ಆ ಕಂಪನಿಗಳ ಮುಖ್ಯಸ್ಥರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ, 2023 ಕಲಂ 198 ರ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು.

'ಫೈನಾನ್ಸ್ ಕಂಪನಿಗಳ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡವರ ಕುಟುಂಬಕ್ಕೆ 5 ಲಕ್ಷ ಪರಿಹಾರ ನೀಡಲಾಗುವುದು' ಎಂಬ ಘೋಷಣೆಯೂ ಕೂಡಾ ಆತ್ಮಹತ್ಯೆಗೆ ಪ್ರೋತ್ಸಾಹ ಮತ್ತು ಪ್ರಚೋದನೆ ನೀಡಬಹುದು. ಇದೂ ಕೂಡಾ ಭಾರತೀಯ ನ್ಯಾಯ ಸಂಹಿತೆ 2023, ಸೆಕ್ಷನ್ 108 ರ ಪ್ರಕಾರ ಅಪರಾಧ.

ಫೈನಾನ್ಸ್ ಕಂಪನಿಗಳ ಕಿರುಕುಳದಿಂದ ಯಾರಾದರೂ ಆತ್ಮಹತ್ಯೆ ಮಾಡಿಕೊಂಡರೆ ಇದಕ್ಕೆ ಕಾರಣವಾದ ಫೈನಾನ್ಸ್ ಕಂಪನಿಗಳ ಮುಖ್ಯಸ್ಥರಿಗೆ ನ್ಯಾಯಾಲಯವು 10 ವರ್ಷ ಸೆರೆವಾಸ ಮತ್ತು ದಂಡ ವಿಧಿಸಬಹುದು.

ಆತ್ಮಹತ್ಯೆ ಮಾಡಿಕೊಂಡ ಕುಟುಂಬದವರಿಗೆ 5 ಲಕ್ಷ ಪರಿಹಾರ ನೀಡಲಾಗುವುದು ಎಂದು ಘೋಷಿಸಿ ಆತ್ಮಹತ್ಯೆಗೆ ಪ್ರೋತ್ಸಾಹ ನೀಡುವ ಬದಲಾಗಿ, ಸಾಲಗಾರರಿಗೆ ಕಿರುಕುಳ ನೀಡುವ ಮೈಕ್ರೋ ಫೈನಾನ್ಸ್ ಕಂಪನಿಗಳಿಗೆ 5 ಲಕ್ಷ ದಂಡ ವಿಧಿಸಲಾಗುವುದು ಎಂದು ಫೈನಾನ್ಸ್ ಕಂಪನಿಗಳನ್ನೇ ಎಚ್ಚರಿಸಿ ಮುಖ್ಯಮಂತ್ರಿಗಳು ಘೋಷಿಸಿದರೆ ಸಾಲಗಾರರು ಆತ್ಮಹತ್ಯೆಗೆ ಶರಣಾಗುವುದನ್ನೂ ತಡೆಯಬಹುದು. ಆ ಮೂಲಕ ಫೈನಾನ್ಸ್ ಕಂಪನಿಯ ಕಿರುಕುಳಕ್ಕೂ ಬ್ರೇಕ್ ಬೀಳಬಹುದು. ಈ ವಿಚಾರವಾಗಿ ಮುಖ್ಯಮಂತ್ರಿಗಳು ಚಿಂತಿಸಲಿ.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು

ಅನಾಹುತವನ್ನು ಸ್ವಾಗತಿಸುತ್ತಿರುವ ಗುಂಡಿ!



ಮಾನ್ಯರೆ,

ಮೈಸೂರಿನ ಹೆಬ್ಬಾಳಿನ ಸೂರ್ಯಬೇಕರಿ ವೃತ್ತದ ಸಮೀಪದಲ್ಲಿರುವ ಎರಡನೇ ಅಡ್ಡರಸ್ತೆಯಲ್ಲಿನ ಮ್ಯಾನ್‌ಹೋಲ್ ಬಳಿ ಡಾಂಬರು ಕುಸಿದು ಗುಂಡಿಯೊಂದು ಬಾಯ್ತೆರೆದು ಹಲವಾರು ತಿಂಗಳುಗಳೇ ಕಳೆದರೂ ಪಾಲಿಕೆ ಕಡೆಯವರು ದುರಸ್ತಿಗಾಗಿ ಇತ್ತ ಮುಖ ಮಾಡಿಲ್ಲ. ಕಳೆದ ವಾರ ನಿವಾಸಿಗಳೇ ಗಮನಿಸಿ ಈ ಗುಂಡಿಗೆ ಮಣ್ಣು ತುಂಬಿದ್ದರು. ಆದರೆ, ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ಮಣ್ಣು ಸಂಪೂರ್ಣವಾಗಿ ಹರಿದುಹೋಗಿ ಅನಾಹುತಕ್ಕಾಗಿ ಸ್ವಾಗತಿಸುತ್ತಿದೆ. ಮೊದಲೇ ಈ ಅಡ್ಡರಸ್ತೆ ಕಿರಿದಾದ ಕಾರಣ ಪಾದಚಾರಿಗಳು, ದಾರಿಹೋಕರು ಮತ್ತು ದ್ವಿಚಕ್ರ ವಾಹನ ಸವಾರರು ತಿರುವಿನಲ್ಲಿರುವ ಈ ಗುಂಡಿಯನ್ನು ಕಂಡು ಹೈರಾಣ ಪಡುತ್ತಿದ್ದಾರೆ. ಈ ಸಮಸ್ಯೆಗೆ ಕೂಡಲೇ ಸೂಕ್ತ ಕ್ರಮ ಕೈಗೊಂಡು ಅನಾಹುತವನ್ನು ತಪ್ಪಿಸಬೇಕೆಂದು ನನ್ನ ಸವಿನಯ ಪ್ರಾರ್ಥನೆ.

–ಯಶಸ್. ಆರ್, ಸಾಮಾಜಿಕ ಕಾರ್ಯಕರ್ತ, ಮೈಸೂರು.

ಮುಕ್ತಿಧಾಮಕ್ಕೆ ಮುಕ್ತಿ ಎಂದು?

ಮಾನ್ಯರೆ,

ಮೈಸೂರಿನ ವಿಜಯನಗರದ ನಾಲ್ಕನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ಶವ ಸಂಸ್ಕಾರ ಮಾಡುವವರ ಬವಣೆ ಹೇಳತೀರದಾಗಿದೆ. ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ವಹಿಸಲ್ಪಡುತ್ತಿರುವ ಅತ್ಯಾಧುನಿಕ ಚಿತಾಗಾರವಾಗಿರುವ ಈ ಮುಕ್ತಿಧಾಮದಲ್ಲಿ ಅನಿಲ ಚಿತಾಗಾರ ಕೆಟ್ಟಿದ್ದು, ಇರುವ ವಿದ್ಯುತ್ ಚಿತಾಗಾರದ ಕಾರ್ಯಕ್ಷಮತೆಯು ಸರಿಯಾಗಿಲ್ಲದ ಕಾರಣ ಒಂದು ದೇಹವನ್ನು ದಹಿಸಲು ಒಂದೂವರೆ ಗಂಟೆ ಬೇಕಾಗಿದ್ದು, ನಂತರ ಯಂತ್ರ ತಣಿಯಲು ಎರಡು ಗಂಟೆಗಳ ಸಮಯ ಬೇಕಾಗಿರುವುದರಿಂದ ಪಾರ್ಥಿವ ಶರೀರದ ಅಂತಿಮ ಯಾತ್ರೆಯೂ ಸರಿಯಾದ ಸಮಯಕ್ಕೆ ನೆರವೇರದ ಕಾರಣ ಶವ ಸಂಸ್ಕಾರ ಮಾಡುವವರ ಸ್ಥಿತಿ ಅತಂತ್ರವಾಗಿದೆ. ಕೆಲವು ಬಾರಿ ಸಿಬ್ಬಂದಿಗಳೇ ಅಲ್ಲಿ ಇರದ ಕಾರಣ ಶವ ಸಂಸ್ಕಾರಕ್ಕೆ ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಇದೆ ಎಂದು ಅಲ್ಲಿ ಶವ ಸಂಸ್ಕಾರ ಮಾಡಿದವರು ಹೇಳುವ ಮಾತು. ಇನ್ನೂ ಮುಂದಾದರೂ ಸಂಬಂಧಪಟ್ಟವರು ಇತ್ತ ಕಡೆ ಗಮನಹರಿಸಿ ಶವ ಸಂಸ್ಕಾರಕ್ಕೆ ಗಂಟೆಗಟ್ಟಲೇ ಕಾಯುವುದಕ್ಕೆ ಇತಿಶ್ರೀ ಹಾಡಬೇಕಾಗಿ ಮನವಿ. –ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.

ಸ್ಮಾರ್ಟ್ ಮೀಟರ್ ದರ ಎಷ್ಟು?

ಮಾನ್ಯರೆ,

ಸ್ಮಾರ್ಟ್ ಮೀಟರ್ ಅನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು.ಸ್ಮಾರ್ಟ್ ಮೀಟರ್ ದರ 9 ಸಾವಿರಗಳನ್ನು ಗ್ರಾಹಕರಿಂದಲೇ ವಸೂಲಿ ಮಾಡಬೇಕು ಎಂದಿದ್ದ ಕೆಪಿಟಿಸಿಎಲ್ ಆದೇಶವನ್ನು ಪ್ರಶ್ನಿಸಲಾಗಿದ್ದ ಅರ್ಜಿಯನ್ನು ರಾಜ್ಯದ ಉಚ್ಚ ನ್ಯಾಯಾಲಯ ವಜಾ ಮಾಡಿದೆ. ಆದೇಶದಲ್ಲಿ ಸ್ಮಾರ್ಟ್ ಮೀಟರ್ ದರದ ಬಗ್ಗೆ ಕೋರ್ಟ್ ಏನೂ ಹೇಳಿರುವುದಿಲ್ಲ. ಅರ್ಜಿದಾರರು ಹೇಳಿರುವಂತೆ 2 ಸಾವಿರ ಬೆಲೆಯ ಮೀಟರ್‌ಗೆ ಕಂಪನಿ ಜೊತೆ ಶಾಮಿಲಾಗಿ 9 ಸಾವಿರ ನಿಗದಿ ಪಡಿಸಲಾಗಿದೆ ಎನ್ನುವ ಅರ್ಜಿದಾರರ ದೂರಿನ ಬಗ್ಗೆ ಯಾವುದೇ ತೀರ್ಪು ನೀಡದೆ ಇರುವುದು ಗ್ರಾಹಕರಿಗೆ ಬರೆಯಾಗಿದೆ. ಕೋರ್ಟ್ ಇದನ್ನು ಪರಿಶೀಲಿಸಬೇಕು. ಕೆಇಆರ್‌ಸಿ ಹೇಳಿದ್ದನ್ನು ಸರ್ಕಾರ ಸಾರ್ವಜನಿಕ ಹಿತದೃಷ್ಟಿಯಿಂದ ಕೈ ಬಿಡುವುದು ಒಳ್ಳೆಯದು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಸುದ್ದಿ ವೈವಿಧ್ಯ

ಮಾನ್ಯರೆ,

ಒಳ ಮೀಸಲಾತಿ ಫಜೀತಿ; ಅ(ಹ)ತ್ಯಾಚಾರ;
ಮಠಗಳವು, ಮನೆಗಳವು, ದರೋಡೆ;
ಎಲ್ಲೆಡೆ ಮಳೆಗೆ ಉರುಳುವ ಗೋಡೆ;
ಇಂಥ ಸುದ್ದಿಗಳಿಗೆಲ್ಲಿ ಕಡೆ?
(ಈ ಮಧ್ಯೆ ಸಿದ್ದರಾಮೋತ್ಸವ)
ಶಿವ ಶಿವಾ!

ಪ್ರಶಸ್ತಿ

ಆ. 17 ರಂದು ನಗರದಲ್ಲಿ ನಡೆದ ವಿಶಿಷ್ಟ ಕಾರ್ಯಕ್ರಮವೊಂದರಲ್ಲಿ ನನಗೆ 'ಆತ್ಮಶ್ರೀ ಕನ್ನಡ ಪ್ರತಿಷ್ಠಾನ'ದಿಂದ 'ಶ್ರೀ ಶಿವಕುಮಾರ ಸ್ವಾಮೀಜಿ ಸದ್ಭಾವನಾ' ರಾಜ್ಯ ಪ್ರಶಸ್ತಿ ಪ್ರದಾನ : ನಾನು ಧನ್ಯ! (ಪ್ರಶಸ್ತಿ ಸಾಮಾನ್ಯವೆ? ಪಾವನ).

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ನಾದಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಪರೀಕ್ಷಿತ ಮಹಾರಾಜ


ನಮ್ಮ ಮಕ್ಕಳಿಗೆ ಭಾರತದ ಪವಿತ್ರ ಗ್ರಂಥಗಳಾದ ರಾಮಾಯಣ, ಮಹಾಭಾರತ, ಪುರಾಣಗಳ ಪರಿಚಯ ಮಾಡಿಸುವ ನಿಟ್ಟಿನಲ್ಲಿ ಮಹಾಭಾರತಕ್ಕೆ ಸೇರಿದ ಒಂದು ಕತೆ.

ಹದಿನೆಂಟು ದಿನಗಳ ಕಾಲ ಕುರುಕ್ಷೇತ್ರದಲ್ಲಿ ನಡೆದ ಮಹಾಭಾರತ ಯುದ್ಧವು ಮುಗಿದಿತ್ತು. ಕೌರವರ ಹನ್ನೊಂದು ಅಕ್ಷೋಹಿಣಿ ಮತ್ತು ಪಾಂಡವರ ಏಳು ಅಕ್ಷೋಹಿಣಿ ಸೇನೆಯು ಅದರಲ್ಲಿ ಭಾಗವಹಿಸಿತ್ತು. ಒಂದು ಅಕ್ಷೋಹಿಣಿ ಅಂದರೆ 21870 ರಥಗಳು, ಅಷ್ಟೇ ಆನೆಗಳು, 65610 ಕುದುರೆಗಳು ಮತ್ತು 109350 ಕಾಲಾಳುಗಳಿರುವ ಸೇನೆ. ಅಂದರೆ ಒಟ್ಟು 218700 ಸೈನಿಕರ ಸೇನೆ.

ಬಹುಶಃ ಭಾರತದ ಎಲ್ಲ ಮನೆಗಳಿಂದಲೂ ಒಬ್ಬರಲ್ಲ ಒಬ್ಬರು ಈ ಯುದ್ಧದಲ್ಲಿ ಭಾಗವಹಿಸಿದ್ದರು ಎಂದು ಕಾಣುತ್ತದೆ. ಅಸಂಖ್ಯಾತ ಸಾವುನೋವುಗಳಾಗಿದ್ದುವು. ಪ್ರತೀ ಮನೆಯಲ್ಲೂ ದುಃಖ ಮಡುಗಟ್ಟಿತ್ತು. ಎಲ್ಲ ಕೌರವರೂ ನಾಶವಾಗಿದ್ದರು. ಯುದ್ಧದಲ್ಲಿ ಗೆದ್ದಿದ್ದರೂ ಧರ್ಮರಾಯನಿಗೆ ಇಷ್ಟೆಲ್ಲ ಸಾವು–ನೋವು ಮನಸ್ಸಿಗೆ ಬಹಳ ನೋವನ್ನುಂಟು ಮಾಡಿತ್ತು. ಆತ ಮೊದಲೇ ಶಾಂತಿಪ್ರಿಯ. ಮಲಗಿದ್ದ ಪಾಂಡವರ ಮಕ್ಕಳನ್ನು ಅದು ಪಾಂಡವರೇ ಎಂದು ಬಗೆದು ದ್ರೋಣರ ಮಗನಾದ ಅಶ್ವತ್ಥಾಮ ಅವರೆಲ್ಲರನ್ನೂ ಕೊಂದುಹಾಕಿದ್ದ. ಅಭಿಮನ್ಯುವಿನ ಹೆಂಡತಿ ಉತ್ತರೆಯ ಗರ್ಭದಲ್ಲಿದ್ದ ಶಿಶು ಒಂದೇ ಪಾಂಡವರ ವಂಶದ ಕುಡಿಯಾಗಿ ಉಳಿದಿತ್ತು. ಕೌರವ ವಂಶವನ್ನು ಪಾಂಡವರು ಹೊಸಕಿ ಹಾಕಿದಂತೆ ಪಾಂಡವರ ವಂಶವನ್ನೂ ನಿರ್ನಾಮ ಮಾಡಬೇಕೆಂಬುದು ಅಶ್ವತ್ಥಾಮನ ಗುರಿಯಾಗಿತ್ತು. ಆದರೆ ಪಾಂಡವರಿಗೆ ಶ್ರೀಕೃಷ್ಣನ ರಕ್ಷಣೆ ಇತ್ತು. ಅಶ್ವತ್ಥಾಮನು ಉತ್ತರೆಯ ಗರ್ಭದತ್ತ ಬ್ರಹ್ಮಾಸ್ತ್ರವನ್ನು ಬಿಟ್ಟಾಗ ಅದನ್ನು ಶ್ರೀಕೃಷ್ಣನು ತಡೆದು, ತನ್ನ ದೈವೀಶಕ್ತಿಯಿಂದ ಆ ಭ್ರೂಣದ ಸುತ್ತಲೂ ಒಂದು ರಕ್ಷಣಾ ಪೊರೆಯನ್ನು ನಿರ್ಮಿಸಿ ಅದನ್ನು ಕಾಪಾಡಿದ್ದ.

ನವಮಾಸಾನಂತರ ಉತ್ತರೆಯು ಆರೋಗ್ಯಪೂರ್ಣವಾದ ಗಂಡು ಮಗುವಿಗೆ ಜನ್ಮವಿತ್ತಳು. ಧರ್ಮರಾಯನಿಗೆ ಸ್ವಲ್ಪ ಸಮಾಧಾನವಾಗಿ, ಮಗುವಿನ ಜನ್ಮಕುಂಡಲಿಯನ್ನು ಬರೆಸಲು ಜ್ಯೋತಿಷಿಗಳನ್ನು ಕರೆಸಿದ. ಅವರು 'ಈ ಮಗು ಬಹಳ ಕೀರ್ತಿವಂತನಾಗುತ್ತಾನೆ. ಒಳ್ಳೆಯ ಪ್ರಜಾಪಾಲಕನಾಗಿ, ಪಾಂಡವರ ಕೀರ್ತಿಯನ್ನು ಬೆಳಗುತ್ತಾನೆ' ಎಂದು ಆ ಮಗುವಿನ ಭವಿಷ್ಯ ನುಡಿದರು. ಅದನ್ನು ಕೇಳಿದ ಪಾಂಡವರ ಮನಸಿಗೆ ಸಮಾಧಾನವಾಯಿತು. ಮಗುವಿಗೆ ಪರೀಕ್ಷಿತ ಎಂದು ಹೆಸರಿಟ್ಟರು. ಅವನು ಎಲ್ಲ ವಿದ್ಯೆಗಳನ್ನೂ ಕಲಿತು, ಪಾರಂಗತನಾದ. ಇಂದ್ರಪ್ರಸ್ಥ ಮತ್ತು ಹಸ್ತಿನಾಪುರಗಳನ್ನು ಸಮರ್ಥವಾಗಿ ಆಳಿ, ಉತ್ತಮ ರಾಜನೆಂದು ಹೆಸರು ಪಡೆದ. ಜ್ಯೋತಿಷಿಗಳು ನುಡಿದ ಭವಿಷ್ಯವನ್ನು ಸುಳ್ಳಾಗಿಸಲಿಲ್ಲ. ಅವನ ಹೆಂಡತಿಯ ಹೆಸರು ಇರಾವತಿ. ಅವನಿಗೆ ನಾಲ್ವರು ಪುತ್ರರು ಹುಟ್ಟಿದರು. ಅವರಲ್ಲಿ ಮೊದಲನೆಯವನೇ ಜನಮೇಜಯ.

ಆದರೆ ಧರ್ಮರಾಯನಿಗೆ ಆ ಮಹಾಯುದ್ಧದಿಂದ ಆದಂತಹ ಜೀವಹಾನಿಯಿಂದಾಗಿ ಅವನಲ್ಲಿ ಉಂಟಾದ ಅಪರಾಧ ಪ್ರಜ್ಞೆ ಇನ್ನೂ ಕಾಡುತ್ತಿತ್ತು. ಶ್ರೀಕೃಷ್ಣನ ಸಲಹೆಯಂತೆ ಅವನು ಮೂರು ಅಶ್ವಮೇಧ ಯಾಗಗಳನ್ನು ಮಾಡಿದ. ನಂತರ ಕೆಲವು ದಿನಗಳಲ್ಲಿ ಶ್ರೀಕೃಷ್ಣನು ತನ್ನ ರಾಜಧಾನಿಯಾದ ದ್ವಾರಕೆಗೆ ಹೋದ. ಅಲ್ಲಿಯೂ ಸಹ ಸ್ಥಿತಿಗತಿಗಳು ಸರಿಯಾಗಿರಲಿಲ್ಲ. ಒಬ್ಬ ಋಷಿಯ ಶಾಪದಿಂದಾಗಿ ಯಾದವ ಕುಲದವರೆಲ್ಲ ದುಷ್ಕೃತ್ಯಗಳಲ್ಲಿ ಮುಳುಗಿದ್ದರು. ಕುಡಿತ, ಜೂಜು, ಕೊಲೆ, ಸುಲಿಗೆಗಳು ಅವ್ಯಾಹತವಾಗಿ ನಡೆದಿದ್ದುವು. ಪರಸ್ಪರ ಹೊಡೆದಾಟದಿಂದಲೇ ಅವರು ವಿನಾಶದ ಕಡೆಗೆ ಸಾಗುತ್ತಿದ್ದರು. ಅದು ಬಹುಶಃ ವಿಧಿಲಿಖಿತವೂ ಆಗಿತ್ತೆಂದು ತೋರುತ್ತದೆ. ತನ್ನ ಬಾಂಧವರ, ಪ್ರಜೆಗಳ ದುಃಸ್ಥಿತಿಯನ್ನು ಕಂಡ ಶ್ರೀಕೃಷ್ಣನಿಗೆ ಬಹಳ ದುಃಖವಾಯಿತು. ತನ್ನವರು ಈ ರೀತಿಯಾಗಿ ಪರಸ್ಪರ ಹೊಡೆದಾಡಿಕೊಂಡು, ಅಧೋಗತಿಗೆ ಸಾಗುವುದನ್ನು ಅವನು ನೋಡಬೇಕಾಗಿ ಬಂದಿತು. ಯಾದವ ನಾಯಕರು ಒಬ್ಬರ ನಂತರ ಒಬ್ಬರು ಯಮಲೋಕಕ್ಕೆ ಹೋಗುತ್ತಿದ್ದರು. ಶ್ರೀಕೃಷ್ಣನೂ ಸಹ ಇದೆಲ್ಲದರಿಂದ ಬಿಡುಗಡೆ ಹೊಂದಲು ಬಯಸಿದ. ಅವನು ಭೂಲೋಕಕ್ಕೆ ಬಂದ ಉದ್ದೇಶವು ನೆರವೇರಿತ್ತು. ತನ್ನ ಮೂಲ ವಾಸಸ್ಥಾನವಾದ ವಿಷ್ಣುಲೋಕಕ್ಕೆ ತೆರಳಲು ನಿರ್ಧರಿಸಿದ.



> ಪರೀಕ್ಷಿತನು ತನ್ನ ಉತ್ತಮ ರಾಜ್ಯಭಾರದಿಂದ ಒಳ್ಳೆಯ ಹೆಸರು ಗಳಿಸಿದ. ಅವನಿಗೆ ತಾನು ತಾಯಿಯ ಗರ್ಭದಲ್ಲಿದ್ದಾಗ ಶ್ರೀಕೃಷ್ಣನೇ ತನ್ನನ್ನು ಕಾಪಾಡಿದುದು ಎಂದು ಗೊತ್ತಿತ್ತು. ಜೊತೆಗೆ ಪಾಂಡವರನ್ನು ಸದಾ ಪೊರೆದವನೂ ಅವನೇ ಎಂಬುದರ ಅರಿವೂ ಇತ್ತು. ಹೀಗಾಗಿ ಸಹಜವಾಗಿಯೇ ಅವನಿಗೆ ಶ್ರೀಕೃಷ್ಣನೆಂದರೆ ಅತೀವ ಭಕ್ತಿ.

ಇತ್ತ ವಿದುರನು ತೀರ್ಥಯಾತ್ರೆಯಿಂದ ಹಿಂತಿರುಗಿ ಹಸ್ತಿನಾಪುರಕ್ಕೆ ಬಂದ. ಕೌರವರ ತಂದೆಯಾದ ಧೃತರಾಷ್ಟ್ರನು ಇನ್ನೂ ಅಲ್ಲಿಯೇ ವಾಸಿಸುತ್ತಿದ್ದ. ಎಲ್ಲ ಮಕ್ಕಳನ್ನೂ ಕಳೆದುಕೊಂಡ ಅವನ ದುಃಸ್ಥಿತಿ ಕರುಣಾಜನಕವಾಗಿತ್ತು. ಅತ್ಯಂತ ಬುದ್ಧಿವಂತ ಮತ್ತು ನ್ಯಾಯನಿಷ್ಠನಾಗಿದ್ದ ವಿದುರನು ಧೃತರಾಷ್ಟ್ರನಿಗೆ 'ಈಗ ನಾವೆಲ್ಲರೂ ವೃದ್ಧರಾಗಿದ್ದೇವೆ. ಯಾವ ಕ್ಷಣದಲ್ಲಾದರೂ ನಮಗೆ ಸಾವು ಬರಬಹುದು. ಈ ಜೀವನಕ್ಕೆ ಏನು ಅರ್ಥವಿದೆ, ಇನ್ನು ಈ ಹಸ್ತಿನಾಪುರಿಯಲ್ಲಿ ಇರುವುದೇಕೆ ನಾವು ಇಲ್ಲಿಂದ ಹೊರಟು ಹೋಗೋಣ. ನೀನು ನಿನ್ನ ಪುತ್ರಮೋಹದಿಂದಾಗಿ ಅನೇಕ ತಪ್ಪುಗಳನ್ನು ಎಸಗಿದೆ. ಪಾಂಡವರಿಗೆ ರಾಜ್ಯವನ್ನು ನಿರಾಕರಿಸಿದೆ, ಅವರು ಕಾಡಿನಲ್ಲಿ ಅಲೆಯುವಂತೆ ಮಾಡಿದೆ. ತುಂಬಿದ ಸಭೆಯಲ್ಲಿ ಅವರ ಹೆಂಡತಿಯ ವಸ್ತ್ರಾಪಹರಣ ಆಗುತ್ತಿದ್ದಾಗಲೂ ಸುಮ್ಮನೇ ಕುಳಿತೆ. ಈಗ ನೀನು ಅದೇ ಪಾಂಡವರ ಕೃಪೆಯಲ್ಲಿ ಬದುಕುತ್ತಿದ್ದೀಯೆ. ಇದು ನಿಜಕ್ಕೂ ನಾಚಿಕೆಗೇಡಲ್ಲವೇ? ನಿನಗೆ ಇದು ಅರ್ಥವಾಗುತ್ತಿಲ್ಲವೋ ಹೇಗೆ'? ಎಂದು ಛೇಡಿಸಿದ. ಅವನ ಮಾತುಗಳು ಧೃತರಾಷ್ಟ್ರನಿಗೆ ಸರಿ ಎನಿಸಿತು. ಪುತ್ರಶೋಕದಲ್ಲಿಯೇ ಮುಳುಗಿದ್ದ ಅವನು ಬೇರೇನನ್ನೂ ಚಿಂತಿಸುವ ಸ್ಥಿತಿಯಲ್ಲಿ ಇರಲಿಲ್ಲ. ಆದರೆ ಈಗ ವಿದುರನ ಮಾತಿನಿಂದ ಅವನಿಗೆ ಬಡಿದೆಬ್ಬಿಸಿದಂತಾಯಿತು. ಕೂಡಲೇ ಅವನು ತನ್ನ ಹೆಂಡತಿಯಾದ ಗಾಂಧಾರಿ ಮತ್ತು ವಿದುರನೊಡನೆ ವಾನಪ್ರಸ್ಥಕ್ಕೆ ಹೊರಟ. ಪಾಂಡವರು ಎಷ್ಟೇ ಬೇಡಿಕೊಂಡರೂ ಅವರ ತಾಯಿಯಾದ ಕುಂತಿಯೂ ಸಹ ಇವರೊಡನೆ ಹೊರಟಳು.

ತಮ್ಮ ಕೊನೆಯ ಆಶ್ರಮವಾದ ವಾನಪ್ರಸ್ಥದಲ್ಲಿದ್ದ ಈ ಮೂವರೂ ಕೆಲವು ದಿನಗಳಲ್ಲಿ ಮರಣ ಹೊಂದಿದರು. ಈ ಸುದ್ದಿಯನ್ನು ಕೇಳಿದ ಧರ್ಮರಾಯ ಮತ್ತಷ್ಟು ಖಿನ್ನನಾದ. ಜೊತೆಗೆ ದ್ವಾರಕೆಯಲ್ಲಿ ಯಾದವರೆಲ್ಲರೂ ಬಡಿದಾಡಿ ಸತ್ತುದಲ್ಲದೆ ಪಾಂಡವರ ಪರಮ ಪ್ರಿಯನಾದ ಶ್ರೀಕೃಷ್ಣನೂ ದೇಹತ್ಯಾಗ ಮಾಡಿದ ಸುದ್ದಿಯು ಅವನನ್ನು ಮತ್ತಷ್ಟು ವ್ಯಥೆಗೀಡುಮಾಡಿತು. ಶ್ರೀಕೃಷ್ಣ ನಿಲ್ಲದ ತಮ್ಮ ಬದುಕು ವ್ಯರ್ಥ ಎಂದೇ ಅವನ ಭಾವನೆ. ತಮ್ಮ ಬಾಳಿನ ಬೆಳಕಾಗಿದ್ದ ಅವನೇ ಇಲ್ಲದ ಮೇಲೆ ಅವರ ಬದುಕು ಬರೀ ಕತ್ತಲೆ ಎಂಬ ಭಾವ ಅವನನ್ನು ಆವರಿಸಿತು. ಪರೀಕ್ಷಿತನಿಗೆ ಪಟ್ಟಾಭಿಷೇಕ ಮಾಡಿ ಸ್ವರ್ಗಾರೋಹಣಕ್ಕಾಗಿ ತನ್ನ ತಮ್ಮಂದಿರು, ಹೆಂಡತಿಯಾದ ದ್ರೌಪದಿಯೊಡನೆ ಹಿಮಾಲಯಕ್ಕೆ ತೆರಳಿದ.

ಇತ್ತ ಪರೀಕ್ಷಿತನು ತನ್ನ ಉತ್ತಮ ರಾಜ್ಯಭಾರದಿಂದ ಒಳ್ಳೆಯ ಹೆಸರು ಗಳಿಸಿದ. ಅವನಿಗೆ ತಾನು ತಾಯಿಯ ಗರ್ಭದಲ್ಲಿದ್ದಾಗ ಶ್ರೀಕೃಷ್ಣನೇ ತನ್ನನ್ನು ಕಾಪಾಡಿದುದು ಎಂದು ಗೊತ್ತಿತ್ತು. ಜೊತೆಗೆ ಪಾಂಡವರನ್ನು ಸದಾ ಪೊರೆದವನೂ ಅವನೇ ಎಂಬುದರ ಅರಿವೂ ಇತ್ತು. ಹೀಗಾಗಿ ಸಹಜವಾಗಿಯೇ ಅವನಿಗೆ ಶ್ರೀಕೃಷ್ಣನೆಂದರೆ ಅತೀವ ಭಕ್ತಿ. ಒಂದು ದಿನ ಅವನು ಬೇಟೆಯಾಡಲು ಕಾಡಿಗೆ ಹೋದ. ಮಧ್ಯದಲ್ಲಿ ನೀರಡಿಕೆಯಾಗಲು, ಸಮೀಪದಲ್ಲಿಯೇ ಇದ್ದ ಶಮಿಕ ಮುನಿಯ ಆಶ್ರಮಕ್ಕೆ ಹೋದ. ಮುನಿಯು ಆಳವಾದ ತಪಸ್ಸಿನಲ್ಲಿ ಮಗ್ನನಾಗಿದ್ದ. ಅಲ್ಲಿ ಮತ್ಯಾರೂ ಇರಲಿಲ್ಲ. ಪರೀಕ್ಷಿತನು ಪೂಜ್ಯರೆ, ಕುಡಿಯಲು ಸ್ವಲ್ಪ ನೀರು ಕೊಡಿ ಎಂದು ಕೇಳಿದ.

ಧ್ಯಾನಮಗ್ನನಾಗಿದ್ದ ಮುನಿಯಿಂದ ಯಾವ ಪ್ರತಿಕ್ರಿಯೆ ಬಾರದಿರಲು, ಅವನು ತನ್ನನ್ನು ಉದ್ದೇಶಪೂರ್ವಕವಾಗಿ ಅವಗಣಿಸಿದ್ದಾನೆ ಎಂದು ಭಾವಿಸಿದ ಅವನಿಗೆ ಕೋಪ ಬಂತು. ಕಲಿಯುಗದ ಪ್ರಭಾವ. ಅಲ್ಲೇ ಸಮೀಪದಲ್ಲಿ ಸತ್ತುಬಿದ್ದಿದ್ದ ಒಂದು ಹಾವನ್ನು ತನ್ನ ಬಾಣದಿಂದೆತ್ತಿ ತಂದು ಮುನಿಯ ಕೊರಳಿಗೆ ಹಾಕಿ ಹೊರಟ. ನಂತರ ಅಲ್ಲಿಗೆ ಬಂದ ಮುನಿಯ ಮಗನು ಕ್ರುದ್ಧನಾಗಿ 'ಈ ಅಕ್ಷಮ್ಯ ಅಪರಾಧಕ್ಕಾಗಿ ಇಂದಿನಿಂದ ಏಳನೇ ದಿನ ಸರ್ಪರಾಜನಾದ ತಕ್ಷಕನ ಕಡಿತದಿಂದ ಸಾಯಿ' ಎಂದು ಶಾಪವಿತ್ತ.

ಇದನ್ನು ಕೇಳಿದ ಪರೀಕ್ಷಿತನು ದುಃಖಿತನಾಗಿ ಎಲ್ಲವನ್ನೂ ತ್ಯಜಿಸಿ, ಗಂಗಾತಟದಲ್ಲಿ ವಾಸಿಸತೊಡಗಿದ. ಅವನ ಆತ್ಮಕ್ಕೆ ಮೋಕ್ಷ ದೊರಕಿಸಲು ಶುಕದೇವನು ಅವನಿಗೆ ಭಾಗವತದ ಕತೆಗಳನ್ನು ಹೇಳಲಾರಂಭಿಸಿದ. ಜನರೆಲ್ಲ ತಮ್ಮ ರಾಜನ ಒಳಿತಿಗಾಗಿ ಪ್ರಾರ್ಥಿಸತೊಡಗಿದರು. ಏನೇ ಆದರೂ ಎಲ್ಲದಕ್ಕೂ ಕೊನೆ ಎಂಬುದು ಇದೆಯಲ್ಲ? ಪರೀಕ್ಷಿತ ಎಷ್ಟೇ ಸನ್ನಡತೆಯವನಾಗಿದ್ದರೂ ಒಂದು ದುಷ್ಕೃತ್ಯದಿಂದ ತಕ್ಷಕನಿಂದ ಸಾವಿಗೀಡಾದ.

ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣ: ಸೆ.2ಕ್ಕೆ ವಿಚಾರಣೆ ಮುಂದೂಡಿಕೆ



ಬೆಂಗಳೂರು: ತಮ್ಮ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣ ರದ್ದು ಕೋರಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕ ಸದಸ್ಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಯಡಿಯೂರಪ್ಪ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿ, ಫಿರ್ಯಾದು ನೀಡಿದ್ದ ಮಹಿಳೆಗೆ ಇಂತಹದೊಂದು ಹವ್ಯಾಸ ಇತ್ತು. ಹಲವರ ಮೇಲೆ ದೂರು ದಾಖಲಿಸಿದ್ದರು. ಈಗಾಗಲೇ ಇಂತಹ ಘಟನೆ ನಡೆದಿಲ್ಲವೆಂದು ಹೇಳಿದ ಸಾಕ್ಷಿಗಳೂ ಇದ್ದಾರೆ ಎಂದು ಪ್ರತಿಪಾದಿಸಿದರು. ಕೆಲಕಾಲ ವಾದ ಆಲಿಸಿದ ನ್ಯಾಯಪೀಠ ಸೆ.2ಕ್ಕೆ ವಿಚಾರಣೆ ಮುಂದೂಡಿತು.

ಉಚಿತ ಥೆರಪಿ

ಮೈಸೂರು,ಆ.23(ಪಿಎಂ)– ಮೈಸೂರಿನ ಕೆಜಿ ಕೊಪ್ಪಲಿನ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿ ಸೆರಾಕೇರ್ ಮೈಸೂರು ಹೆಲ್ತ್ ಸೆಂಟರ್‌ನಲ್ಲಿ ವಿವಿಧ ರೋಗಗಳ ನಿವಾರಣೆಗೆ ಉಚಿತವಾಗಿ ಥೆರಪಿ ನೀಡುವುದಾಗಿ ಸೆಂಟರ್‌ನ ಪ್ರಕಟಣೆ ತಿಳಿಸಿದೆ. ನೈಸರ್ಗಿಕ ಚಿಕಿತ್ಸೆ ಮೂಲಕ ಪರಿಹಾರ ದೊರಕಿಸಿಕೊಡಲಾಗುವುದು. ಅಕ್ಯುಪ್ರೆಷರ್, ಫಾರ್ ಇನ್‌ಫ್ರಾರೆಡ್ ಕಿರಣಗಳು, ನೀಡಿಂಗ್, ಮಾಕ್ಷಿಬುಷನ್, ಕೈರೋಪ್ರಾಟಿಕ್ ಎಂಬ ಐದು ಥೆರಪಿಗಳ ಮೂಲಕ ಚಿಕಿತ್ಸೆ ನೀಡಲಾಗುವುದು. ವಿವರಗಳಿಗೆ ಮೊ.ಸಂ. 79960 11692 ಸಂಪರ್ಕಿಸಬಹುದು.

ದರ್ಶನ್ ಬಳ್ಳಾರಿ ಜೈಲಿಗೆ ವರ್ಗಾವಣೆ: ಆ.30ರಂದು ಅರ್ಜಿ ವಿಚಾರಣೆ



ಬೆಂಗಳೂರು, ಆ.23– ರೇಣುಕಾಸ್ವಾಮಿ ಕೊಲೆ ಆರೋಪಿ ದರ್ಶನ್ ಸದ್ಯಕ್ಕೆ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ. ಸೆಕ್ಯೂರಿಟಿ ಕಾರಣದಿಂದ ಅವರನ್ನು ಬಳ್ಳಾರಿ ಜೈಲಿಗೆ ಕಳುಹಿಸಲು ಈಗಾಗಲೇ ನ್ಯಾಯಾಲಯಕ್ಕೆ ಜೈಲಾಧಿಕಾರಿಗಳು ಮನವಿ ಮಾಡಿಕೊಂಡಿದ್ದರು. ಶನಿವಾರ (ಆ.23) ವಿಚಾರಣೆ ನಡೆದಿದ್ದು, ಬೇರೆ ಜೈಲಿಗೆ ದರ್ಶನ್ ವರ್ಗಾವಣೆ ವಿಚಾರವನ್ನು ನ್ಯಾಯಾಲಯವು ಮುಂದೂಡಿದೆ. ಆರೋಪಿಗಳಾದ ದರ್ಶನ್, ಪವಿತ್ರಾ ಸೇರಿದಂತೆ ಒಟ್ಟು ಏಳು ಆರೋಪಿಗಳು 57ನೇ ಸೆಷನ್ಸ್ ಕೋರ್ಟ್‌ನಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಜೈಲಿನಿಂದಲೇ ಹಾಜರಾಗಿದ್ದರು. ಪವಿತ್ರಾ ಗೌಡ ಪರ ವಕೀಲರಿಂದ ಸ್ಟ್ಯಾಟುಚರಿ(ಶಾಸನಬದ್ಧ) ಜಾಮೀನು ಕೋರಿ ಅರ್ಜಿ ಸಲ್ಲಿಕೆಯಾಗಿದೆ. ಈ ವಿಚಾರಣೆಯನ್ನೂ ಆ.30ಕ್ಕೆ ನ್ಯಾಯಾಲಯ ಮುಂದೂಡಿಕೆ ಮಾಡಿದೆ. ಸೆ.9ರಂದು ಎಲ್ಲಾ ಆರೋಪಿಗಳನ್ನು ಮತ್ತೆ ಹಾಜರುಪಡಿಸಲು ಕೋರ್ಟ್ ಸೂಚಿಸಿದೆ. ಹೀಗೆ ಆಗಸ್ಟ್ 30ರವರೆಗೂ ದರ್ಶನ್ ಹಾಗೂ ಇತರೆ ಆರೋಪಿಗಳು ಪರಪ್ಪನ ಅಗ್ರಹಾರ ಜೈಲಲ್ಲೇ ಇರಲಿದ್ದಾರೆ.

ಕೆಇಎ ಕೌನ್ಸೆಲಿಂಗ್ ನಿಯಮಗಳಲ್ಲಿ ಬದಲಾವಣೆ: ವಿದ್ಯಾರ್ಥಿಗಳಲ್ಲಿ ಗೊಂದಲ


ಬೆಂಗಳೂರು, ಆ.23– ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಎಂಜಿನಿಯರಿಂಗ್ ಸೀಟು ಕೌನ್ಸೆಲಿಂಗ್‌ನಲ್ಲಿ ಹಠಾತ್ ನಿಯಮ ಬದಲಾವಣೆ ಮಾಡಿರುವುದರಿಂದ ಸಾವಿರಾರು ವಿದ್ಯಾರ್ಥಿಗಳು ಮತ್ತು ಪೋಷಕರು ಇಕ್ಕಟ್ಟಿಗೆ ಸಿಲುಕಿದ್ದಾರೆ. ಹೊಸ ನಿಯಮವು ವೈದ್ಯಕೀಯ ವಿದ್ಯಾರ್ಥಿಗಳಿಗೆ ಮಾತ್ರ ಅನುಕೂಲಕರವಾಗಿದೆ. ಹೊಸ ನಿಯಮದಡಿ 2ನೇ ಸುತ್ತಿನಲ್ಲಿ ಸೀಟು ಹಂಚಿಕೆಯಾದ ಯಾರಾದರೂ ಕಡ್ಡಾಯವಾಗಿ ಪ್ರವೇಶ ಪಡೆಯಲು ಮತ್ತು ತರಗತಿಗಳಿಗೆ ಹಾಜರಾಗಲು ಪ್ರಾರಂಭಿಸಬೇಕಾಗುತ್ತದೆ. ಆದರೆ 3ನೇ ಸುತ್ತಿನಲ್ಲಿ ಸಂಭವನೀಯ ಅಪ್‌ಗ್ರೇಡ್‌ಗಾಗಿ ಕಾಯುತ್ತಿದ್ದಾರೆ. ಕೆಸಿಇಟಿ ಮತ್ತು ಕಾಮೆಡ್–ಕೆ ಕೌನ್ಸೆಲಿಂಗ್ ವೇಳಾಪಟ್ಟಿಗಳ ನಡುವಿನ ಅತಿಕ್ರಮಣದಿಂದಾಗಿ ಪರಿಸ್ಥಿತಿ ಹೆಚ್ಚು ಜಟಿಲವಾಗಿದೆ ಎಂದು ವಿದ್ಯಾರ್ಥಿಗಳು ಹೇಳುತ್ತಾರೆ. ಕಾಮೆಡ್–ಕೆ ಸುತ್ತಿನ ಪ್ರವೇಶಕ್ಕೆ ಆ.28 ಕೊನೇ ದಿನ. 2ನೇ ಸುತ್ತಿನ ಕೆಸಿಇಟಿಗೆ ಅಣಕು ಹಂಚಿಕೆ ಫಲಿತಾಂಶಗಳನ್ನು ಆ.29ರಂದು ಪ್ರಕಟಿಸಲಾಗುವುದು. ವಿದ್ಯಾರ್ಥಿಗಳು ನಂತರ ಕೆಸಿಇಟಿ ಸೀಟು ಪಡೆದರೆ ಶುಲ್ಕವನ್ನು ಮರುಪಾವತಿಸಲಾಗುವುದು ಎಂದು ಕಾಮೆಡ್–ಕೆ ಭರವಸೆ ನೀಡಿದ್ದರೂ, ವಿದ್ಯಾರ್ಥಿಗಳು ತಮ್ಮ ಕಾಮೆಡ್–ಕೆ ಸೀಟುಗಳನ್ನು ಬಿಟ್ಟುಕೊಡುವ ಹೊತ್ತಿಗೆ ಅದರ ಕೌನ್ಸೆಲಿಂಗ್ ಸೆ.2ರಂದು ಮುಕ್ತಾಯಗೊಳ್ಳಬೇಕಾಗುತ್ತದೆ. ಕೆಇಎ ಅಂತಹ ಬದಲಾವಣೆಗಳನ್ನು ತರಲು ಬಯಸಿದರೆ, ಕೌನ್ಸೆಲಿಂಗ್ ಪ್ರಾರಂಭವಾಗುವ ಮೊದಲೇ ಅದನ್ನು ಘೋಷಿಸಬೇಕಾಗಿತ್ತು ಎಂದು ಮತ್ತೊಬ್ಬ ವಿದ್ಯಾರ್ಥಿನಿ ಮೇಘನಾ ಹೇಳುತ್ತಾರೆ. ವೈದ್ಯಕೀಯ ಸಮಾಲೋಚನಾ ಸಮಿತಿ ಅನುಸರಿಸುವ ರಾಷ್ಟ್ರೀಯ ಮಾದರಿಯೊಂದಿಗೆ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಹೊಂದಿಸಲು ವಿನ್ಯಾಸಗೊಳಿಸಲಾಗಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಪ್ರಸನ್ನ ಹೇಳುತ್ತಾರೆ.

ಆನೆ ಮರಿ ಬಗ್ಗೆ ಕೇರಳ ತಾತ್ಸಾರ; ಕರ್ನಾಟಕದ ಮಮಕಾರ

ಮೈಸೂರು,ಆ.23(ಎಂಟಿವೈ)–ತಾಯಿಯಿಂದ ಬೇರ್ಪಟ್ಟು ಕೇರಳದಿಂದ ಗಡಿ ದಾಟಿ ಕರ್ನಾಟಕಕ್ಕೆ ಬಂದಿದ್ದ ಹೆಣ್ಣಾನೆ ಮರಿ ಸಂರಕ್ಷಣೆಗೆ ಕೇರಳ ಅರಣ್ಯ ಇಲಾಖೆ ತಾತ್ಸಾರ ಮುಂದುವರೆಸಿದ್ದರೆ, ಕರ್ನಾಟಕ ಅರಣ್ಯ ಪಡೆ ಆನೆ ಮರಿ ಮೇಲೆ ಮಮಕಾರ ತೋರುತ್ತಾ, ಆರೈಕೆ ಮಾಡುತ್ತಿದೆ.

ತಾಯಿ ಮಡಿಲಿಗೆ ಸೇರಿಸಲು ನಾಗರಹೊಳೆಯ ಹುಲಿ ಸಂರಕ್ಷಿತ ಪ್ರದೇಶ ಅಂತರಸಂತೆ ಉಪವಿಭಾಗದ ಎಸಿಎಫ್ ಮಧು ಹಾಗೂ ಡಿ.ಬಿ.ಕುಪ್ಪೆ ವಲಯದ ಆರ್‌ಎಫ್‌ಓ ಹನುಮಂತರಾಜು ನೇತೃತ್ವದಲ್ಲಿ ಅರಣ್ಯ ಸಿಬ್ಬಂದಿ ಆನೆ ಮರಿ ಸಿಕ್ಕಿದ ಹೊಳೆ ಭಾಗದ ಅರಣ್ಯ ಪ್ರದೇಶದಲ್ಲಿ ಮರಿಯೊಂದಿಗೆ ಎರಡು ದಿನ ತಾಯಿ ಆನೆ ಹುಡುಕಾಟ ನಡೆಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಈ ನಡುವೆ ಕೇರಳದ ವಯನಾಡು ವನ್ಯಜೀವಿ ವಲಯದ ಅಧಿಕಾರಿಗಳು, ಮುತ್ತುಂಗ ಅರಣ್ಯ ವ್ಯಾಪ್ತಿಯಲ್ಲಿರುವ ಪುನರ್ವಸತಿ ಕೇಂದ್ರಕ್ಕೆ ಆನೆ ಮರಿ ಕರೆದೊಯ್ಯುವುದಾಗಿ ಹೇಳಿದ್ದರು. ಆದರೆ, ಇದುವರೆಗೂ ಯಾವ ಅಧಿಕಾರಿಗಳು ಬಂದಿಲ್ಲ.

ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿಯೇ ಆನೆ ಮರಿಯನ್ನು ಪಾಲನೆ ಮಾಡುವಂತೆ ಪ್ರಾಣಿ ಪ್ರಿಯರು ಸಾಮಾಜಿಕ ಜಾಲತಾಣದಲ್ಲಿ ಆಗ್ರಹಿಸಿದ್ದರು. ಈ ಹಿನ್ನೆಲೆಯಲ್ಲಿ ಇದೀಗ ಡಿ.ಬಿ.ಕುಪ್ಪೆ ವಲಯದ ಬಳ್ಳೆ ಕ್ಯಾಂಪ್‌ನಲ್ಲಿ ತಾತ್ಕಾಲಿಕವಾಗಿ ಆನೆ ಮರಿಯನ್ನು ಆರೈಕೆ ಮಾಡಲಾಗುತ್ತಿದೆ. ಮೇಲಾಧಿಕಾರಿಗಳ ಅನುಮತಿ ಪಡೆದು ಮುಂದಿನ ದಿನಗಳಲ್ಲಿ ಆನೆ ಮರಿಯನ್ನು ಮೃಗಾಲಯದ ಪುನರ್ವಸತಿ ಕೇಂದ್ರ ಅಥವಾ ಯಾವುದಾದರೂ ಆನೆ ಕ್ಯಾಂಪ್‌ಗೆ ಕೊಂಡೊಯ್ದು ಆನೆ ಮರಿಯನ್ನು ಪಾಲನೆ ಮಾಡಲು ನಿರ್ಧರಿಸಲಾಗಿದೆ.



ಡಿ.ಬಿ.ಕುಪ್ಪೆ ಕ್ಯಾಂಪಸ್‌ನಲ್ಲಿರುವ ಆನೆ ಮರಿ.

ದಿನಕ್ಕೆ ಆರು ಲೀಟರ್ ಮೇಕೆ ಹಾಲು: ತಾಯಿಯ ಹಾಲು ಇಲ್ಲದೆ ಕಂಗೆಟ್ಟಿದ್ದ ಆನೆ ಮರಿಗೆ ಡಿ.ಬಿ.ಕುಪ್ಪೆ ವಲಯದ ಅರಣ್ಯಾಧಿಕಾರಿಗಳೇ ತಾಯಿಯ ಮಮಕಾರ ನೀಡುತ್ತಿದ್ದಾರೆ. ಆನೆ ಮರಿ ಚೇತರಿಕೆಗೆ ಮೇಕೆ ಹಾಲು ಅನಿವಾರ್ಯವಾಗಿದ್ದರಿಂದ, ಹೆಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಳ್ಳಿಯಲ್ಲಿರುವ ಮೇಕೆ ಫಾರಂನಿಂದ ಪ್ರತಿದಿನ ಆರು ಲೀಟರ್ ಮೇಕೆ ಹಾಲು ತಂದು ಆನೆ ಮರಿಗೆ ಕುಡಿಸಲಾಗುತ್ತಿದೆ. ಇದರಿಂದ ಆನೆ ಮರಿ ಆರೋಗ್ಯದಲ್ಲಿ ಚೇತರಿಕೆ ಕಂಡಿದ್ದು, ಲವಲವಿಕೆಯಿಂದ ಅರಣ್ಯ ಸಿಬ್ಬಂದಿಗಳೊಂದಿಗೆ ಓಡಾಡುತ್ತಿದೆ.

ಶ್ಲಾಘನೆ: 6 ತಿಂಗಳ ಆನೆ ಮರಿ ಆರೈಕೆ ಸವಾಲಿನ ಕೆಲಸ. ಆದರೂ, ಅದನ್ನು ಮರಳಿ ತಾಯಿ ಮಡಿಲಿಗೆ ಸೇರಿಸುವ ಪ್ರಯತ್ನ ಮಾಡಿದರೂ ಸಾಧ್ಯವಾಗಿಲ್ಲ. ಹೊಳೆಯಲ್ಲಿ ಭಾರಿ ಪ್ರಮಾಣದ ನೀರು ಹರಿಯುತ್ತಿರುವುದರಿಂದ ಮರಿಯನ್ನು ಹೊಳೆ ದಾಟಿಸಿ, ಕೇರಳದ ಅರಣ್ಯ ಭಾಗಕ್ಕೆ ಬಿಡುವುದಕ್ಕೆ ಸಾಧ್ಯವಾಗಿಲ್ಲ. ಒಂದು ವೇಳೆ ತಾಯಿ ಆನೆ ಬರದೇ ಇದ್ದರೆ, ಹುಲಿ ಬಾಯಿಗೆ ಆನೆ ಮರಿ ತುತ್ತಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಅರಣ್ಯ ಸಿಬ್ಬಂದಿಯೇ ಪಾಲನೆ ಮಾಡುತ್ತಿರುವುದರಿಂದ ಕರ್ನಾಟಕ ಮಾತ್ರವಲ್ಲದೆ, ಕೇರಳದ ಪ್ರಾಣಿಪ್ರಿಯರು ಅಂತರಸಂತೆ ಉಪವಿಭಾಗದ ಅರಣ್ಯ ಸಿಬ್ಬಂದಿ ಹೃದಯ ವೈಶಾಲ್ಯತೆಗೆ ಶ್ಲಾಘಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಉತ್ತರಾಖಂಡದಲ್ಲಿ ಮೇಘ ಸ್ಫೋಟ: ಇಬ್ಬರು ನಾಪತ್ತೆ

ಡೆಹರಾಡೂನ್, ಆ. 23– ಉತ್ತರಖಾಂಡದ ಚಮೋಲಿ ಜಿಲ್ಲೆಯ ಥರಾಲಿ ತಹಸಿಲ್‌ನಲ್ಲಿ ತಡರಾತ್ರಿ ಮೇಘಸ್ಫೋಟ ಸಂಭವಿಸಿದ್ದು, ಇಬ್ಬರು ಕಾಣೆಯಾಗಿದ್ದು ಹಲವಾರು ಮನೆಗಳಿಗೆ ಹಾನಿಯಾಗಿರುವ ಘಟನೆ ನಡೆದಿದೆ

ಮೇಘಸ್ಫೋಟ ಸಂಭವಿಸಿ, ವ್ಯಾಪಕ ಹಾನಿ ಸಂಭವಿಸಿದೆ, ಕಾಣೆಯಾದ ಮಂದಿಯ ಹುಡುಕಾಟ ನಡೆದಿದೆ ಜೊತೆಗೆ ರಕ್ಷಣಾಕಾರ್ಯ ಚುರುಕುಗೊಂಡಿದೆ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಸಂದೀಪ್ ತಿವಾರಿ ತಿಳಿಸಿದ್ದಾರೆ

ಈ ಕುರಿತು ಸಾಮಾಜಿಕ ಜಾಲ ತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಮುಖ್ಯಮಂತ್ರಿ ಪುಷ್ಕರ್ ಧಾಮಿ, ತಡರಾತ್ರಿ ಚಮೋಲಿ ಜಿಲ್ಲೆಯ ಥರಾಲಿ ಪ್ರದೇಶದಲ್ಲಿ ಮೇಘಸ್ಫೋಟದ ದುರಂತದ ಬಗ್ಗೆ ಸಮಗ್ರ ಮಾಹಿತಿ ಪಡೆಯಲಾಗುತ್ತಿದೆ, ಜೊತೆಗೆ ರಕ್ಷಣಾ ಪಡೆಗಳು ಸ್ಥಳದಲ್ಲಿ ಬೀಡುಬಿಟ್ಟಿವೆ ಎಂದಿದ್ದಾರೆ

ಜಿಲ್ಲಾಡಳಿತ ಮತ್ತು ಪೊಲೀಸರು ಸ್ಥಳಕ್ಕೆ ತಲುಪಿದ್ದಾರೆ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ. ಈ ನಿಟ್ಟಿನಲ್ಲಿ ಸ್ಥಳೀಯ ಆಡಳಿತ 'ದೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ ಮತ್ತು ವೈಯಕ್ತಿಕವಾಗಿ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ ಎಂದು ಅವರು ಹೇಳಿದ್ದಾರೆ

ಚಮೋಲಿ ಪೊಲೀಸರ ಪ್ರಕಾರ ಮೇಘಸ್ಫೋಟದ ತೀವ್ರತೆ ಪರಿಗಣಿಸಿ ರಾತ್ರಿಯಲ್ಲಿ ಸ್ಥಳಕ್ಕೆ ತಂಡಗಳನ್ನು ಕಳುಹಿಸಲಾಯಿತು ಮತ್ತು ಜನರನ್ನು ಮನೆಗಳಿಂದ ಸ್ಥಳಾಂತರಿಸಲಾಗಿದೆ ಎಂದು ಹೇಳಿದ್ದಾರೆ ಥರಾಲಿ ಪೊಲೀಸ್ ಠಾಣೆ ಪ್ರದೇಶದಲ್ಲಿ ನಿನ್ನೆ ರಾತ್ರಿ ಸುರಿದ ಭಾರೀ ಮಳೆಯಿಂದಾಗಿ, ಜನ ಜೀವನ ಅಸ್ತವ್ಯಸ್ತವಾಗಿದೆ

ಮಕ್ಕಳ ರಕ್ಷಣಾ ಘಟಕಕ್ಕೂ ಬಾಂಬ್ ಬೆದರಿಕೆ!

ಮೈಸೂರು, ಆ.23– ಮೈಸೂರಿನ ಜಿಲ್ಲಾ ಮಕ್ಕಳ ರಕ್ಷಣಾ ಘಟಕ(ಡಿಸಿಪಿಯು)ಕ್ಕೆ ಬಾಂಬ್ ಬೆದರಿಕೆ ಹಾಕಿದ್ದರ ಬಗ್ಗೆ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿಸಿಪಿಯು ಕಚೇರಿಯ ಇ–ಮೇಲ್ ವಿಳಾಸಕ್ಕೆ ಗುರುವಾರ ಬೆಳಗ್ಗೆ 7.30ಕ್ಕೆ rajagiri_marudhayan@outlook.com ಐಡಿಯಿಂದ ಸಂದೇಶ ಕಳುಹಿಸಿರುವ ದುಷ್ಕರ್ಮಿ, ನಿಮ್ಮ ಕಚೇರಿಯಲ್ಲಿ ಬಾಂಬ್ ಇಡಲಾಗಿದ್ದು, ಮಧ್ಯಾಹ್ನ 1.45 ರೊಳಗೆ ಎಲ್ಲರನ್ನೂ ಖಾಲಿ ಮಾಡಿಸಿ ಎಂದು ಬೆದರಿಸಿದ್ದಾನೆ. ಈ ಬಗ್ಗೆ ಘಟಕದ ಸಿಬ್ಬಂದಿ ವಿಶೇಷ ಬಾಲ ಪೊಲೀಸ್ ಘಟಕಕ್ಕೆ ಮಾಹಿತಿ ನೀಡಿದ್ದಾರೆ. ಬಳಿಕ ಪೊಲೀಸ್ ಕಂಟ್ರೋಲ್ ರೂಂ ಮೂಲಕ ವಿಜಯನಗರ ಪೊಲೀಸ್ ಠಾಣೆಗೆ ವಿಷಯ ತಿಳಿಸಲಾಗಿದೆ. ಕೂಡಲೇ ದೌಡಾಯಿಸಿದ ಪೊಲೀಸರು ಪರಿಶೀಲನೆ ನಡೆಸಿದಾಗ ಯಾವುದೇ ಸ್ಫೋಟಕ ಪತ್ತೆಯಾಗಿಲ್ಲ. ಘಟಕದಲ್ಲಿ ಕಾನೂನು ಮತ್ತು ಪರಿವೀಕ್ಷಣಾಧಿಕಾರಿ ಚಂದ್ರಕುಮಾರ್ ನೀಡಿದ ದೂರಿನನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

45 ಲಕ್ಷಕ್ಕೆ ಖರೀದಿಸಿದ ಮನೆ ಮೇಲಿತ್ತು 75 ಲಕ್ಷ ಸಾಲ!

ಪೊಲೀಸರ ಮೊರೆ ಹೋದ ಮನೆ ಮಾಲೀಕ

ಮೈಸೂರು, ಆ.23– ವ್ಯಕ್ತಿಯೊಬ್ಬರು 45 ಲಕ್ಷಕ್ಕೆ ಖರೀದಿಸಿದ ಮನೆ ಮೇಲೆ 75 ಲಕ್ಷ ರೂ. ಸಾಲದ ಹೊರೆ ಇರುವುದು ತಡವಾಗಿ ಬೆಳಕಿಗೆ ಬಂದಿದ್ದು, ಈ ಸಂಬಂಧ ಉದಯಗಿರಿ ಠಾಣೆಯಲ್ಲಿ ಶುಕ್ರವಾರ ಪ್ರಕರಣ ದಾಖಲಾಗಿದೆ.

ಮೈಸೂರಿನ ಬೇರೊಂದು ಬಡಾವಣೆಯಲ್ಲಿ ನೆಲೆಸಿರುವ ವ್ಯಕ್ತಿಯೊಬ್ಬರು, ಗಾಯತ್ರಿಪುರಂ 2ನೇ ಹಂತದಲ್ಲಿ 45 ಲಕ್ಷ ರೂ.ಗೆ ಮನೆ ಖರೀದಿಸಿದ್ದರು. 2024ರ ಡಿಸೆಂಬರ್‌ನಲ್ಲಿ ಕ್ರಯ ಪತ್ರದ ಮೂಲಕ ನೋಂದಣಿಯೂ ಆಗಿದೆ. ನಂತರ ಬ್ಯಾಂಕ್ ಅಧಿಕಾರಿಗಳು ಮನೆ ಬಳಿ ಬಂದು ಸಾಲ ವಸೂಲಾತಿ ಸಂಬಂಧ ನೋಟೀಸ್ ನೀಡಿದ್ದಾರೆ. ಈ ಬಗ್ಗೆ ಬ್ಯಾಂಕ್‌ನಲ್ಲಿ ವಿಚಾರಿಸಿದಾಗ ತಾವು ಖರೀದಿಸಿದ ಮನೆಯನ್ನು ಈ ಹಿಂದೆಯೇ ಅಡಮಾನವಿಟ್ಟು 75 ಲಕ್ಷ ರೂ. ಸಾಲ ಪಡೆದಿರುವ ವಿಷಯ ತಿಳಿದು, ಶಾಕ್ ಆಗಿದ್ದಾರೆ. ಮನೆ ಮಾರಾಟ ಮಾಡುವಾಗ ಸಾಲದ ವಿಷಯವನ್ನು ಮರೆಮಾಚಿ ವಂಚಿಸಿದ್ದಾರೆಂದು ನೀಡಿದ ದೂರಿನನ್ವಯ ಮನೆ ಮಾರಾಟ ಮಾಡಿದವರು, ಮಧ್ಯವರ್ತಿಗಳು ಸೇರಿ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸರ್ವ ಸದಸ್ಯರ ಸಭೆ

ಮೈಸೂರು, ಆ. 23– ಕೌಸ್ತುಭ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಸರ್ವ ಸದಸ್ಯರ ಮಹಾಸಭೆ ಸಂಘದ ಅಧ್ಯಕ್ಷ ಜಿ.ವಿ. ಕೃಷ್ಣ ಅಧ್ಯಕ್ಷತೆಯಲ್ಲಿ ಸೆ. 7 ರಂದು ಬೆಳಗ್ಗೆ 11 ಗಂಟೆಗೆ ಮಾಧವ ಶೆಣೈ ಸಭಾಂಗಣದಲ್ಲಿ ಕರೆಯಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮುಡಾದ ಶೇಕಡ 50:50 ಅನುಪಾತದ ನಿವೇಶನಗಳ ನೋಂದಣಿ ಮಾಡಬೇಡಿ

- ಮೈಸೂರಿನ ಸಬ್ ರಿಜಿಸ್ಟ್ರಾರ್ ಕಚೇರಿಗಳಿಗೆ ಇಡಿ ಆದೇಶ
- ಅಮಾಯಕರು ಮೋಸ ಹೋಗದಂತೆ ಇಡಿಯಿಂದ ಮುನ್ನೆಚ್ಚರಿಕಾ ಕ್ರಮ



ಮೈಸೂರು, ಆ.23(ಬಿಎಲ್ ಯು)– ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾಗಿರುವ ಶೇಕಡ 50:50 ಅನುಪಾತದ 200 ನಿವೇಶನ ಗಳಿಗೆ ಸಂಬಂಧಿಸಿದಂತೆ ಕ್ರಯ, ದಾನ ಸೇರಿದಂತೆ ಯಾವುದೇ ರೀತಿಯ ಪ್ರಕ್ರಿಯೆ ನಡೆಸದಂತೆ ಜಾರಿ ನಿರ್ದೇಶನಾಲಯ (ಇಡಿ) ಮೈಸೂರಿನ ಎಲ್ಲಾ ಉಪ ನೋಂದಣಾಧಿಕಾರಿ ಕಚೇರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ ಎನ್ನಲಾಗಿದೆ.

ಶೇಕಡ 50:50 ಅನುಪಾತದ ನಿವೇಶನಗಳನ್ನು ಅಕ್ರಮವಾಗಿ ಮಂಜೂರು ಮಾಡಲಾಗಿದೆ. ಈ ಹಗರಣದಲ್ಲಿ ಸಾವಿರಾರು ಕೋಟಿ ರೂಪಾಯಿ ವಹಿವಾಟು ನಡೆದಿದೆ ಎಂಬ ಆರೋಪ ಕೇಳಿ ಬಂದಿತ್ತು. ಈ ಹಿನ್ನೆಲೆಯಲ್ಲಿ ಇಡಿ ಎಂ.ಡಿ.ಎ ಅಕ್ರಮ ನಿವೇಶನಗಳ ಮಂಜೂರಾತಿ ಬಗ್ಗೆ ತನಿಖೆ ನಡೆಸುತ್ತಿದೆ.

ಸಾರ್ವಜನಿಕವಾಗಿ ಮಾರಾಟಕ್ಕಿರುವ ಈ ನಿವೇಶನಗಳನ್ನು ಅಮಾಯಕರು ಖರೀದಿ ಮಾಡಿ ಮೋಸ ಹೋಗುವುದನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ ಈ ಕ್ರಮ ಕೈಗೊಂಡಿದೆ.

ಶೇಕಡ 50:50 ಅನುಪಾತದ ಹಾಗೂ ಪ್ರೋತ್ಸಾಹದಾಯಕ ನಿವೇಶನಗಳನ್ನು ಮುಡಾದಿಂದ ಅಕ್ರಮವಾಗಿ ಮಂಜೂರು ಮಾಡಲಾಗಿದೆ ಎಂಬ ಆರೋಪದ ಬಗ್ಗೆ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ನೇತೃತ್ವದ ಆಯೋಗ ಆರು ತಿಂಗಳ ಕಾಲ ವಿಚಾರಣೆ ನಡೆಸಿ ಈಗಾಗಲೇ ಸರ್ಕಾರಕ್ಕೆ ವರದಿ ನೀಡಿದೆ.

ಆದರೆ ಮುಡಾ ಅಕ್ರಮಗಳೇನು ಎಂಬುದನ್ನು ಸರ್ಕಾರ ಬಹಿರಂಗ ಮಾಡಿಲ್ಲ. ಈ ಮಧ್ಯೆ ಮುಡಾ ಹಗರಣ ಸಂಬಂಧ ದೇಸಾಯಿ ಆಯೋಗ ಏನು ವರದಿ ನೀಡಿದೆ ಎಂಬ ಸಹಜ ಕುತೂಹಲ ಜನರಲ್ಲಿದೆ. ಆದರೆ ವರದಿ ಕೈ ಸೇರಿ ಮೂರು ವಾರ ಕಳೆದರೂ ಸರ್ಕಾರ ಮಾತ್ರ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡದೆ ಮೌನವಹಿಸಿದೆ.

ಮೈಸೂರಿನ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ 'ಬೂಸ್ಟ್': ಮೈಸೂರಿನ ವಿಜಯನಗರದಲ್ಲಿ ದುಬಾರಿ ಬೆಲೆಗೆ ಎಂಡಿಎ ನಿವೇಶನ ಹರಾಜಾಗಿರುವುದು ಮೈಸೂರಿನ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಬೂಸ್ಟ್ ನೀಡಿದಂತಾಗಿದೆ.

ಕಳೆದ 15 ವರ್ಷಗಳ ಹಿಂದೆ ಮೈಸೂರಿನಲ್ಲಿ ನಿವೇಶನಗಳ ಬೆಲೆ ಕೈಗೆಟಕುವಂತಿತ್ತು. ಆದರೆ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಖಾಸಗಿ ಬಡಾವಣೆ ನಿರ್ಮಾಣದ ನಿಯಮಗಳನ್ನು ಸರಳೀಕರಣಗೊಳಿಸಲಾಯಿತು. ಇದರಿಂದ ಮೈಸೂರಿನಲ್ಲಿ ನಿವೇಶನಗಳ ಬೆಲೆ ದಿಢೀರ್ ಏರಿಕೆ ಕಂಡಿತು. ಈಗಿನ ಮಾಲ್ ಆಫ್ ಮೈಸೂರ್‌ನ ಸುಮಾರು 4.5 ಎಕರೆ ಭೂಮಿ ಆ ದಿನಕ್ಕೆ 24 ಕೋಟಿ ರೂಪಾಯಿಗೆ ಹರಾಜಾಯಿತು.

ವರ್ಷಗಳು ಕಳೆದಂತೆ ಮೈಸೂರಿನಲ್ಲಿ ನಿವೇಶನಗಳ ಬೆಲೆ ತರಾವರಿ ಏರಿಕೆಗೊಂಡಿತು. ಆದರೆ ಕೊರೊನಾ ಸಮಯದಲ್ಲಿ ದಿಢೀರ್ ಇಳಿಕೆಯಾಯಿತು. ಬಹುಪಾಲು ರಿಯಲ್ ಎಸ್ಟೇಟ್ ಉದ್ಯಮಿಗಳು ಆರ್ಥಿಕ ಸಂಕಷ್ಟಕ್ಕೀಡಾಗಿ, ಆತ್ಮಹತ್ಯೆಗೂ ಶರಣಾದರು. ಕೊರೊನಾ ಬಳಿಕ ಮೈಸೂರಿನ ರಿಯಲ್ ಎಸ್ಟೇಟ್ ವ್ಯವಹಾರ ಮತ್ತೆ ಸುಧಾರಿಸಿತು. ಆದರೆ ಈಗ ಮೈಸೂರಿನ ನಿವೇಶನಗಳ ಬೆಲೆ ಬೆಂಗಳೂರು ಮೀರಿಸುವಂತಿದೆ. ನಗರದ ಯಾವುದೇ ಐಷಾರಾಮಿ ಬಡಾವಣೆಯಲ್ಲಿ ಚದರಡಿಗೆ 10 ರಿಂದ 12 ಸಾವಿರ ರೂಪಾಯಿ ಇದ್ದ ನಿವೇಶನಗಳ ಬೆಲೆ ಈಗ 15 ಸಾವಿರ ಮೀರಿದೆ.

ಮೈಸೂರಿನ ವಿಜಯನಗರದಲ್ಲಿ ಎಂಡಿಎ ನಿವೇಶನಗಳಿಗೆ ನಡೆದ ಹರಾಜಿನಲ್ಲಿ 20x30 ನಿವೇಶನಕ್ಕೆ 2 ಕೋಟಿ ಹಾಗೂ 50x80 ನಿವೇಶನಕ್ಕೆ 9 ಕೋಟಿ ರೂಪಾಯಿಗೆ ಬಿಕರಿಯಾಗಿರುವುದು ಮೈಸೂರಲ್ಲಿ ನಿವೇಶನಗಳು ಭಾರೀ ದುಬಾರಿ ಎಂಬುದನ್ನು ಸಾರಿ ಹೇಳುತ್ತದೆ.

ಇನ್ನು ನಿವೇಶನಗಳು ದುಬಾರಿ ಎಂಬುದು ತಪ್ಪು ಲೆಕ್ಕಾಚಾರ

20x30 ನಿವೇಶನ 2 ಕೋಟಿ ಹಾಗೂ 50x80 ನಿವೇಶನ 9 ಕೋಟಿಗೆ ಮಾರಾಟವಾದವು ಎಂಬ ವಿಚಾರ ಕೇಳಿದಾಕ್ಷಣ ನನಗೆ ತುಂಬಾ ಆಶ್ಚರ್ಯವಾಯಿತು.

20x30 ನಿವೇಶನದಲ್ಲಿ ಕಾಂಪ್ಲೆಕ್ಸ್ ನಿರ್ಮಿಸಿ ಬಾಡಿಗೆಗೆ ನೀಡಿದರೆ ತಿಂಗಳಿಗೆ ಗರಿಷ್ಟ 1 ಲಕ್ಷ ರೂಪಾಯಿ ಬಾಡಿಗೆ ಬರುವುದು ಹೆಚ್ಚು. ಇನ್ನು ಹಾಕಿರುವ ಬಂಡವಾಳವನ್ನು ತೆಗೆಯುವುದು ಹೇಗೆ ಎಂಬ ಸಹಜ ಪ್ರಶ್ನೆ ಮೂಡುತ್ತದೆ. ಹೀಗಿರುವಾಗ ಯಾವ ಲೆಕ್ಕಾಚಾರ ಹಾಕಿ ಈ ನಿವೇಶನ ಖರೀದಿ ಮಾಡಿದ್ದಾರೋ ತಿಳಿಯದು.

50x80 ಅಳತೆಯ ನಿವೇಶನವನ್ನು 9 ಕೋಟಿ ರೂಪಾಯಿಗೆ ಹರಾಜಿನಲ್ಲಿ ಖರೀದಿ ಮಾಡಿದ್ದಾರೆ. ರಿಜಿಸ್ಟ್ರೇಷನ್ ವೆಚ್ಚ ಸೇರಿ ಸುಮಾರು 10 ಕೋಟಿಯಾಗಲಿದೆ. ಇಲ್ಲಿ 3 ಕೋಟಿ ವೆಚ್ಚದಲ್ಲಿ ಕಾಂಪ್ಲೆಕ್ಸ್ ನಿರ್ಮಿಸಿದರೆ ತಿಂಗಳಿಗೆ ಗರಿಷ್ಟ 3 ರಿಂದ 4 ಲಕ್ಷ ಬಾಡಿಗೆ ಬರಬಹುದು. ಅದು ಯಾವ ಲೆಕ್ಕಾಚಾರ ಹಾಕಿಕೊಂಡು ಈ ನಿವೇಶನವನ್ನು ದುಬಾರಿ ಬೆಲೆಗೆ ಖರೀದಿ ಮಾಡಿದ್ದಾರೊ ತಿಳಿಯದು.

ವಿಜಯನಗರ 4 ನೇ ಹಂತದಲ್ಲಿ 30x40 ಅಳತೆ ನಿವೇಶನಗಳು 45 ಲಕ್ಷ ರೂಪಾಯಿಗೆ ಮಾರಾಟಕ್ಕಿವೆ. ವಸ್ತು ಸ್ಥಿತಿ ಹೀಗಿರುವಾಗ ದುಬಾರಿ ಬೆಲೆಗೆ ಇವರ್‍ಯಾರೋ ಖರೀದಿ ಮಾಡಿದ್ದಾರೆ. ಆದರೆ ಈ ಬೆಳವಣಿಗೆಯಿಂದ ಎಲ್ಲಾ ನಿವೇಶನಗಳ ಬೆಲೆ ದುಬಾರಿಯಾಗುತ್ತದೆ ಎಂಬುದು ತಪ್ಪು ಲೆಕ್ಕಾಚಾರ.

- ಶಿವಕುಮಾರ್, ಮಾಲೀಕರು, ಭೀಮಾ ಪ್ರಾಪರ್ಟೀಸ್

ಬೆಂಚ್ ಮಾರ್ಕ್ ಮೇಲೆ ಸ್ವಲ್ಪ ಪರಿಣಾಮ ಬೀರುತ್ತದೆ

ಮೈಸೂರಿನ ವಿಜಯನಗರದ ಎರಡು ನಿವೇಶನಗಳು ದುಬಾರಿ ಬೆಲೆಗೆ ಹರಾಜಾಗಿರುವುದು ನಿವೇಶನಗಳ ಮಾರಾಟದ ಬೆಂಚ್ ಮಾರ್ಕ್ ಮೇಲೆ ಸ್ವಲ್ಪ ಮಟ್ಟಿಗೆ ಪರಿಣಾಮ ಬೀರುತ್ತದೆ. 20x30 ನಿವೇಶನಕ್ಕೆ 2 ಕೋಟಿ ಹಾಗೂ 50x80 ನಿವೇಶನಕ್ಕೆ 9 ಕೋಟಿ ರೂಪಾಯಿಗೆ ಮಾರಾಟವಾಗಿರುವಷ್ಟು ಮಟ್ಟಿಗೆ ಮೈಸೂರಿನ ರಿಯಲ್ ಎಸ್ಟೇಟ್ ವ್ಯವಹಾರ ಏರಿಕೆ ಕಂಡಿದೆ.

ನಿವೇಶನಗಳ ಮಾರುಕಟ್ಟೆ ಬಗ್ಗೆ ಪ್ರಾಯಶಃ ಜ್ಞಾನ ಇಲ್ಲದವರು ಇಷ್ಟು ದುಬಾರಿಗೆ ಬಿಡ್ ಕೂಗಿ ನಿವೇಶನ ಖರೀದಿ ಮಾಡಿರಬಹುದು. ಯಾವುದೇ ಒಬ್ಬ ವ್ಯಕ್ತಿ ನಿವೇಶನ ಖರೀದಿ ಮಾಡಿದರೆ ಆ ಬಡಾವಣೆಯ ನಿವೇಶನಗಳ ಮಾರುಕಟ್ಟೆ ಮೌಲ್ಯಮಾಪನ ಮಾಡುತ್ತಾನೆ. ಹಾಕಿದ ಬಂಡವಾಳಕ್ಕೆ ಎಷ್ಟು ಲಾಭ ಬರಬಹುದು ಎಂದು ಲೆಕ್ಕ ಮಾಡುತ್ತಾನೆ. ಇದು ನಿರ್ಧಾರಿತವಾದ ಮೇಲೆ ನಿವೇಶನ ಖರೀದಿ ಮಾಡುತ್ತಾನೆ.

ಇದೇನೆ ಇರಲಿ ದುಬಾರಿ ಬೆಲೆಗೆ ನಿವೇಶನ ಖರೀದಿ ಮಾಡಿರುವ ಈ ಬೆಳವಣಿಗೆಯಿಂದ ಮೈಸೂರಿನ ನಿವೇಶನಗಳ ಖರೀದಿಯ ಬೆಂಚ್ ಮಾರ್ಕ್ ಮೇಲೆ ಸ್ವಲ್ಪ ಮಟ್ಟಿಗೆ ಮಾತ್ರ ಪರಿಣಾಮ ಬೀರುತ್ತದೆ. ಆದರೆ ಈ ಬೆಳವಣಿಗೆ ಮೈಸೂರಿನ ಎಲ್ಲಾ ನಿವೇಶನಗಳನ್ನು ದುಬಾರಿಯಾಗಿಸುತ್ತದೆ ಎಂಬುದು ತಪ್ಪು ಲೆಕ್ಕಾಚಾರ.

- ಹೆಚ್.ವಿ.ರಾಜೀವ್, ಮಾಜಿ ಮುಡಾ ಅಧ್ಯಕ್ಷ

ಎಲ್‌ಪಿಜಿ ಸುರಕ್ಷಾ ಹೋಸ್ ಪೈಪ್ ಮೇಲಿನ ಜಿಎಸ್‌ಟಿ ಇಳಿಸಿ

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಮುಖೇನ ಆಲ್ ಇಂಡಿಯಾ ಡಿಸ್ಟ್ರಿಬ್ಯೂಟರ್ಸ್ ಫೆಡರೇಷನ್ ಕೋರಿಕೆ

ಮೈಸೂರು,ಆ.23(ಪಿಎಂ)– ಅಡುಗೆ ಅನಿಲದ ಸಿಲಿಂಡರ್ ಮತ್ತು ಸ್ಟೌವ್‌ಗಳಿಗೆ ಬಳಸುವ ಎಲ್‌ಪಿಜಿ ಸುರಕ್ಷಾ ಹೋಸ್ ಪೈಪ್ ಮೇಲಿನ ಜಿಎಸ್‌ಟಿ ಇಳಿಸುವಂತೆ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಪತ್ರ ಮುಖೇನ ಆಲ್ ಇಂಡಿಯಾ ಡಿಸ್ಟ್ರಿಬ್ಯೂಟರ್ಸ್ ಫೆಡರೇಷನ್ ಮನವಿ ಮಾಡಿದೆ.



ಎಲ್ಲಾ ವರ್ಗದ ಜನರು ಅಡುಗೆ ಅನಿಲ ಬಳಸುತ್ತಾರೆ. ಅದರಲ್ಲೂ ಬಡವರು ಹೆಚ್ಚಿನ ಫಲಾನುಭವಿಗಳಿದ್ದಾರೆ. ಅವರಿಗೆ ಕೈಗೆಟಕುವ ದರದಲ್ಲಿ ಎಲ್‌ಪಿಜಿ ಉಪಕರಣ ದೊರಕಬೇಕು. ಎಲ್ಲಾ ಬೆಲೆಗಳು ಗಗನಕ್ಕೇರಿವೆ. ಈ ನಿಟ್ಟಿನಲ್ಲಿ ಹಣಕಾಸು ಸಚಿವರಿಗೆ ಮನವಿ ಮಾಡಲಾಗಿದೆ.
-ಮೇಹುಲ್ ಪಟೇಲ್, ಅಮರದೀಪ್ ಗ್ಯಾಸ್ ಏಜೆನ್ಸಿ, ಮೈಸೂರು.

ಎಲ್‌ಪಿಜಿ ಬಳಕೆಗೆ ಅತ್ಯಗತ್ಯ ಸುರಕ್ಷಾ ಸಾಧನವಾಗಿರುವ ಎಲ್‌ಪಿಜಿ ಸುರಕ್ಷಾ ಹೋಸ್ ಪೈಪ್ ಮೇಲೆ ಹೆಚ್ಚಿನ ಜಿಎಸ್‌ಟಿ ವಿಧಿಸಲಾಗುತ್ತಿದೆ. ಸದರಿ ಪೈಪ್ ಐಷಾರಾಮಿ ಉತ್ಪನ್ನವಲ್ಲ. ಆದರೆ ಸುರಕ್ಷತೆ ದೃಷ್ಟಿಯಿಂದ ಇದು ಅತ್ಯಗತ್ಯ ಸಾಧನವಾಗಿದೆ. ಸಿಲಿಂಡರ್‌ನಿಂದ ಸ್ಟೌವ್‌ಗೆ ಅನಿಲ ಪೂರೈಕೆಗೆ ಅತ್ಯಗತ್ಯವಾದ ಸುರಕ್ಷಿತ ಸಾಧನ ಇದಾಗಿದೆ. ಸುರಕ್ಷತಾ ಮಾನದಂಡಗಳ ಪ್ರಕಾರ ಈ ಪೈಪ್ ಅನ್ನು ನಿಯಮಿತವಾಗಿ ಬದಲಾಯಿಸುವುದು ಅಗತ್ಯವಾಗಿದೆ.

ಪ್ರಸ್ತುತ ಈ ಸುರಕ್ಷತಾ ಸಾಧನದ ಮೇಲಿನ ಜಿಎಸ್‌ಟಿ ದರವು ಶೇ.18ರಷ್ಟು ಇದ್ದು, ಇದು ಗ್ರಾಹಕರಿಗೆ ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಆರ್ಥಿಕ ಹೊರೆ ಹೆಚ್ಚಿಸುತ್ತದೆ. ಎಲ್‌ಪಿಜಿ ಈಗಾಗಲೇ ಅಗತ್ಯ ವಸ್ತುಗಳ ಅಡಿಯಲ್ಲಿದ್ದು, ಲಕ್ಷಾಂತರ ಕುಟುಂಬಗಳಿಗೆ ಸಬ್ಸಿಡಿ ಯೋಜನೆಗಳ ಅಡಿಯಲ್ಲಿ ವಿತರಿಸಲಾಗುವ ಕಾರಣ ಸುರಕ್ಷಾ ಪರಿಕರಗಳ ಮೇಲೆ ಈ ಪ್ರಮಾಣದ ಹೆಚ್ಚಿನ ಜಿಎಸ್‌ಟಿ ವಿಧಿಸುವುದು ಸರ್ಕಾರದ 'ಉಜ್ವಲದಿಂದ ಸುರಕ್ಷಾ' ಎಂಬ ಆಶಯಕ್ಕೆ ವಿರುದ್ಧವಾಗಿದೆ.

ಸದರಿ ಎಲ್‌ಪಿಜಿ ಸುರಕ್ಷಾ ಹೋಸ್ ಪೈಪ್ ಅನ್ನು ಎಲ್‌ಇಆರ್‌ಸಿ (ಎಲ್‌ಪಿಜಿ ಸಲಕರಣೆ ಸಂಶೋಧನಾ ಕೇಂದ್ರ, ಪಿಎಸ್‌ಯು ಆಡಳಿತ ಸಂಸ್ಥೆ) ಅಭಿವೃದ್ಧಿಪಡಿಸಿದೆ. ಜೊತೆಗೆ ಈ ಉತ್ಪನ್ನಕ್ಕೆ ಇದೇ ಸಂಶೋಧನಾ ಕೇಂದ್ರ ಪೇಟೆಂಡ್ ಹೊಂದಿದೆ. ಈ ಸುರಕ್ಷಾ ಹೋಸ್ ಪೈಪ್ ಮೇಲಿನ ಜಿಎಸ್‌ಟಿ ಅನ್ನು ಶೇ.18ರಿಂದ ಶೇ.5ಕ್ಕೆ ಇಳಿಸುವ ಅಗತ್ಯತೆಯನ್ನು ಅರಿಯಬೇಕು.

ಎಲ್ಲಾ ಕುಟುಂಬಗಳು ವಿಶೇಷವಾಗಿ ಉಜ್ವಲ ಫಲಾನುಭವಿಗಳು ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಜಿಎಸ್‌ಟಿ ಇಳಿಕೆಯಿಂದ ಈ ಹೋಸ್ ಪೈಪ್ ಕೈಗೆಟಕುವ ದರದಲ್ಲಿ ದೊರೆಯಲಿದೆ. ಕಳಪೆ ಗುಣಮಟ್ಟದ ಅಥವಾ ಅವಧಿ ಮೀರಿದ ಹೋಸ್ ಪೈಪ್ ಅನ್ನು ನಿರಂತರವಾಗಿ ಬಳಸಿ, ಅದರಿಂದ ಉಂಟಾಗುವ ಅನಾಹುತ ತಡೆಗಟ್ಟಲು ಈ ಉಪಕರಣದ ಮೇಲಿನ ಜಿಎಸ್‌ಟಿ ಇಳಿಕೆ ಸಹಕಾರಿಯಾಗಲಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಬೂಕರ್ ಪ್ರಶಸ್ತಿ ಸಮಾನ ಪಾಲುದಾರರಾದ

ಬಾನು ಮುಷ್ತಾಕ್–ದೀಪಾ ಭಾಸ್ತಿ ದಸರಾ ಉದ್ಘಾಟಿಸಿದರೆ ಅರ್ಥಪೂರ್ಣವೆನಿಸುತ್ತಿತ್ತು!





ಮೈಸೂರು, ಆ.23– ಬೂಕರ್ ಪ್ರಶಸ್ತಿಯ ಸಮಾನ ಪಾಲುದಾರರಾದ ಬಾನು–ದೀಪಾ ಅವರು ಜಂಟಿಯಾಗಿ ದಸರಾ ಉದ್ಘಾಟನೆ ದೀಪ ಬೆಳಗಿದರೆ ಹೆಚ್ಚು ಅರ್ಥಪೂರ್ಣವೆನಿಸುತ್ತಿತ್ತು ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಅಭಿಪ್ರಾಯಿಸಿದ್ದಾರೆ.

ನಾಡಹಬ್ಬ ದಸರಾ ಮಹೋತ್ಸವದ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್ ಅವರನ್ನು ರಾಜ್ಯ ಸರ್ಕಾರ ಆಯ್ಕೆ ಮಾಡಿರುವ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಅವರು, ನಾಡ ಅಧಿದೇವತೆ ಚಾಮುಂಡೇಶ್ವರಿ ತಾಯಿಗೆ ಅಗ್ರಪೂಜೆ ಸಲ್ಲಿಸುವ ಮೂಲಕ ದಸರಾ ಉದ್ಘಾಟಿಸುವುದು ನಡೆದುಬಂದ ಸಂಪ್ರದಾಯ. ಇದನ್ನು ಗೌರವಿಸುವ ಬದ್ಧತೆ ಉದ್ಘಾಟಕರು ಪ್ರದರ್ಶಿಸಬೇಕು. ಇಲ್ಲದಿದ್ದರೆ ಅದು ಅಪಚಾರವಾಗುತ್ತದೆ. ಜನರ ಭಾವನೆ ಘಾಸಿಗೊಳಿಸಿದಂತಾಗುತ್ತದೆ.

ಬೂಕರ್ ಪ್ರಶಸ್ತಿಗೆ ದೀಪಾ ಭಾಸ್ತಿಯವರೂ ಸಮಾನ ಪಾಲುದಾರರು. ಬಾನು–ದೀಪಾ ಅವರುಗಳು ಜಂಟಿಯಾಗಿ ದೀಪ ಬೆಳಗಿದ್ದರೆ ಅದು ಅರ್ಥಪೂರ್ಣವೆನಿಸುತ್ತಿತ್ತು. ಸರ್ಕಾರದ ಈ ನಿರ್ಧಾರ ಕನ್ನಡಕ್ಕೆ ದೊರೆತ ಬೂಕರ್ ಪ್ರಶಸ್ತಿಯನ್ನು ಬಿರುಕು ಮೂಡಿಸಿ, ವಿಭಜಿಸಿದಂತಾಗಿದೆ. ಮತಕ್ಕಾಗಿ ಕನ್ನಡಪಥ ದಿಕ್ಕು ತಪ್ಪದಿರಲಿ ಎಂದಿದ್ದಾರೆ.

ಸಾಹಿತಿ ಬಾನು ಮುಷ್ತಾಕ್ ಅವರ 'ಎದೆಯ ಹಣತೆ' ಕಥಾಸಂಕಲನವನ್ನು ದೀಪಾ ಭಾಸ್ತಿ ಅವರು 'ಹಾರ್ಟ್ ಲ್ಯಾಂಪ್' ಶೀರ್ಷಿಕೆಯಡಿ ಇಂಗ್ಲಿಷ್‌ಗೆ ಅನುವಾದಿಸಿದ್ದು, ಈ ಕೃತಿಗೆ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ದೊರೆತಿದೆ. ಪ್ರಶಸ್ತಿ ಪ್ರಕಟವಾದ ಬೆನ್ನಲ್ಲೇ ಈ ಬಾರಿ ದಸರಾ ಉದ್ಘಾಟನೆಗೆ ಇವರಿಬ್ಬರನ್ನೂ ಆಹ್ವಾನಿಸಬೇಕೆಂಬ ಆಗ್ರಹ ಕೇಳಿಬಂದಿತ್ತು.

ಹುಬ್ಬಳ್ಳಿ ವಿರುದ್ಧ ಸೋತು ಟೂರ್ನಿಯಿಂದ ಹೊರಬಿದ್ದ ಮೈಸೂರು ವಾರಿಯರ್ಸ್

ಮೈಸೂರು, ಆ.23(ವಿವಿಹೆಚ್)– ಆಲ್‌ರೌಂಡರ್ ಆಟದ ಮೂಲಕ ಅತಿಥೇಯ ಮೈಸೂರು ವಾರಿಯರ್ಸ್ ತಂಡವನ್ನು ಐದು ವಿಕೆಟ್‌ಗಳ ಅಂತರದಿಂದ ಮಣಿಸಿದ ಹುಬ್ಬಳ್ಳಿ ಟೈಗರ್ಸ್ ಅಗ್ರಸ್ಥಾನಕ್ಕೇರುವ ಮೂಲಕ ಮುಂದಿನ ಹಂತಕ್ಕೆ ಕ್ವಾಲಿಫೈ ಆಯಿತು.

ಇತ್ತ ಟೈಗರ್ಸ್ ವಿರುದ್ಧ ಹೀನಾಯ ಸೋಲು ಕಂಡ ವಾರಿಯರ್ಸ್ ಟೂರ್ನಿಯಿಂದ ಹೊರನಡೆಯುವ ಮೂಲಕ ತನ್ನ ತವರಿನಲ್ಲಿ ಚಾಂಪಿಯನ್ ಪಟ್ಟವನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಯಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಶನಿವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಮೈಸೂರು ವಾರಿಯರ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 129 ರನ್ ಗಳಿಸಿ 130ರನ್‌ಗಳ ಟಾರ್ಗೆಟ್ ನೀಡಿತು. ಈ ಸಾಧಾರಣ ಮೊತ್ತ ಬೆನ್ನತ್ತಿದ ಹುಬ್ಬಳ್ಳಿ ಟೈಗರ್ಸ್ 14.2 ಓವರ್‌ಗಳಲ್ಲಿ ಕೇವಲ 5 ವಿಕೆಟ್ ಕಳೆದುಕೊಂಡು 132 ರನ್ ಗಳಿಸಿ 5 ವಿಕೆಟ್‌ಗಳ ಅಂತರದಿಂದ ಗೆದ್ದು ಬೀಗಿತು.



ಹುಬ್ಬಳ್ಳಿ ಟೈಗರ್ಸ್ ತಂಡದ ಆಟಗಾರರ ಸಂಭ್ರಮ

ವಾರಿಯರ್ಸ್ ಇನ್ನಿಂಗ್ಸ್: ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ವಾರಿಯರ್ಸ್ ನಿರೀಕ್ಷಿತ ಆರಂಭ ಸಿಗಲಿಲ್ಲ. ನಾಯಕ ಮನೀಶ್ ಪಾಂಡೆ ಆರಂಭಿಕರಾಗಿ ಬಂದು ಕೇವಲ 2(8) ರನ್ ಗಳಿಸಿ ಔಟಾದರು. ಎಂ.ವೆಂಕಟೇಶ್ 15(19), ಕೆ.ಎಸ್.ಲಂಕೇಶ್ 4(8) ಬೇಗನೆ ಪೆವಿಲಿಯನ್ ಸೇರಿದರು. ಎಸ್.ಯು. ಕಾರ್ತಿಕ್ 53(37) ಅರ್ಧಶತಕ ದಾಖಲಿಸಿ ತಂಡದ ಮೊತ್ತ ನೂರರ ಗಡಿ ದಾಟಲು ಸಹಕರಿಸಿತು. ಮಧ್ಯಮ ಕ್ರಮಾಂಕದ ದಿಢೀರ್ ಕುಸಿತದಿಂದ ತಂಡ ಸ್ಪರ್ಧಾತ್ಮಕ ಮೊತ್ತ ಕಲೆಹಾಕಲು ಹರಸಾಹಸಪಟ್ಟಿತು. ಯಶೋವರ್ಧನ್ ಪ್ರತಾಪ್ ಡಕ್‌ಔಟ್, ಸಾಗರ್ ಗೌತಮ್ 3(5), ಹರ್ಷಿಲ್ ಧರ್ಮಾನಿ 20(18), ಎಸ್.ಶರತ್ 27(19), ಕೆ.ಗೌತಮ್ ಔಟಾಗದೇ 3(3) ರನ್ ಗಳಿಸಿದರು. ಉತ್ತಮವಾಗಿ ಬೌಲಿಂಗ್ ಪ್ರದರ್ಶಿಸಿದ ಟೈಗರ್ಸ್ ಪರ ಶ್ರೀಶಾ ಆಚಾರ್ 3, ಯಶ್‌ರಾಜ್ ಪುಂಜಾ 2 ವಿಕೆಟ್ ಕಬಳಿಸಿ ಮಿಂಚಿದರು. ಸಂಜಯ್ ಕುಮಾರ್, ಕರಿಯಪ್ಪ ಹಾಗೂ ರಿತೇಶ್ ಭಟ್ಕಳ್ ತಲಾ ಒಂದೊಂದು ವಿಕೆಟ್ ಕಿತ್ತರು.

ಟೈಗರ್ಸ್ ಇನ್ನಿಂಗ್ಸ್: ಈ ಸಾಧಾರಣ ಮೊತ್ತ ಬೆನ್ನತ್ತಿದ ಟೈಗರ್ಸ್‌ಗೆ ನಾಯಕ ದೇವ್‌ದತ್ ಪಡಿಕ್ಕಲ್ 44(19) ಹಾಗೂ ಕೆ.ಪಿ.ಕಾರ್ತಿಕೇಯ 52(32) ಉತ್ತಮ ಜೊತೆಯಾಟದ ಮೂಲಕ ತಂಡಕ್ಕೆ ಗೆಲುವು ತಂದುಕೊಟ್ಟರು. ಮೊಹಮ್ಮದ್ ತಹಾ 7(7), ಶಿವಕುಮಾರ್ ರಕ್ಷಿತ್ 7(6), ಕೃಷ್ಣನ್ ಶ್ರೀಜಿತ್ ಡಕ್‌ಔಟ್, ಅಭಿವನ್ ಮನೋಹರ್ 18(19) ಹಾಗೂ ರಿತೇಶ್ ಭಟ್ಕಳ್ ಅಜೇಯ 1(2) ರನ್ ಗಳಿಸಿ ತಂಡದ ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿದರು.

ತನ್ನ ಅಜೇಯ ಅರ್ಧಶತಕದಾಟದ ನೆರವಿನಿಂದ ಟೈಗರ್ಸ್‌ಗೆ ಗೆಲುವು ತಂದುಕೊಟ್ಟ ಕೆ.ಪಿ.ಕಾರ್ತಿಕೇಯ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು. ವಾರಿಯರ್ಸ್ ಪರ ಕೆ.ಗೌತಮ್ 3 ವಿಕೆಟ್, ಪ್ರಸಿದ್ಧ್ ಕೃಷ್ಣ ಹಾಗೂ ಕುಶಾಲ್ ತಲಾ 1 ವಿಕೆಟ್ ಪಡೆದರು.

ಇಂದಿನ ಪಂದ್ಯಗಳು

ಪಂದ್ಯ–27: ಬೆಂಗಳೂರು ಬ್ಲಾಸ್ಟರ್ಸ್ vs ಮಂಗಳೂರು ಡ್ರ್ಯಾಗನ್ಸ್ (ಮಧ್ಯಾಹ್ನ 3.15)

ಪಂದ್ಯ–28: ಶಿವಮೊಗ್ಗ ಲಯನ್ಸ್ vs ಮೈಸೂರು ವಾರಿಯರ್ಸ್ (ಸಂಜೆ 7.15)

ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದ ಗುಲ್ಬರ್ಗಾ ಮಿಸ್ಟಿಕ್ಸ್



ಮೈಸೂರು, ಆ.23(ವಿವಿಹೆಚ್)– ಸ್ಮರಣ್ ರವಿಚಂದ್ರನ್ ಅವರ ಅಜೇಯ ಅರ್ಧಶತಕದಾಟದ ನೆರವಿನಿಂದ ಗುಲ್ಬರ್ಗಾ ಮಿಸ್ಟಿಕ್ಸ್, ಬೆಂಗಳೂರು ಬ್ಲಾಸ್ಟರ್ಸ್ ತಂಡವನ್ನು ಆರು ವಿಕೆಟ್‌ಗಳ ಅಂತರದಿಂದ ಮಣಿಸಿತು. ಆ ಮೂಲಕ ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಜಿಗಿಯಿತು.

ಇಲ್ಲಿನ ಗಂಗೋತ್ರಿ ಗ್ಲೇಡ್ಸ್ ಮೈದಾನದಲ್ಲಿ ಶನಿವಾರ ನಡೆದ ಎರಡನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಬೆಂಗಳೂರು ಬ್ಲಾಸ್ಟರ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 164 ರನ್ ಬಾರಿಸಿ ಎದುರಾಳಿ ತಂಡಕ್ಕೆ 165ರನ್ ಗುರಿ ನೀಡಿತು. ಈ ಮೊತ್ತ ಬೆನ್ನತ್ತಿದ ಗುಲ್ಬರ್ಗಾ ಮಿಸ್ಟಿಕ್ಸ್ ಇನ್ನೂ 4 ಎಸೆತಗಳು ಬಾಕಿ ಇರುವಂತೆ 167ರನ್ ಕಲೆಹಾಕಿ 6 ವಿಕೆಟ್‌ಗಳ ಅಂತರದಿಂದ ಗೆದ್ದು ಬೀಗಿತು. ತಮ್ಮ ಅಜೇಯ ಅರ್ಧಶತಕದಾಟದ ಮೂಲಕ ಗುಲ್ಬರ್ಗಾ ಮಿಸ್ಟಿಕ್ಸ್ ಗೆಲುವಿಗೆ ಕಾರಣವಾದ ಸ್ಮರಣ್ ರವಿಚಂದ್ರನ್ 89(52) ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸ್ಕೋರ್ ವಿವರ

ಬೆಂಗಳೂರು ಬ್ಲಾಸ್ಟರ್ಸ್ 164/7– ಎಲ್.ಆರ್.ಚೇತನ್ 19(11), ಮಯಾಂಕ್ ಅಗರ್ವಾಲ್ 21(16), ರೋಹನ್ ಪಾಟೀಲ್ 3(6), ಭುವನ್ ರಾಜು 1(7), ಶುಭಾಂಗ್ ಹೆಗ್ಡೆ 9(13), ಸೂರಜ್ ಅಹುಜಾ 54(31), ಎಂ.ಜಿ.ನವೀನ್ 7(15), ರೋಹನ್ ನವೀನ್ ನಾಟ್‌ಔಟ್ 34(18), ವಿದ್ಯಾಧರ್ ಪಾಟೀಲ್ ಅಜೇಯ 4(3), ವೈಶಾಖ್ ವಿಜಯ್ ಕುಮಾರ್ 34ಕ್ಕೆ3, ಶಶಿ ಕುಮಾರ್ ಕಾಂಬ್ಳೆ 16ಕ್ಕೆ1, ಪೃಥ್ವಿರಾಜ್ ಶೇಖಾವತ್ 30ಕ್ಕೆ1

ಗುಲ್ಬರ್ಗಾ ಮಿಸ್ಟಿಕ್ಸ್ 167/4– ಲವ್ನಿತ್ ಸಿಸೋಡಿಯಾ 16(9), ನಿಕಿನ್ ಜೋಸ್ 16(16), ಪ್ರಜ್ವಲ್ ಪವನ್ 10(17), ಕೃಷ್ಣಮೂರ್ತಿ ಸಿದ್ಧಾರ್ಥ್ 5(8), ಸ್ಮರಣ್ ರವಿಚಂದ್ರನ್ ಅಜೇಯ 89(52), ಪ್ರವೀಣ್ ದುಬೆ 29(14), ಶುಭಾಂಗ್ ಹೆಗ್ಡೆ 31ಕ್ಕೆ2, ಎಂ.ಜಿ.ನವೀನ್ 27ಕ್ಕೆ1

ಬಿವಿಬಿಯಲ್ಲಿ ಸಂಗೀತ ವಿಶೇಷದಲ್ಲಿ ಸಂತೂರ್ ವಾದನ; ಪ್ರೇಕ್ಷಕರಿಗೆ ವಿಶೇಷ ಅನುಭವ



149ನೇ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಡಾ. ಸಿ.ನಾಗಣ್ಣ (ಎಡದಿಂದ ನಾಲ್ಕನೇಯವರು) ಚಾಲನೆ ನೀಡಿದರು. ಎಡದಿಂದ ಕಾರ್ಯಕಾರಿ ಸಮಿತಿ ಸದಸ್ಯ ಗಂಗಾಧರ್, ಕಾರ್ಯಕಾರಿ ಸಮಿತಿ ಸದಸ್ಯ ನಾಗಲಕ್ಷ್ಮೀ, ಖಜಾಂಚಿ ಡಾ.ಎ.ಟಿ.ಭಾಷ್ಯಂ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಪ್ರಾಂಶುಪಾಲರಾದ ರೇಖಾ ನಾಯರ್, ಉಪ ಪ್ರಾಂಶುಪಾಲರಾದ ಪ್ರಫುಲ್ಲಾ ಉಪಸ್ಥಿತರಿದ್ದರು.

ಮೈಸೂರು, ಆ.23(ವಿವಿಹೆಚ್)– ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ(ಬಿವಿಬಿ) ಬೆಂಗಳೂರು–ಮೈಸೂರು ಸಹಯೋಗದೊಂದಿಗೆ ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿನ ಬಿವಿಬಿಯಲ್ಲಿ ಶನಿವಾರ ಆಯೋಜಿಸಿದ್ದ 149ನೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂತೂರ್ ವಾದನ ನಡೆಯಿತು. ಈ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಡಾ. ಸಿ.ನಾಗಣ್ಣ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ಸಾಮಜವರಗಮನ, ಸರಸ್ವತಿ ನಮೋಸ್ತುತೆ ಎಂದು ಸಾಹಿತ್ಯಗಳನ್ನು ವಾದನಗಳ ಮೂಲಕ ನುಡಿಸಿ, ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಲಾಯಿತು.

ವಿದ್ವಾನ್ ಎಂ.ತ್ಯಾಗರಾಜು ಕರ್ನಾಟಕ ಸಂಗೀತಾ ಕಲಾಪ್ರಕಾರದಲ್ಲಿ ಸಂತೂರ್ ವಾದನದ ಮೂಲಕ ತಮ್ಮ ಕಮಾಲ್ ತೋರಿದರು. ಇವರಿಗೆ ತುಮಕೂರು ಯಶಸ್ವಿ (ವಯೋಲಿನ್), ಎಂ.ಎಸ್.ಜಯರಾಮ್ (ಮೃದಂಗ), ಆರ್.ದಾಸಪ್ಪ (ತಬಲ), ಕಿರಣ್ ಕುಮಾರ್ (ಘಟಂ) ಸಾಥ್ ನೀಡಿದರು. ಸತತ ಒಂದೂವರೆ ಗಂಟೆಗಳ ಕಾಲ ವಾದನಗಳ ಮೂಲಕ ಸಂಗೀತ ರಸದೌತಣ ಉಣಬಡಿಸಿದರು.

ಕರೂರ್ ದೇವುಡು ಐಯ್ಯರ್ ರಚನೆಯ ಕರುಣಂಪ ಕೃತಿಯನ್ನು ಶಹನ ರಾಗದ ಆದಿತಾಳ ವರ್ಣದಲ್ಲಿ, ಮುತ್ತುಸ್ವಾಮಿ ದೀಕ್ಷಿತರ ವಾತಾಪಿ ಕೃತಿಯನ್ನು ಹಂಸಧ್ವನಿ ರಾಗದ ಆದಿ ತಾಳದಲ್ಲಿ, ಜಿ.ಎನ್.ಬಾಲಸುಬ್ರಹ್ಮಣ್ಯಂ ಅವರ ಸರಸ್ವತೀ ನಮೋಸ್ತುತೆ ಕೃತಿಯನ್ನು ಸರಸ್ವತಿ ರಾಗದ ರೂಪಕ ತಾಳದಲ್ಲಿ, ಪಟ್ಟಂ ಸುಬ್ರಹ್ಮಣ್ಯ ಐಯ್ಯರ್ ಅವರ ರಘುವಂಶಸುಧಾ ಕೃತಿಯನ್ನು ಕದನ ಕುತೂಹಲ ರಾಗದ ಆದಿ ತಾಳದಲ್ಲಿ, ತ್ಯಾಗರಾಜರ ಎಂದರೋ ಮಹಾನುಭಾವುಲು ಕೃತಿಯನ್ನು ಶ್ರೀರಾಗ ರಾಗದ ಆದಿ ತಾಳದಲ್ಲಿ, ಮುತ್ತಯ್ಯ ಭಾಗವತರ್ ಅವರ ನೊಟ್ಟುಸ್ವರ ಕೃತಿಯನ್ನು ಶಂಕರಾಭರಣ ರಾಗದ ಆದಿ ತಾಳದಲ್ಲಿ, ತ್ಯಾಗರಾಜು ಅವರ ಸಾಮಜವರಗಮನ ಕೃತಿಯನ್ನು ಹೊಂದೋಳ ರಾಗದ ಆದಿ ತಾಳದಲ್ಲಿ, ಚಿಟ್ಟಿಬಾಬು ಅವರ ಬೆಲ್ಸ್ ಕೃತಿಯನ್ನು ಶಂಕರಾಭರಣ ರಾಗದ ಆದಿ ತಾಳದಲ್ಲಿ, ಮಿಶ್ರಕಾಪಿ ಅವರ ರಘುಪತಿ ರಾಘವ ಕೃತಿಯನ್ನು ಆದಿ ತಾಳದಲ್ಲಿ, ಲಾಲ್‌ಗುಡಿ ಜಯರಾಮನ್ ಅವರ ತನಧೀಂತ ಕೃತಿಯನ್ನು ಮಾಂಡ್ ರಾಗದ ಆದಿ ತಾಳದಲ್ಲಿ ನುಡಿಸಲಾಯಿತು.

ಕಾರ್ಯಕ್ರಮದಲ್ಲಿ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಡಾ. ಸಿ.ನಾಗಣ್ಣ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಡಾ. ಎ.ಟಿ.ಭಾಷ್ಯಂ, ಆಡಳಿತಾಧಿಕಾರಿ ಎಸ್. ಆರ್.ರವಿಕುಮಾರ್, ಬಿವಿಬಿ ಮೈಸೂರು ಕೇಂದ್ರದ ಕಾರ್ಯಕಾರಿ ಸಮಿತಿ ಸದಸ್ಯರಾದ ಗಂಗಾಧರ್, ಪಿ.ಕೆ.ನಾಗಲಕ್ಷ್ಮೀ, ಪ್ರಾಂಶುಪಾಲರಾದ ಲೇಖಾ ನಾಯರ್ ಇದ್ದರು.



ಮೈಸೂರು ಬಿವಿಬಿ ಕೇಂದ್ರದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದ್ವಾನ್ ಎಂ. ತ್ಯಾಗರಾಜು ಸಂತೂರ್ ವಾದನ ನುಡಿಸಿದರು

ಧರ್ಮಸ್ಥಳ ವಿರುದ್ಧ ಅಪಪ್ರಚಾರ ವಿರೋಧಿಸಿ

ಮಠಾಧೀಶರು, ಹಿಂದೂಪರ ಸಂಘಟನೆಗಳಿಂದ ಪ್ರತಿಭಟನೆ

ಮಳವಳ್ಳಿ, ಆ.23–ಪವಿತ್ರ ಧಾರ್ಮಿಕ ಕ್ಷೇತ್ರ, ಹಾಗೂ ಧರ್ಮಾಧಿಕಾರಿಗಳ ಮೇಲೆ ಅಪಪ್ರಚಾರ ಮಾಡಿ ಹಿಂದೂಗಳ ಧಾರ್ಮಿಕ ನಂಬಿಕೆಗೆ ಧಕ್ಕೆ ತರುತ್ತಿರುವ ದುಷ್ಟಶಕ್ತಿಗಳ ವಿರುದ್ದ ಕ್ರಮಕ್ಕೆ ಆಗ್ರಹಿಸಿ ತಾಲೂಕಿನ ಮಠಾಧೀಶರು, ಹಿಂದೂಪರ ಸಂಘಟನೆಗಳ ಭಕ್ತರು ಪಟ್ಟಣದಲ್ಲಿ ಶನಿವಾರ ಬೃಹತ್ ಪ್ರತಿಭಟನೆ ನಡೆಸಿದರು.

ತಾಲೂಕಿನ ಎಲ್ಲ ಮಠಾಧೀಶರುಗಳ ನೇತೃತ್ವದಲ್ಲಿ ಭಕ್ತರು ಅಂಬೇಡ್ಕರ್ ಪ್ರತಿಮೆ ಬಳಿ ಆಗಮಿಸಿದಾಗ ಕುಂದೂರು ಮಠದ ಶ್ರೀ ನಂಜುಂಡಸ್ವಾಮಿಗಳು, ಹರಗುರು ಚರಮೂರ್ತಿಗಳು ಅಂಬೇಡ್ಕರ್ ಪ್ರತಿಮೆಗೆ ಪುಷ್ಪ ಮಾಲೆ ಹಾಕಿ ಪ್ರತಿಭಟನೆಗೆ ಸಹಕಾರ ನೀಡಿದರು.

ರಸಸಿದ್ದೇಶ್ವರ ಮಠದ ಶ್ರೀ ನಂಜುಂಡಸ್ವಾಮಿಗಳು ಮಾತನಾಡಿ, ಸುಳ್ಳು ಆರೋಪಗಳು, ಅಪಪ್ರಚಾರಗಳು ಭಕ್ತರ ನಂಬಿಕೆಗೆ ಧಕ್ಕೆ ಉಂಟು ಮಾಡುತ್ತಿದೆ, ಧಾರ್ಮಿಕ ಕ್ಷೇತ್ರದ ಬಗ್ಗೆ, ಧರ್ಮಾಧಿಕಾರಿಗಳನ್ನು ಕೀಳಾಗಿ ಬಿಂಬಿಸುತ್ತಿರುವುದನ್ನು ಸಹಿಸುವುದಿಲ್ಲ. ಅಲ್ಲದೆ ಸಾಮಾಜಿಕ ಮಾಧ್ಯಮದಲ್ಲಿ ಸುಳ್ಳು ಸುದ್ದಿ ಹಬ್ಬಿಸಿ ಸಮಾಜವನ್ನು ಒಡೆಯುವ ಮೂಲಕ ಅಶಾಂತಿ ಸೃಷ್ಟಿಸುತ್ತಿರುವ ವಿರುದ್ಧ ಕಠಿಣ ಕಾನೂನು ಕ್ರಮವಹಿಸ ಬೇಕೆಂದು ಆಗ್ರಹಿಸಿದರು.



ದುಷ್ಟಶಕ್ತಿಗಳ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ತಾಲೂಕಿನ ಎಲ್ಲ ಮಠಾಧೀಶರು, ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಮಳವಳ್ಳಿಯಲ್ಲಿ ಶನಿವಾರ ಬೃಹತ್ ಪ್ರತಿಭಟನೆ ನಡೆಸಿದರು.

ಪುರಸಭೆ ಮಾಜಿ ಅಧ್ಯಕ್ಷ ಚಿಕ್ಕರಾಜು ಮಾತನಾಡಿ, ಹಿಂದೂಗಳ ಪವಿತ್ರ ಕ್ಷೇತ್ರ ಧರ್ಮಸ್ಥಳಕ್ಕೆ, ಧಕ್ಕೆ ತರುವಂತಹ ಹೇಳಿಕೆ, ಅರೋಪ, ಅಪಪ್ರಚಾರ ಮಾಡುವುದನ್ನು ಕೂಡಲೆ ನಿಲ್ಲಿಸಬೇಕು, ಇವರನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದರು. ಜಿಲ್ಲಾ ಶರಣ ಸಂಘಟನೆ ವೇದಿಕೆ ಗೌರವಾಧ್ಯಕ್ಷ ಬಬ್ರುವಾಹನ, ಹಿಂದೂಪರ ಸಂಘಟನೆಯ ಮುಖಂಡ ಅಶೋಕ್ ಮಾತನಾಡಿದರು.

ಹಣಕೊಳ, ಹಂಗ್ರಾಪುರ, ರಾಗಿಬೊಮ್ಮನಹಳ್ಳಿ, ದ್ಯಾವ ಪಟ್ಟಣ, ಗವಿಮಠ, ಕುಂದೂರು, ಹೆಬ್ಬಣಿ ಮಠದ ಮಠಾಧೀಶರು, ಪುರಸಭೆ ಮಾಜಿ ಅಧ್ಯಕ್ಷ ಎಂ.ಹೆಚ್.ಕೆಂಪಯ್ಯ, ಅಧ್ಯಕ್ಷ ಪುಟ್ಟಸ್ವಾಮಿ, ಉಪಾಧ್ಯಕ್ಷ ಜಯಸಿಂಹ, ಸ್ಥಾಯಿ ಸಮಿತಿ ಅಧ್ಯಕ್ಷ ಕೃಷ್ಣ, ಮಾಜಿ ಸದಸ್ಯ ಎಂ.ಎಸ್.ರಮೇಶ್, ಸೌಹರ್ದ ನಾಗರಿಕ ವೇದಿಕೆಯ ಅಧ್ಯಕ್ಷ ಎಂ.ಎನ್.ಮಹೇಶ್ ಕುಮಾರ್, ಯುವ ಬಳಗದ ಅಧ್ಯಕ್ಷ ಮಹೇಶ್, ಮಹಾಸಭಾ ಅಧ್ಯಕ್ಷ ಮೂರ್ತಿ, ವಿಶ್ವೇಶ್ವರಯ್ಯ ಯುವಕ ಸಂಘದ ಅಧ್ಯಕ್ಷ ಚಿಕ್ಕಮರಿ, ಹಿಂದೂಪರ ಸಂಘಟನೆಗಳ ಮುಖಂಡರಾದ ವೈ.ಎಸ್. ಸಿದ್ದರಾಜು, ಸ್ವಾಮಿ, ಅಪ್ಪಾಜಿಗೌಡ, ಗಂಗಾಧರ್, ಕುಮಾರ್, ರಾಜೀವ, ಚೆನ್ನಪ್ಪ, ಸುಂದ್ರಪ್ಪ, ಧರಣಿ ಅಪಪ್ರಚಾರ ಖಂಡಿಸಿ ಕಿಡಿಗೇಡಿಗಳನ್ನು ಗಡಿಪಾರು ಮಾಡುವಂತೆ ಸಾಮೂಹಿಕವಾಗಿ ಆಗ್ರಹಿಸಿದರು

ಪ್ರತಿಭಟನೆಯು ಅಂಬೇಡ್ಕರ್ ವೃತ್ತದಿಂದ ಕೊಳ್ಳೇಗಾಲ ರಸ್ತೆಯ ಮೂಲಕ ಅನಂತರಾಂ ವೃತ್ತದ ಬಳಿ ಆಗಮಿಸಿ ಕೆಲಕಾಲ ಮಾನವ ಸರಪಳಿ ನಿರ್ಮಿಸಿ ನಂತರ ತಾಲೂಕು @ಕಛೇರಿಗೆ ತೆರಳಿ ಉಪ ತಹಸೀಲ್ದಾರ್ ಗುರುಪ್ರಸಾದ್‌ಗೆ ನಂತರ ಪಟ್ಟಣ ಪೋಲಿಸ್ ಠಾಣೆಗೆ ಆಗಮಿಸಿ ಇನ್ಸ್‌ಪೆಕ್ಟರ್ ರವಿಕುಮಾರ್‌ಗೆ ಮನವಿ ನೀಡಿದರು.

ಮಲಗಿದ್ದ ಯುವಕನ ತಲೆ ಮೇಲೆ ದಿಂಡುಗಲ್ಲು ಎತ್ತಿಹಾಕಿ ಹತ್ಯೆ

ಹಲಗೂರು: ಮಲಗಿದ್ದ ಯುವಕನ ತಲೆ ಮೇಲೆ ದಿಂಡುಗಲ್ಲನ್ನು ಎತ್ತಿಹಾಕಿ ಹತ್ಯೆ ಮಾಡಿರುವ ಘಟನೆಯೊಂದು ಹಲಗೂರುಗ್ರಾಮದಲ್ಲಿ ನಡೆದಿದೆ.

ಹತ್ಯೆಗೀಡಾಗಿರುವ ಯುವಕ ಮೈಸೂರಿನ ಕುವೆಂಪು ನಗರದ ನಿವಾಸಿ ರಂಗಸ್ವಾಮಿಯವರ ಮಗ ರಮೇಶ್ (31) ಎಂದು ಗುರುತಿಸಲಾಗಿದೆ. ಈತ ಗ್ರಾಮದ ಸರ್ಕಾರಿ ಕೆಪಿಎಸ್ ಬಾಲಕಿಯರ ಶಾಲಾ ಆವರಣದ ಜಗಲಿಯಲ್ಲಿ ಮಲಗಿದ್ದಾಗ ಶುಕ್ರವಾರ ತಡ ರಾತ್ರಿ ಅಪರಿಚಿತರು ಹತ್ಯೆಗೈದಿದ್ದಾರೆ

ಏಳೆಂಟು ವರ್ಷಗಳ ಹಿಂದೆ ಮನೆಯಲ್ಲಿ ಜಗಳ ಮಾಡಿಕೊಂಡು ಮನೆ ಬಿಟ್ಟು ಸಂಬಂಧಿಕನಾದ ನಂದೀಶನ ಜೊತೆ ಗಾರೆ ಕೆಲಸ ಮಾಡುತ್ತಾ ಜೀವನ ನಡೆಸುತ್ತಿದ್ದನೆನ್ನಲಾಗಿದೆ. ಕಾರಣಾಂತರಗಳಿಂದ ಮೂರ್‍ನಾಲ್ಕು ವರ್ಷಗಳಿಂದ ಹಲಗೂರಿನಲ್ಲಿ ಚಿಂದಿ ಹಾಗೂ ಪ್ಲಾಸ್ಟಿಕ್ ಬಾಟಲ್ ಸಂಗ್ರಹಿಸಿ ಜೀವನ ಸಾಗಿಸುತ್ತಿದ್ದ ಎನ್ನಲಾಗಿದೆ. ಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ.

ಜಿಲ್ಲಾ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಡಿವೈಎಸ್ಪಿ ಕೃಷ್ಣಪ್ಪ, ಹಲಗೂರು ವೃತ್ತ ನಿರೀಕ್ಷಕ ಶ್ರೀಧರ್, ಕೆ.ಎಂ. ದೊಡ್ಡಿ ವೃತ್ತ ನಿರೀಕ್ಷಕ ಆನಂದ್, ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಪರಿಶೀಲಿಸಿದರು ಹಲಗೂರು ಠಾಣೆಯ ಸಬ್ ಇನ್ಸ್‌ಪೆಕ್ಟರ್ ಲೋಕೇಶ್ ಹಾಗೂ ಬೆಳಕವಾಡಿಯ ಸಬ್‌ಇನ್ಸ್‌ಪೆಕ್ಟರ್ ಪ್ರಕಾಶ್ ತನಿಖೆ ಕೈಗೊಂಡಿದ್ದಾರೆ. ಹಲ ಗೂರು ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಪ್ರವೇಶ ಅರ್ಜಿ ಅವಧಿ ವಿಸ್ತರಣೆ

ಮಂಡ್ಯ: ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪ.ಜಾ ಮತ್ತು ಪ.ವರ್ಗದ ಸಾಮಾನ್ಯ ಪದವಿ ಕೋರ್ಸಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸಲಾಗಿದೆ.

ಸದನ ಕಲಾಪ ವೀಕ್ಷಿಸಿದ ರಾಜ್ಯಶಾಸ್ತ್ರ ವಿದ್ಯಾರ್ಥಿಗಳು

ಕೆ.ಆರ್.ಪೇಟೆ, ಆ.23– ರಾಜಕೀಯ ವಿದ್ಯಮಾನಗಳ ತಾಣವಾದ ಶಾಸಕಾಂಗದ ಕಲಾಪವನ್ನು ವೀಕ್ಷಿಸುವ ಸದವಕಾಶ ಪಟ್ಟಣದ ಪದವಿ ಕಾಲೇಜಿನ ರಾಜ್ಯಶಾಸ್ತ್ರ ವಿದ್ಯಾರ್ಥಿಗಳಿಗೆ ಒದಗಿಬಂದಿತ್ತು. ಈ ಅವಕಾಶವನ್ನು ಕಲ್ಪಿಸಿ ಕೊಟ್ಟವರು ಶಾಸಕ ಹೆಚ್.ಟಿ ಮಂಜುರವರು.

ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 150ಕ್ಕೂ ಹೆಚ್ಚು ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ನಿನ್ನೆ ಮೂರು ಬಸ್‌ಗಳಲ್ಲಿ ಬೆಂಗಳೂರಿಗೆ ತೆರಳಿ ವಿಧಾನಸಭಾ ಕಲಾಪ ವೀಕ್ಷಿಸಿದರು.

ನಾವು ದೂರದರ್ಶನ, ಮೊಬೈಲ್‌ಗಳಲ್ಲಿ ವಿಧಾನ ಸಭೆ ಕಲಾಪಗಳನ್ನು ವೀಕ್ಷಿಸುತ್ತಿದ್ದೆವು. ನಮಗೆ ನೇರವಾಗಿ ವಿಧಾನ ಸೌಧ ಕಲಾಪ ವೀಕ್ಷಿಸುವ ಅವಕಾಶ ಮಾಡಿಕೊಟ್ಟಿದ್ದಾರೆ. ಇದು ನಮ್ಮ ಭಾಗಕ್ಕೆ ಸುವರ್ಣಾಕ್ಷರದಿಂದ ಬರೆದಿಡುವಂತ ದಿನವಾಗಿದೆ. ಶಾಸನಬದ್ಧ ಅಂಶಗಳನ್ನು ಮೈಗೂಡಿಸಿಕೊಂಡು ಸದೃಢ ಸಮಾಜಕ್ಕೆ, ನಮ್ಮ ಭವಿಷ್ಯಕ್ಕೆ ಈ ವೀಕ್ಷಣೆ ಉಪಯುಕ್ತವಾಗಿದೆ. ಸುವರ್ಣಾವಕಾಶ ಕಲ್ಪಿಸಿಕೊಟ್ಟ ಹೆಚ್.ಟಿ. ಮಂಜುರವರಿಗೆ ಅಭಿನಂದನೆಗಳನ್ನು ಸಲ್ಲಿಸುವುದಾಗಿ ತಿಳಿಸಿದರು.

ನಾನು ಕೂಡ ಬಡ ಕುಟುಂಬದಿಂದ ಬಂದ ವ್ಯಕ್ತಿ, ನನ್ನ ಕ್ಷೇತ್ರದ ಜನರ ಅಮೂಲ್ಯವಾದ ಆಶೀರ್ವಾದದಿಂದ ವಿಧಾನ ಸೌಧ ಪ್ರವೇಶಿಸಲು ಸಾಧ್ಯವಾಯಿತು. ನನ್ನಂತಹ ನೂರಾರು ಬಡಮಕ್ಕಳು ಕೂಡ ವಿದ್ಯಾರ್ಥಿ ಜೀವನದಲ್ಲಿ ಇಂತಹ ವಿಧಾನಸೌಧ ಪ್ರವೇಶಿಸಿ ಸದೃಢ ಸಮಾಜದ ಬಗ್ಗೆ ಚಿಂತಿಸಲಿ ಎಂಬ ದೂರದೃಷ್ಟಿಯಿಂದ ಅವಕಾಶ ಕಲ್ಪಿಸಿದ್ದೇನೆ ವಿದ್ಯಾರ್ಥಿ ಗಳು ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಹೆಚ್.ಟಿ ಮಂಜು ಪ್ರತಿಕ್ರಿಯಿಸಿದರು.



ಕಲಾಪ ವೀಕ್ಷಣೆ ಮಾಡಿದ ಪದವಿ ವಿದ್ಯಾರ್ಥಿಗಳು ಶಾಸಕರೊಂದಿಗೆ ವಿಧಾನಸೌಧದ ಎದುರು ಫೋಟೋ ತೆಗೆಸಿಕೊಂಡರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಜಗದೀಶ್, ಮಹಿಳಾ ಕಾಲೇಜಿನ ಪ್ರಾಂಶುಪಾಲೆ ಡಾ.ಪ್ರತಿಮಾ, ಡಾ.ಅನುರಾಧ, ಸಹಾಯಕ ಪ್ರಾಧ್ಯಾಪಕ ಜಯಕೀರ್ತಿ, ಗ್ರಂಥಪಾಲಕ ಶಿವರಾಮ್, ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್, ಮೊದಲಾದವರಿದ್ದರು.

ಒಳಮೀಸಲಾತಿ ಜಾರಿಗೆ ಆಗ್ರಹ

ಮಂಡ್ಯ, ಆ.23– ನ್ಯಾಯಮೂರ್ತಿ ನಾಗಮೋಹನ್‌ದಾಸ್ ನೀಡಿರುವ ಒಳ ಮೀಸಲಾತಿಯನ್ನು ಯಥಾವತ್ತು ಜಾರಿಗೊಳಿಸಿ ಅರುಂಧತಿಯಾರ್ ಸಮುದಾಯ ಸೇರಿದಂತೆ 59 ಜಾತಿಗಳಿಗೆ ಶೇ.1ರಷ್ಟು ಮೀಸಲಾತಿ ಜಾರಿ ಮಾಡಬೇಕು ಎಂದು ಅಖಿಲ ಕರ್ನಾಟಕ ಅರುಂಧತಿಯಾರ್ ಮಹಾಸಭಾದ ರಾಜ್ಯ ಸಂಚಾಲಕ ಆರ್.ಬಾಬು ಒತ್ತಾಯಿಸಿದ್ದಾರೆ.

ಮಾತನಾಡಿದ ಅವರು, ನ್ಯಾ.ಮೂ. ನಾಗಮೋಹನ್‌ದಾಸ್ ಸಮಿತಿ ವರದಿಯಲ್ಲಿ ಶೇ.1ರಷ್ಟು ಮೀಸಲಾತಿ ನೀಡುವಂತೆ ವರದಿಯಿದ್ದರೂ ಕಾಂಗ್ರೆಸ್ ಸರಕಾರ ಪರಿಶಿಷ್ಟ ಜಾತಿಯ ಬಲಿಷ್ಠ ಜಾತಿಗಳೊಟ್ಟಿಗೆ ಮೀಸಲಾತಿ ಹಂಚಿಕೆಗೆ ಅರುಂಧತಿಯಾರ್ ಸಮುದಾಯವನ್ನು ದೂಡಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಸಮುದಾಯವು ಪೌರಕಾರ್ಮಿಕ, ಸಫಾಯಿ ಕರ್ಮಚಾರಿ, ಮ್ಯಾನ್ಯುಯಲ್ ಸ್ಕ್ಯಾವೆಂಜರ್, ಚಪ್ಪಲಿ ಹೊಲಿಯುವ ಕೆಲಸಗಳಿಗೆ ಮಾತ್ರವೇ ಸೀಮಿತವಾಗಿದ್ದು, ಸರ್ಕಾರಿ ಉದ್ಯೋಗ ಗಿಟ್ಟಿಸಿ ಕೊಳ್ಳಲು ಸಾಧ್ಯವಾಗದೇ ಉನ್ನತ ವ್ಯಾಸಂಗ ಮಾಡಿದ ಸಮುದಾಯದ ಯುವಕರು ಉದ್ಯೋಗಾವಕಾಶಕ್ಕಾಗಿ ಕಾಯುವಂತಾಗಿದೆ ಎಂದು ಅಲವತ್ತು ತೋಡಿಕೊಂಡರು.

ನಾಗಮಣಿ, ರವಿ, ಸಂತೋಷ್, ಪಳನಿ, ಅವಿನಾಶಿ, ವಿಜಯ್ ಭಾಗವಹಿಸಿದ್ದರು.

ಕೆಎಸ್‌ನ ಕಾವ್ಯದ ಹಿಂದೆ ಪತ್ನಿ ಪಾತ್ರ ಮಹತ್ತರ



ಪ್ರೇಮಕವಿ ನರಸಿಂಹಸ್ವಾಮಿ ಪತ್ನಿ ವೆಂಕಮ್ಮ ನೆನಪು ಕಾರ್ಯಕ್ರಮದಲ್ಲಿ ಗೀತನಮನ ಸಲ್ಲಿಸಿದರು.

ಕಿಕ್ಕೇರಿ: ಕಿಕ್ಕೇರಿಯ ವರಕವಿ ಮೈಸೂರು ಮಲ್ಲಿಗೆಯ ಕೆಎಸ್‌ನ ಅವರ ಪ್ರತಿ ಕಾವ್ಯದ ಹಿಂದೆ ಇವರ ಪತ್ನಿ ವೆಂಕಮ್ಮ ಅವರ ಪ್ರೋತ್ಸಾಹ ಉತ್ತೇಜನ ಇದೆ ಎಂದು ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ಅಧ್ಯಕ್ಷ ಡಾ.ಕಿಕ್ಕೇರಿ ಕೃಷ್ಣಮೂರ್ತಿ ತಿಳಿಸಿದ್ದಾರೆ.

ಪಟ್ಟಣದ ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ವತಿಯಿಂದ ಸ್ಪಂದನಾ ಫೌಂಡೇಷನ್, ಬೆಂಗಳೂರಿನ ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಸಹ ಯೋಗದೊಂದಿಗೆ ಹಮ್ಮಿಕೊಂಡಿದ್ದ 'ಒಲವಿನ ಕವಿ ಕೆ.ಎಸ್.ನ ಪತ್ನಿ ವೆಂಕಮ್ಮ ಒಂದು ನೆನಪು' ಕಾರ್ಯಕ್ರಮದಲ್ಲಿ ಮಾತನಾಡುತ್ತ ಇಡೀ ವಿಶ್ವದಲ್ಲಿಯೇ ಕವಿಪತ್ನಿಯ ಹೆಸರಿನಲ್ಲಿ ಬದುಕಿರುವ ಕವಿ ಪತ್ನಿಗೆ ಪ್ರಶಸ್ತಿ ನೀಡುವ ಕೆಲಸವಾಗಿಲ್ಲ. ಇಂತಹ ಕೆಲಸ ಸರ್ಕಾರಿ ಸ್ವಾಮ್ಯದ ಕೆಎಸ್‌ನ ಟ್ರಸ್ಟ್ ಮಾಡುತ್ತಿರುವುದಕ್ಕೆ ಶ್ಲಾಘಿಸಿದರು. ಪ್ರತಿ ವ್ಯಕ್ತಿಗಳ ಯಶಸ್ಸಿನ ಹಿಂದೆ ಪತ್ನಿಯ ಪರಿಶ್ರಮವಿದೆ. ಹೆಣ್ಣು ಇಡೀ ಜಗದ ಕಣ್ಣು. ಈಕೆಯನ್ನು ಗುರ್ತಿಸಿದಾಗ ಮಾತ್ರ ಸಾಧಕರ ಸಾಧನೆಗೆ ನಿಜವಾದ ಅರ್ಥ ಸಿಗಲಿದೆ. ಟ್ರಸ್ಟ್‌ನಿಂದ ಈಗಾಗಲೇ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ.ಚಂದ್ರಶೇಖರ ಕಂಬಾರರ ಪತ್ನಿ ಸತ್ಯಭಾಮಾ, ದಲಿತ ಕವಿ ಡಾ. ಸಿದ್ದಲಿಂಗಯ್ಯ ಪತ್ನಿ ರಮಾಕುಮಾರಿ, ಕವಿ ಬಿ.ಆರ್.ಲಕ್ಷ್ಮಣರಾವ್ ಅವರ ಪತ್ನಿ ಗಿರಿಜಾ, ಪ್ರೊ.ಎಸ್.ಜಿ.ಸಿದ್ದರಾಮಯ್ಯ ಪತ್ನಿ ಪ್ರೇಮಲೀಲಾ, ಕವಿ ಸತ್ಯಾನಂದ ಪಾತ್ರೋಟ ಪತ್ನಿ ಸಮತಾಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಇದು ರಾಜ್ಯದ ಸಂಘ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದು ನುಡಿದರು.

ಸ್ಪಂದನಾ ಟ್ರಸ್ಟ್ ಅಧ್ಯಕ್ಷ ತ್ರಿವೇಣಿ ಮಾತನಾಡಿ, ಯುವಕರಲ್ಲಿ ಕನ್ನಡ ಭಾಷೆ ಪಾಂಡಿತ್ಯ, ಸಾಹಿತ್ಯಿಕ ಮನಸ್ಸು ಬೆಳೆಯಲು ಕೆಎಸ್‌ನ ಕಾವ್ಯ ಸ್ಫೂರ್ತಿ. ಇವರ ಪ್ರತಿ ಕವಿತೆಯಲ್ಲಿ ಕಿಕ್ಕೇರಿಯ ಪರಿಸರ, ಕವಿಗಳ ಬದುಕಿನ ಕಥಾಸಾಗರವೇ ಇದೆ ಎಂದು ಮೆಲುಕು ಹಾಕಿದರು.

ಪುಟ್ಟಚನ್ನಮ್ಮ ನಿಧನ

ಭಾರತೀನಗರ,ಆ.23–ಇಲ್ಲಿಗೆ ಸಮೀಪದ ಕುರಿಕೆಂಪನ ದೊಡ್ಡಿ ಗ್ರಾಮದಲ್ಲಿ ಸೆಸ್ಕಾಂ ಇಲಾಖೆ ನಿವೃತ್ತ ನೌಕರ ಲೇ|| ಸಿದ್ದಪ್ಪ ಅವರ ಪತ್ನಿ ಪುಟ್ಟಚನ್ನಮ್ಮ (69) ಅನಾರೋಗ್ಯದಿಂದ ನಿಧನರಾಗಿದ್ದಾರೆ.



ಮೃತರು ಸಹೋದರ ದೊಡ್ಡರಸಿನಕೆರೆ ಗ್ರಾ.ಪಂ ಅಧ್ಯಕ್ಷ ಶಿವಲಿಂಗಯ್ಯ ಸೇರಿದಂತೆ ಇಬ್ಬರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯ ಸಂಸ್ಕಾರ ಭಾನುವಾರ ಬೆಳಿಗ್ಗೆ 10ಕ್ಕೆ ಸ್ವಗ್ರಾಮ ಕುರಿ ಕೆಂಪನದೊಡ್ಡಿ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಮಾಸ್ಕ್‌ಮ್ಯಾನ್ ಅಲಿಯಾಸ್ ಚಿನ್ನಯ್ಯ ಬಂಧನ

ಗ್ರಾಮ ಪಂಚಾಯ್ತಿಯಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿದ್ದ ಮಂಡ್ಯ ತಾಲೂಕು ಚಿಕ್ಕಬಳ್ಳಿ ಗ್ರಾಮದ ಸಿ.ಎನ್. ಚಿನ್ನಯ್ಯ ಅಲಿಯಾಸ್ ಚಿನ್ನ (45) ಎಂಬಾತನೇ ಮುಸುಕುಧಾರಿ ಎಂಬುದನ್ನು ಎಸ್‌ಐಟಿ ಬಹಿರಂಗಪಡಿಸಿದೆ.

ವಿವರ: ಧರ್ಮಸ್ಥಳದಲ್ಲಿ ಸಾಮೂಹಿಕವಾಗಿ ನೂರಾರು ಶವಗಳನ್ನು ಅಕ್ರಮವಾಗಿ ಹೂತು ಹಾಕಲಾಗಿದ್ದು, ಅದನ್ನು ಹೂತು ಹಾಕಿದ್ದ ವ್ಯಕ್ತಿ ಪೊಲೀಸರ ಮುಂದೆ ಶರಣಾಗಲು ಸಿದ್ಧವಿದ್ದಾನೆ ಎಂದು ಸುಪ್ರೀಂಕೋರ್ಟ್ ಹಿರಿಯ ವಕೀಲ ಧನಂಜಯ ಅವರು ಜುಲೈ ಮೊದಲ ವಾರದಲ್ಲಿ ಸಾಮಾಜಿಕ ಜಾಲ ತಾಣದಲ್ಲಿ ತಮ್ಮ ಲೆಟರ್ ಹೆಡ್‌ನಲ್ಲೇ ಪತ್ರವೊಂದನ್ನು ಪೋಸ್ಟ್ ಮಾಡಿದ್ದರು.

ನಂತರ ಜುಲೈ 11ರಂದು ವಕೀಲರೊಂದಿಗೆ ಬೆಳ್ತಂಗಡಿ ಠಾಣೆಗೆ ಆಗಮಿಸಿದ್ದ ಮುಸುಕುಧಾರಿ ತಲೆಬುರುಡೆಯೊಂದನ್ನು ತಂದಿದ್ದು, ತಾನು ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತು ಹಾಕಿರುವುದಾಗಿಯೂ ಸದರಿ ಸ್ಥಳಗಳನ್ನು ತೋರಿಸಲು ಸಿದ್ಧವಾಗಿರುವುದಾಗಿಯೂ ದೂರು ನೀಡಿದ್ದ. ಅದರ ಆಧಾರದ ಮೇರೆಗೆ ಬೆಳ್ತಂಗಡಿ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಮರು ದಿನವೇ ಆತ ಬೆಳ್ತಂಗಡಿ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಕಲಂ 164ರಡಿ ಹೇಳಿಕೆಯನ್ನೂ ನೀಡಿದ್ದ.

ರಕ್ಷಣೆ ಪಡೆದಿದ್ದ: ಪ್ರಕರಣ ತೀವ್ರ ಸ್ವರೂಪದ್ದಾಗಿದ್ದರಿಂದ ರಾಜ್ಯ ಸರ್ಕಾರ ಎಡಿಜಿಪಿ ಪ್ರಣಬ್ ಮೊಹಂತಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿತ್ತು. ನ್ಯಾಯಾಲಯವು ಅನಾಮಿಕನಿಗೆ ಸಾಕ್ಷಿ ಸಂರಕ್ಷಣಾ ಕಾಯ್ದೆಯಡಿ ರಕ್ಷಣೆ ನೀಡಿದ್ದು, ಆತನ ಹೆಸರನ್ನು ಬಹಿರಂಗಪಡಿಸಬಾರದು. ಆತನನ್ನು ದಾಖಲೆಗಳಲ್ಲಿ 'ಪಿ' ಎಂದು ಉಲ್ಲೇಖಿಸಬೇಕು. ಆತನಿಗೆ ಮತ್ತು ಕುಟುಂಬದವರಿಗೆ ಪೊಲೀಸ್ ರಕ್ಷಣೆ ನೀಡಬೇಕು. ಸಾಕ್ಷಿದಾರ ಎಲ್ಲಿ ವಾಸ್ತವ್ಯ ಹೂಡುತ್ತಾನೋ ಅಲ್ಲಿಯೂ ಕೂಡ ಪೊಲೀಸ್ ರಕ್ಷಣೆ ನೀಡಬೇಕು ಎಂದು ಆದೇಶಿಸಿತ್ತು.

ಹಳ್ಳ ತೋಡಿಸಿದ್ದ: ನಂತರದ ದಿನಗಳಲ್ಲಿ ಈ ವ್ಯಕ್ತಿ ತಾನು ಶವಗಳನ್ನು ಹೂತಿರುವುದಾಗಿ 13 ಪಾಯಿಂಟ್‌ಗಳನ್ನು ಗುರುತಿಸಿಟ್ಟಿದ್ದ. ಎಸ್‌ಐಟಿ ತನಿಖಾ ತಂಡ ಬೆಳ್ತಂಗಡಿ ಉಪವಿಭಾಗಾಧಿಕಾರಿಗಳ ಸಮ್ಮುಖದಲ್ಲಿ ವೈದ್ಯರು ಹಾಗೂ ವಿಧಿ–ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳನ್ನೊಳ ಗೊಂಡು ಅಸ್ಥಿಪಂಜರಗಳಿಗಾಗಿ ಉತ್ಖನನ ಕಾರ್ಯ ಆರಂಭಿಸಿತ್ತು. 6ನೇ ಪಾಯಿಂಟ್‌ನಲ್ಲಿ ಒಂದು ಅಸ್ಥಿಪಂಜರ ಹಾಗೂ 11ನೇ ಪಾಯಿಂಟ್‌ನಲ್ಲಿ ಕೆಲವು ಮೂಳೆಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಕುರುಹುಗಳು ಪತ್ತೆಯಾಗಿರಲಿಲ್ಲ. 13ನೇ ಪಾಯಿಂಟ್‌ನಲ್ಲಿ ಹೆಚ್ಚಿನ ಶವಗಳನ್ನು ಹೂತಿದ್ದಾಗಿ ಆತ ಹೇಳಿದ್ದನಾದ್ದರಿಂದ ಸದರಿ ಪಾಯಿಂಟ್‌ನಲ್ಲಿ ಜಿಪಿಆರ್ ಸಹಾಯದೊಂದಿಗೆ ಉತ್ಖನನ ಕಾರ್ಯ ನಡೆಯಿತಾದರೂ, ಯಾವುದೇ ಕುರುಹುಗಳು ಪತ್ತೆಯಾಗಿರಲಿಲ್ಲ.

ಎಸ್‌ಐಟಿಗೆ ಸಂಶಯ: ಆದರೆ ಅಷ್ಟರೊಳಗಾಗಿಯೇ ಎಸ್‌ಐಟಿ ತಂಡಕ್ಕೆ ಈತ ಬಿಡುತ್ತಿರುವುದು ಬರೀ ಬುರುಡೆ ಎಂಬ ಸಂಶಯ ಬರಲಾರಂಭಿಸಿತು. 13ನೇ ಪಾಯಿಂಟ್ ನಂತರವೂ ಕೆಲವು ಕಡೆ ಶವ ಹೂತಿರುವುದಾಗಿ ಆತ ತಿಳಿಸಿದನಾದರೂ, ಮತ್ತೆ ಉತ್ಖನನ ಕಾರ್ಯ ನಡೆಸಲು ನಿರಾಕರಿಸಿದ ಎಸ್‌ಐಟಿ ತಂಡ, ಅನಾಮಿಕ ಎಲ್ಲಿಂದ ಬುರುಡೆ ತಂದಿದ್ದನೋ ಆ ಸ್ಥಳದ ಉತ್ಖನನಕ್ಕಾಗಿ ಅನಾಮಿಕನನ್ನು ವಿಚಾರಣೆಗೊಳಪಡಿಸಿತ್ತು.

ಆದರೆ ಬುರುಡೆ ತಂದ ಸ್ಥಳವನ್ನು ಕರಾರುವಾಕ್ಕಾಗಿ ಹೇಳಲು ಆತನಿಂದ ಸಾಧ್ಯವಾಗದ ಕಾರಣ ತೀವ್ರವಾಗಿ ವಿಚಾರಣೆಗೊಳಪಡಿಸಿದ ವೇಳೆ, ತಮಿಳುನಾಡಿನ ಈರೋಡು ಜಿಲ್ಲೆ ಸತ್ಯಮಂಗಲಂ ಬಳಿಯ ಚಿಕ್ಕರಸನ ಪಾಳ್ಯಂನಲ್ಲಿದ್ದ ತನ್ನನ್ನು ಮೂವರು ಸಂಪರ್ಕಿಸಿ ಈ ಬುರುಡೆಯನ್ನು ಕೊಟ್ಟು ಪೊಲೀಸರಿಗೆ ದೂರು ನೀಡಲು ಹೇಳಿದ್ದರು. ಅವರು ಹೇಳಿದಂತೆ ನಾನು ಮಾಡಿದ್ದೇನೆ ಎಂದು ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾನೆ.

ಆಗಸ್ಟ್ 16ರಂದೇ ಅನಾಮಿಕ ಬಿಡುತ್ತಿರುವುದೆಲ್ಲಾ ಬುರುಡೆ ಎಂಬುದು ಎಸ್‌ಐಟಿ ತಂಡಕ್ಕೆ ಮನವರಿಕೆಯಾಗಿ ಬಿಟ್ಟಿದೆ. ಅಂದು ಎಸ್‌ಐಟಿ ಮುಖ್ಯಸ್ಥ ಪ್ರಣಬ್ ಮೊಹಂತಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರಿಗೆ ಈ ವಿಷಯ ತಿಳಿಸಿದ್ದರು ಎನ್ನಲಾಗಿದೆ. ಈ ಹಿನ್ನೆಲೆಯಲ್ಲೇ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, 'ಧರ್ಮಸ್ಥಳ ವಿಚಾರದಲ್ಲಿ ಷಡ್ಯಂತರ ನಡೆದಿದೆ' ಎಂಬ ಹೇಳಿಕೆಯನ್ನು ನೀಡಿದ್ದರು ಎಂದು ಹೇಳಲಾಗಿದೆ. ಎಸ್‌ಐಟಿ ಮುಖ್ಯಸ್ಥರು ಹೇಳಿದ್ದ ವಿವರಗಳನ್ನಾಧರಿಸಿ ಗೃಹ ಸಚಿವರು ವಿಧಾನಸಭೆಯಲ್ಲಿ ತಮ್ಮ ಹೇಳಿಕೆಯನ್ನು ದಾಖಲಿಸಿದ್ದರು. ಆದರೆ ಅನಾಮಿಕ ಬಿಡುತ್ತಿರುವುದು ಬುರುಡೆ ಎಂಬುದನ್ನು ಮರೆಮಾಚಿದ್ದರು.

ವಾರದ ಹಿಂದೆ ಎಸ್‌ಐಟಿ ಅನಾಮಿಕನ ಬಗ್ಗೆ ಒಂದು ನಿರ್ಧಾರಕ್ಕೆ ಬಂದಿತ್ತಾದರೂ, ವಿಧಾನ ಮಂಡಲ ಅಧಿವೇಶನ ಮುಗಿದ ಬಳಿಕ ಮುಂದಿನ ಕ್ರಮಕ್ಕೆ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರು ಸೂಚಿಸಿದ್ದ ಕಾರಣ ಶುಕ್ರವಾರ ವಿಧಾನ ಮಂಡಲ ಅಧಿವೇಶನ ಮುಗಿಯುತ್ತಿದ್ದಂತೆಯೇ ಅತ್ತ ಎಸ್‌ಐಟಿ ಅಧಿಕಾರಿಗಳು ಅನಾಮಿಕನ ಕುರಿತು ನ್ಯಾಯಾಲಯಕ್ಕೆ ವರದಿ ಸಲ್ಲಿಸಿ ಸಾಕ್ಷಿ ಸಂರಕ್ಷಣಾ ಕಾಯ್ದೆಯಿಂದ ಆತ ಪಡೆದಿದ್ದ ರಕ್ಷಣೆಯನ್ನು ತೆರವು ಗೊಳಿಸಿದ್ದಲ್ಲದೇ ಆತನನ್ನು ಆರೋಪಿ ಎಂದು ಉಲ್ಲೇಖಿಸಿ, ಶನಿವಾರ ಬೆಳಗ್ಗೆ ಬಂಧಿಸಿದ್ದಲ್ಲದೇ ಅನಾಮಿಕ ಯಾರು ಎಂಬುದನ್ನು ಬಹಿರಂಗಪಡಿಸಿದ್ದಾರೆ.

ಬುರುಡೆದಾಸ ಚಿನ್ನಯ್ಯನನ್ನು ಇಂದು ಮಧ್ಯಾಹ್ನ ಬೆಳ್ತಂಗಡಿ ನ್ಯಾಯಾಲಯದ ನ್ಯಾಯಾಧೀಶರಾದ ವಿಜಯೇಂದ್ರ ಅವರ ಮುಂದೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ 10 ದಿನಗಳ ಕಾಲ ಎಸ್‌ಐಟಿ ಅಧಿಕಾರಿಗಳು ಆತನನ್ನು ತಮ್ಮ ವಶಕ್ಕೆ ಪಡೆದಿದ್ದಾರೆ.

ಚಿನ್ನಯ್ಯನ ಹಿಂದೆ ಒಂದು ತಂಡವೇ ಕಾರ್ಯನಿರ್ವಹಿಸಿದೆ ಎಂದು ಹೇಳಲಾಗಿದ್ದು, ಆತನಿಗೆ ಮಹೇಶ್ ಶೆಟ್ಟಿ ತಿಮರೋಡಿ ಅವರು ಉಜಿರೆಯ ತಮ್ಮ ನಿವಾಸದಲ್ಲಿ ಆಶ್ರಯ ನೀಡಿದ್ದು, ಈಗಾಗಲೇ ಬಹಿರಂಗವಾಗಿದೆ. ಅವರನ್ನು ಈ ಪ್ರಕರಣದಲ್ಲಿ ಆರೋಪಿಯನ್ನಾಗಿಸುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಅಲ್ಲದೇ ಎಸ್‌ಐಟಿ ಕಾರ್ಯಾಚರಣೆ ಬಗ್ಗೆ ಸುಳ್ಳು ಪ್ರಕಟಣೆಗಳನ್ನು ನೀಡುತ್ತಿದ್ದ ಸುಜಾತ ಭಟ್ ಪರ ವಕೀಲ ಮಂಜುನಾಥ್ ವಿರುದ್ಧ ಶುಕ್ರವಾರ ಎಫ್‌ಐಆರ್ ದಾಖಲಾಗಿದ್ದು, ಈ ಪ್ರಕರಣದಲ್ಲಿಯೂ ಅವರು ಆರೋಪಿಯಾಗಿರುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಬುರುಡೆ ಪ್ರಕರಣದ ಹಿಂದೆ ಯಾರೆಲ್ಲಾ ಇದ್ದಾರೆ ಎಂಬುದರ ಬಗ್ಗೆ ಈಗಾಗಲೇ ಎಸ್‌ಐಟಿ ತಂಡಕ್ಕೆ ಮಾಹಿತಿ ಇದೆ ಎಂದು ಹೇಳಲಾಗಿದ್ದು, 10 ದಿನಗಳ ಕಾಲ ಆರೋಪಿ ಚಿನ್ನಯ್ಯನ ವಿಚಾರಣೆ ವೇಳೆ ಹೊರ ಬರುವ ಮಾಹಿತಿಗಳನ್ನಾಧರಿಸಿ ಪ್ರಕರಣದ ಹಿಂದಿರುವ ಎಲ್ಲರನ್ನೂ ಬಂಧಿಸಿ ಬುರುಡೆ ಪ್ರಕರಣಕ್ಕೆ ತಾರ್ಕಿಕ ಅಂತ್ಯ ನೀಡುವ ನಿಟ್ಟಿನಲ್ಲಿ ಎಸ್‌ಐಟಿ ಕಾರ್ಯೋನ್ಮುಖವಾಗಿದೆ ಎಂದು ಮೂಲಗಳು ತಿಳಿಸಿವೆ.

ರಿಯಲ್ ಎಸ್ಟೇಟ್ ಕರಾಮತ್ತು!

ಕುತೂಹಲವಿದೆ. ಆದರೆ ಆಗಸ್ಟ್ 27ರ ನಂತರ ಕುತೂಹಲಕ್ಕೆ ತೆರೆ ಬೀಳಲಿದೆ.


ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಆರಂಭ ವಾಗಿರುವ ಹರಾಜು ಪ್ರಕ್ರಿಯೆ ಆಗಸ್ಟ್ 26ರಂದು ಮುಗಿಯಲಿದೆ. ಆಗಸ್ಟ್ 27ರಂದು ಬಿಡ್ ಓಪನ್ ಮಾಡಲಿದ್ದು, ನಿವೇಶನವನ್ನು ಯಾರು ಖರೀದಿ ಮಾಡಿದ್ದಾರೆ ಎಂಬುದು ಬಯಲಾಗಲಿದೆ. ಅಲ್ಲಿವರೆಗೆ ಖರೀದಿದಾರರ ಹೆಸರು ಸೇರಿದಂತೆ ಇತರೆ ವಿವರ ಗೌಪ್ಯವಾಗಿ ರಲಿದೆ. ನಿವೇಶನ ಹರಾಜಿನಲ್ಲಿ ಭಾಗಿಯಾಗಲು 2 ಲಕ್ಷ ಇಎಂಡಿ ಕಟ್ಟುವುದು ಸೇರಿದಂತೆ 20 ಅಂಶಗಳ ಷರತ್ತು ವಿಧಿಸಲಾಗುತ್ತದೆ. ಈ ಷರತ್ತು ಗಳಿಗೆ ಬದ್ಧರಾದವರು ಇ-ಹರಾಜಿನಲ್ಲಿ ಭಾಗಿಯಾಗಲು ಅವಕಾಶ ಕಲ್ಪಿಸಲಾಗುತ್ತದೆ. ಇ–ಹರಾಜಿನಲ್ಲಿ ಭಾಗವಹಿಸುವವರು ಆನ್‌ಲೈನ್‌ನಲ್ಲಿ ಬಿಡ್ ಕೂಗುತ್ತಾ ಹೋಗುತ್ತಾರೆ. ಕೊನೆಯ ಬಿಡ್ ಕೂಗಿದವನಿಗೆ ಯಾರೂ ಪೈಪೋಟಿ ನೀಡದೇ ಇದ್ದಾಗ ಆತನಿಗೆ ಆ ನಿವೇಶನ ದಕ್ಕುತ್ತದೆ.

ಉಪ ಸಮಿತಿ ಪರಿಶೀಲನೆ: ಹರಾಜು ಪ್ರಕ್ರಿಯೆ ಮುಗಿದ ನಂತರ ಬಿಡ್ ಓಪನ್ ಮಾಡಲಾಗುತ್ತದೆ. ಬಿಡ್ ಪಡೆದವರು ನಿವೇಶನ ಖರೀದಿಗೆ ಅರ್ಹರೋ ಇಲ್ಲವೊ ಎಂಬುದರ ಪರಿಶೀಲನೆಗೆ ಎಂಡಿಎ ಆಯುಕ್ತರು ಉಪ ಸಮಿತಿ ರಚನೆ ಮಾಡುತ್ತಾರೆ. ಬಿಡ್ ಕೂಗಿದವರ ಬಗ್ಗೆ ಸಮಿತಿ ಪರಿಶೀಲನೆ ನಡೆಸಲಿದ್ದು, ಅರ್ಹತೆ ಪಡೆದವರಿಗೆ ಮಾತ್ರ ನಿವೇಶನ ಖರೀದಿ ಪ್ರಕ್ರಿಯೆಯಲ್ಲಿ ಮುಂದುವರೆಯಲು ಅವಕಾಶ ನೀಡಲಾಗುತ್ತದೆ. ಹರಾಜಿನಲ್ಲಿ ಕೂಗಿದಷ್ಟು ಹಣ, ಜಿಎಸ್‌ಟಿ, ಆಸ್ತಿ ತೆರಿಗೆ ಸೇರಿದಂತೆ ಇತರೆ ಹಣದ ಬಾಬ್ತು ಪಾವತಿ ಮಾಡಿದ ನಂತರ ನಿವೇಶನ ಮಂಜೂರು ಮಾಡಿ ನೋಂದಣಿ ಮಾಡಿಕೊಡಲಾಗುತ್ತದೆ.

ಮೊದಲೆಲ್ಲಾ ಅಡ್ಜೆಸ್ಟ್‌ಮೆಂಟ್: ನಿವೇಶನಗಳ ಇ–ಹರಾಜು ನಿಯಮ ಜಾರಿಯಾಗುವ ಮೊದಲು ನಡೆಯುತ್ತಿದ್ದ ಹರಾಜು ಪ್ರಕ್ರಿಯೆಯಲ್ಲಿ ಬಹಳಷ್ಟು ಗೋಲ್ ಮಾಲ್ ನಡೆಯುತ್ತಿತ್ತು. ಕೇವಲ ನಾಲ್ಕೈದು ಮಂದಿ ಸೇರಿ, ಮಾತಾಡಿಕೊಂಡು ಕಡಿಮೆ ಬೆಲೆಗೆ ನಿವೇಶನ ಹೊಡೆಯುವ ಒಪ್ಪಂದ ಮಾಡಿಕೊಳ್ಳುತ್ತಿದ್ದರು. ಇದರಿಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿತ್ತು. ಆದರೆ ಈಗ ನಡೆಯುತ್ತಿರುವ ಇ–ಹರಾಜಿನಲ್ಲಿ ಯಾರು ಬಿಡ್ ಕೂಗುತ್ತಾರೆ ಎಂಬುದೇ ತಿಳಿಯುವುದಿಲ್ಲ. ಆನ್‌ಲೈನ್ ನಡೆಯುವ ಹರಾಜಿನಲ್ಲಿ ಯಾವುದೇ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಿಲ್ಲ.

ಕಳೆದ 5 ವರ್ಷ ಮೈಸೂರಲ್ಲಿ ಸಂಭವಿಸಿದ ಅಪಘಾತಗಳಿಗೆ 801 ಮಂದಿ ಸಾವು

ಮೈಸೂರು, ಆ.23(ಎಸ್‌ಪಿಎನ್)– ಮೈಸೂರು ನಗರದಲ್ಲಿ ಕಳೆದ ಐದು ವರ್ಷಗಳಲ್ಲಿ 4,508 ರಸ್ತೆ ಅಪಘಾತಗಳು ಸಂಭವಿಸಿದ್ದು, ಇದರಲ್ಲಿ 801 ಮಂದಿ ಜೀವ ಕಳೆದುಕೊಂಡರೆ, 4,606 ಮಂದಿ ಗಾಯಗೊಂಡಿದ್ದಾರೆ. ಪ್ರತಿ ವರ್ಷ ಅಪಘಾತ ಹಾಗೂ ಗಾಯಗೊಂಡವರು ಮತ್ತು ಬಲಿಯಾದವರ ಸಂಖ್ಯೆ ಏರಿಕೆಯಾಗುತ್ತಿದೆ. ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ 2025ರಲ್ಲಿ 1,216 ಅಪಘಾತಗಳಾಗಿದ್ದು, ಇದರಲ್ಲಿ 258 ಮಂದಿ ಮೃತಪಟ್ಟು, 1,485 ಮಂದಿ ಗಾಯಗೊಂಡಿದ್ದಾರೆ. **ಹಾಸನ ಜಿಲ್ಲೆಯಲ್ಲಿ** 1,091 ಅಪಘಾತಗಳಾಗಿದ್ದು, ಇದರಲ್ಲಿ 250 ಮಂದಿ ಮೃತಪಟ್ಟು, 1,119 ಮಂದಿ ಗಾಯಗೊಂಡಿದ್ದಾರೆ. ಇದರಲ್ಲಿ 372 ಮಂದಿ ಮೃತಪಟ್ಟಿದ್ದಾರೆ. **ಕೊಡಗು ಜಿಲ್ಲೆಯಲ್ಲಿ** 269 ಅಪಘಾತಗಳಾಗಿದ್ದು, ಇದರಲ್ಲಿ 32 ಮಂದಿ ಮೃತಪಟ್ಟು, 341 ಮಂದಿ ಗಾಯಗೊಂಡಿದ್ದಾರೆ. **ಮಂಡ್ಯ ಜಿಲ್ಲೆಯಲ್ಲಿ** 1,103 ಅಪಘಾತಗಳಾಗಿದ್ದು, ಇದರಲ್ಲಿ 229 ಮಂದಿ ಮೃತಪಟ್ಟು, 1,392 ಮಂದಿ ಗಾಯಗೊಂಡಿದ್ದಾರೆ. **ಚಾಮರಾಜನಗರ ಜಿಲ್ಲೆ** 2025ರಲ್ಲಿ 425 ಅಪಘಾತಗಳಾಗಿದ್ದು, ಇದರಲ್ಲಿ 107 ಮಂದಿ ಮೃತಪಟ್ಟು, 658 ಮಂದಿ ಗಾಯಗೊಂಡಿದ್ದಾರೆ.



ಒಟ್ಟು 30 ಜಿಲ್ಲೆಗಳಲ್ಲಿ 17,808 ಪ್ರಕರಣಗಳು ದಾಖಲಾಗಿದ್ದು, ಇದರಿಂದ 5,211 ಮಂದಿ ಮೃತಪಟ್ಟು 23,281 ಮಂದಿ ಗಾಯಗೊಂಡಿರುವ ಬಗ್ಗೆ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಅಪರ ಆಯುಕ್ತರು ಮಾಧ್ಯಮಗಳಿಗೆ ಮಾಹಿತಿ ಬಿಡುಗಡೆಗೊಳಿಸಿದ್ದಾರೆ.

ಅಂತೆಯೇ ಕಳೆದ ಐದು ವರ್ಷಗಳಿಂದ (2020ರಿಂದ 2025ರವರೆಗೆ) ಮೈಸೂರು ಜಿಲ್ಲೆ ಸೇರಿದಂತೆ ರಾಜ್ಯದ 30 ಜಿಲ್ಲೆಗಳಲ್ಲಿ ಸಂಚಾರ ನಿಯಮ ಉಲ್ಲಂಘನೆ ಸೇರಿದಂತೆ ಇತರೆ ತಾಂತ್ರಿಕ ಕಾರಣಗಳಿಗಾಗಿ 2,13,192 ಅಪಘಾತ(ಜೂನ್ ತಿಂಗಳ ಅಂತ್ಯದವರೆಗೆ) ಪ್ರಕರಣಗಳು ಬೆಳಕಿಗೆ ಬಂದಿದ್ದು, ಇದರಲ್ಲಿ 60,115 ಮಂದಿ ಮೃತಪಟ್ಟಿದ್ದಾರೆ.

> ಪಾಲಿಕೆ ವ್ಯಾಪ್ತಿಯಲ್ಲಿ ಹೆಚ್ಚು ಅಪಘಾತಗಳು ಸಂಭವಿಸುವ ಜಾಗಗಳನ್ನು ಗುರುತಿಸಿ, ಅಂತಹ ಸ್ಥಳಗಳನ್ನು ಬ್ಲಾಕ್ ಸ್ಪಾಟ್‌ಗಳೆಂದು ನಮೂದಿಸಲಾಗುತ್ತಿದೆ. ಈ ಮೂಲಕ ಅಪಘಾತಗಳು ನಡೆಯದಂತೆ ಮುಂಜಾಗ್ರತಾ ಕ್ರಮ ವಹಿಸಲಾಗಿದೆ. ಜತೆಗೆ ವಾಹನ ಸವಾರರಲ್ಲಿ ಜಾಗೃತಿ ಮೂಡಿಸುವ ಕೆಲಸ ನಿರಂತರವಾಗಿ ಸಾಗುತ್ತಿದೆ.
>
> **–ಶಿವಶಂಕರ್, ಎಸಿಪಿ, ಮೈಸೂರು ನಗರ ಸಂಚಾರ ವಿಭಾಗ.**

> ನಗರದಲ್ಲಿ ರಸ್ತೆ ಅಪಘಾತ ನಿಯಂತ್ರಣಕ್ಕೆ ಪೊಲೀಸರು ಸಂಚಾರ ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ನಿರಂತರ ತಪಾಸಣೆ ಕೈಗೊಂಡು ಶಾಶ್ವತ ಪರಿಹಾರ ಕಲ್ಪಿಸಬೇಕಿದೆ. ಜತೆಗೆ ಜನಸಂದಣಿ ಪ್ರದೇಶದಲ್ಲಿ ರಸ್ತೆಬದಿ ವ್ಯಾಪಾರ ನಿರ್ಬಂಧಿಸಿ ಅಪಘಾತಗಳು ಸಂಭವಿಸದಂತೆ ಕಡಿವಾಣ ಹಾಕಬೇಕಿದೆ. ಎಲ್ಲಾ ಸಂದರ್ಭದಲ್ಲೂ ಸಾರ್ವಜನಿಕರೇ ಕಾನೂನು ಪಾಲಿಸಿ ಎಂದು ಹೇಳುವ ಮುನ್ನ ಪೊಲೀಸ್ ಇಲಾಖೆ, ಸ್ಥಳೀಯ ಆಡಳಿತವೂ ಇದಕ್ಕೆ ಪೂರಕ ವಾತಾವರಣ ನಿರ್ಮಿಸಬೇಕು.
>
> **–ನಿಂಗರಾಜು ಚಿತ್ತಣ್ಣವರ್, ರಾಮಕೃಷ್ಣನಗರ ನಿವಾಸಿ**

ಮೈಸೂರು ನಗರ ವ್ಯಾಪ್ತಿಯಲ್ಲಿ ದೇವರಾಜ, ವಿವಿ ಪುರಂ, ಕೃಷ್ಣರಾಜ, ಸಿದ್ದಾರ್ಥ ನಗರ, ನರಸಿಂಹರಾಜ ಮತ್ತು ಕುವೆಂಪುನಗರ ಸಂಚಾರ ಪೊಲೀಸ್ ಠಾಣೆಗಳಿದ್ದು, ದೇವರಾಜ ಸಂಚಾರ ಹೊರತು ಪಡಿಸಿದರೆ ಉಳಿದ ಠಾಣೆ ವ್ಯಾಪ್ತಿಯಲ್ಲಿಯೇ ಬ್ಲಾಕ್ ಸ್ಪಾಟ್ ಹಾಗೂ ಅಪಾಯಕಾರಿ ಗುಂಡಿಗಳಿಂದ ಅಪಘಾತಕ್ಕೆ ಆಹ್ವಾನ ನೀಡುವಂತಿದೆ.

ಡಜನ್ ಬ್ಲಾಕ್ ಸ್ಪಾಟ್: ನಗರದಲ್ಲಿ ಬರೋಬ್ಬರಿ ಒಂದು ಡಜನ್ ಬ್ಲಾಕ್ ಸ್ಪಾಟ್‌ಗಳಿವೆ. ಈ ಬ್ಲಾಕ್ ಸ್ಪಾಟ್‌ಗಳ ವ್ಯಾಪ್ತಿಯಲ್ಲಿ ಸಂಚರಿಸುವಾಗ ಸ್ವಲ್ಪ ಎಚ್ಚರ ತಪ್ಪಿದರೂ ಅವಘಡ ಗ್ಯಾರಂಟಿ. ನಗರ ಸಂಚಾರ ಪೊಲೀಸರು ಈ ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿ, ಅಪಘಾತಗಳನ್ನು ನಿಯಂತ್ರಿಸಲು ಜಾಗೃತಿ ಫಲಕಗಳನ್ನು ಅಳವಡಿಸುವ ಮೂಲಕ ಎಚ್ಚರಿಕೆ ನೀಡುತ್ತಿದ್ದಾರೆ. ಅಪಘಾತ ನಿಯಂತ್ರಣಕ್ಕೆ ನಾನಾ ಮುನ್ನೆಚ್ಚರಿಕೆ ಕ್ರಮ ಅನುಸರಿಸುತ್ತಿದ್ದರೂ, ಅಪಘಾತಗಳ ಪ್ರಮಾಣ ಕಡಿಮೆಯಾಗಿಲ್ಲ.

ಗುರುತಿಸುವುದು ಹೇಗೆ?: ಮೂರು ವರ್ಷಗಳ ಅವಧಿಯಲ್ಲಿ ಒಂದು ನಿರ್ದಿಷ್ಟ ಸ್ಥಳದ 500 ಮೀ. ಅಂತರದಲ್ಲಿ 3 ರಿಂದ 5 ಮಂದಿ ಮೃತಪಟ್ಟಿದ್ದರೆ, 5ರಿಂದ 10 ಮಂದಿ ಗಾಯಗೊಂಡಿದ್ದರೆ ಅಂತಹ ಸ್ಥಳಗಳನ್ನು ಬ್ಲಾಕ್ ಸ್ಪಾಟ್‌ಗಳೆಂದು ಗುರುತಿಸಲಾಗುತ್ತದೆ.

ಪ್ರಿಯಕರನೊಂದಿಗೆ ಸೇರಿ ಪತಿ ಕೊಂದ ಶಿಕ್ಷಕಿಗೆ ಗಲ್ಲು ಶಿಕ್ಷೆ

ಶಿವಮೊಗ್ಗ: ಪತಿಯನ್ನು ಕೊಲೆಮಾಡಿದ ಪತ್ನಿ ಸೇರಿದಂತೆ ಇಬ್ಬರಿಗೆ ಗಲ್ಲು ಶಿಕ್ಷೆ ಹಾಗೂ ಮತ್ತೋರ್ವನಿಗೆ 7 ವರ್ಷ ಕಾರಾಗೃಹ ವಾಸ ಶಿಕ್ಷೆಯನ್ನು ವಿಧಿಸಿ ಭದ್ರಾವತಿಯ 4ನೇ ಹೆಚ್ಚುವರಿ ಜಿಲ್ಲಾ–ಸತ್ರ ನ್ಯಾಯಾಲಯ ತೀರ್ಪು ನೀಡಿದೆ. ನ್ಯಾಯಮೂರ್ತಿ ಇಂದಿರಾ ಮೈಲಸ್ವಾಮಿ ಚೆಟ್ಟಿಯಾರ್ ಅವರಿದ್ದ ಪೀಠ ಈ ತೀರ್ಪು ನೀಡಿದೆ. ಶಾಲಾ ಶಿಕ್ಷಕಿಯಾಗಿದ್ದ ಲಕ್ಷ್ಮೀ ಹಾಗೂ ಆಕೆ ಪ್ರಿಯಕರ ಕೃಷ್ಣಮೂರ್ತಿ, ಶಿವರಾಜ್ ಶಿಕ್ಷೆಗೆ ಗುರಿಯಾದವರು. ಸೊರಬದ ಇಮ್ತಿಯಾಜ್ ಎಂಬ ಶಿಕ್ಷಕ ಗುಲ್ಬರ್ಗದಲ್ಲಿ ಕೆಲಸ ಮಾಡುವಾಗ ಪ್ರೀತಿಸಿ, ಲಕ್ಷ್ಮೀಯನ್ನು ಮದುವೆಯಾಗಿದ್ದರು. ಇವರಿಗೆ ಒಂದು ಗಂಡು ಮಗು ಸಹ ಇತ್ತು. ಲಕ್ಷ್ಮೀ ಮನೆಯ ಪಕ್ಕದಲ್ಲಿಯೆ ಬಾಲ್ಯದ ಗೆಳೆಯ ಕೃಷ್ಣಮೂರ್ತಿ ಎಂಬಾತ ಮನೆಮಾಡಿಕೊಂಡಿದ್ದು, ಇವರಿಬ್ಬರ ನಡುವೆ ಹೆಚ್ಚಿನ ಒಡನಾಟ ಕಂಡುಬಂದ ಕಾರಣ ಇಮ್ತಿಯಾಜ್ ತನ್ನ ಪತ್ನಿಗೆ ಬುದ್ಧಿಹೇಳುತ್ತಿದ್ದರು. 2016 ಜು.7ರಂದು ರಾತ್ರಿ 7.30ರ ಸಮಯದಲ್ಲಿ ಈ ಕುರಿತಂತೆ ಲಕ್ಷ್ಮೀಗೂ ಇಮ್ತಿಯಾಜ್‌ಗೂ ಜಗಳವಾಗಿದೆ. ಆಗ ಲಕ್ಷ್ಮೀ ತನ್ನ ಸ್ನೇಹಿತ ಕೃಷ್ಣಮೂರ್ತಿ ಜೊತೆ ಸೇರಿ ಇಮ್ತಿಯಾಜ್‌ರನ್ನು ಕೊಲೆ ಮಾಡಿದ್ದಳು. ಮತ್ತೋರ್ವ ಶಿವರಾಜ್ ಎಂಬಾತನ ನೆರವು ಪಡೆದು ಮೂವರೂ ಸೇರಿ ಇಮ್ತಿಯಾಜ್ ಮೃತದೇಹವನ್ನು ಭದ್ರಾ ನದಿಗೆ ಎಸೆದಿದ್ದರು.

ಕೊಲೆಯಾದ ಮಾರನೆ ದಿನ ಲಕ್ಷ್ಮೀ, ಇಮ್ತಿಯಾಜ್ ಸಹೋದರನಿಗೆ ಫೋನ್ ಮಾಡಿ ಕೂಡಲೆ ಬರುವಂತೆ ಹೇಳಿದ್ದಳು. ಇಮ್ತಿಯಾಜ್ ಸಹೋದರ ಭದ್ರಾವತಿಯ ಲಕ್ಷ್ಮೀ ಮನೆಗೆ ಬಂದಾಗ ಆಕೆ ಅಳುತ್ತಾ ರಾತ್ರಿ ನನಗೂ ನಿಮ್ಮಣ್ಣ ಇಮ್ತಿಯಾಜ್‌ಗೂ ಜಗಳವಾಯಿತು. ಆ ಸಿಟ್ಟಿನ ಬರದಲ್ಲಿ ನಾನು ಕಬ್ಬಿಣದ ರಾಡಿನಿಂದ ಅವನ ತಲೆಗೆ ಹೊಡೆದೆ. ಅದರಿಂದ ಅವನು ಸತ್ತುಹೋದ. ಆಗ ನಾನು ಪಕ್ಕದ ಮನೆಯ ಕೃಷ್ಣಮೂರ್ತಿ, ಶಿವರಾಜ್ ಬಳಿ ಸಹಾಯ ಕೇಳಿ, ಅವರ ಸಹಾಯದಿಂದ ಇಮ್ತಿಯಾಜ್ ದೇಹವನ್ನು ಭದ್ರಾ ನಾಲೆಗೆ ಹಾಕಿಬಂದೆ. ಈಗ ನೀವೇ ನಮ್ಮನ್ನು ಕಾಪಾಡ ಬೇಕು ಎಂದು ಕೇಳಿಕೊಂಡಿದ್ದಳು. ಇಮ್ತಿಯಾಜ್ ಸಹೋದರ ನ್ಯೂಟೌನ್ ಪೊಲೀಸ್ ಠಾಣೆಯಲ್ಲಿ ಲಕ್ಷ್ಮೀ, ಕೃಷ್ಣಮೂರ್ತಿ, ಶಿವರಾಜ್ ವಿರುದ್ಧ ದೂರು ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ ಪ್ರಮುಖ ಅಪರಾಧಿ ಲಕ್ಷ್ಮೀ ಹಾಗೂ ಕೃಷ್ಣಮೂರ್ತಿಗೆ ಕೊಲೆಗಾಗಿ ಮರಣದಂಡನೆ ಹಾಗೂ ಶಿವರಾಜ್‌ಗೆ ಸಾಕ್ಷಿ ನಾಶಪಡಿಸಲು ಯತ್ನಿಸಿದ ಆರೋಪಕ್ಕೆ 7 ವರ್ಷಗಳ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ಮರಣದಂಡನೆ ಶಿಕ್ಷೆ ಜೊತೆಗೆ ಮತ್ತು 13 ಲಕ್ಷ ದಂಡ ವಿಧಿಸಿದ್ದು, ಇದರಲ್ಲಿ 10 ಲಕ್ಷ ಹಣವನ್ನು ಮೃತನ ತಾಯಿಗೆ ಪರಿಹಾರವಾಗಿ ನೀಡಬೇಕು. ಉಳಿದ 3 ಲಕ್ಷ ಹಣವನ್ನ ದಂಡವಾಗಿ ಪಾವತಿಸಬೇಕು ಎಂದು ಆದೇಶಿಸಲಾಗಿದೆ

ಮೈಸೂರು ಮಿತ್ರ

ಭಾನುವಾರ 24 ಆಗಸ್ಟ್ 2025

ಇಲವಾಲ ಬಳಿಯ ಕಿರು ಅರಣ್ಯದಲ್ಲಿರುವುದು ಎರಡಲ್ಲ ಮೂರು ಹುಲಿ!

- ಅರಣ್ಯ ಇಲಾಖೆಯ ಕ್ಯಾಮರಾ ಟ್ರ್ಯಾಪ್‌ನಲ್ಲಿ ಎರಡು ಮರಿಯೊಂದಿಗೆ ತಾಯಿ ಹುಲಿ ಚಲನ-ವಲನ ಸೆರೆ
- ಮರಿಗಳ ರಕ್ಷಣೆಗೆ ಸರಹದ್ದು ಹುಡುಕುತ್ತಿರುವ ನಾಗರಹೊಳೆಯ ಅಂತರಸಂತೆ ಉಪವಿಭಾಗದ ಹೆಣ್ಣು ಹುಲಿ

ಮೈಸೂರು, ಆ.23(ಎಂಟಿವೈ)- ಮೈಸೂರು ತಾಲೂಕಿನ ಇಲವಾಲ ಅರಣ್ಯದಲ್ಲಿ ಕಂಡು ಬಂದ ಹುಲಿ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಅಂತರಸಂತೆ ಉಪವಿಭಾಗದಲ್ಲಿ ಓಡಾಡುತ್ತಿದ್ದ ಹೆಣ್ಣು ಹುಲಿ ಎಂದು ಗುರುತಿಸಲಾಗಿದ್ದು, ಎರಡು ಮರಿಗಳೊಂದಿಗಿರುವ ದೃಶ್ಯ ಅರಣ್ಯ ಇಲಾಖೆ ಅಳವಡಿಸಿದ್ದ ಕ್ಯಾಮರಾ ಟ್ರ್ಯಾಪ್‌ನಲ್ಲಿ ಸೆರೆಯಾಗಿದೆ.

ಮೈಸೂರು ನಗರದ ಹೊರವಲಯದ ಇಲವಾಲ ಕಿರು ಅರಣ್ಯ ಪ್ರದೇಶದಲ್ಲಿ ಎರಡು ಮರಿಯೊಂದಿಗೆ ಬೀಡು ಬಿಟ್ಟಿರುವ ತಾಯಿ ಹುಲಿ ಆ.13ರಂದು ಸಂಜೆ ಅಲೋಕ ಬಳಿ ರಸ್ತೆ ದಾಟುತ್ತಿದ್ದಾಗ ವಾಹನ ಸವಾರರ ಕಣ್ಣಿಗೆ ಬಿದ್ದಿತ್ತು. ತಾಯಿ ಹುಲಿ ರಸ್ತೆ ದಾಟಿ ಅರಣ್ಯ ಪ್ರದೇಶದ ಬೇಲಿ ನುಸುಳಿದ್ದರೆ, ವಾಹನ ಕಂಡು ಮತ್ತೊಂದು ಬದಿಯಲ್ಲಿದ್ದ ಮರಿಗಳು ಭಯದಿಂದ ಅಲ್ಲಿಯೇ ಅಡಗಿದ್ದವು. ಆ ರಸ್ತೆಯಲ್ಲಿ ಓಡಾಡುವವರಿಗೆ ಹುಲಿ ಇರುವಿಕೆ ಎಚ್ಚರಿಕೆ ನೀಡಿದ್ದರಿಂದ ಅಲೋಕ ಬೈಪಾಸ್ ರಸ್ತೆಯಲ್ಲಿ ವಾಹನ ಸಂಚಾರ ಕೆಲ ಕಾಲ ಬಂದ್ ಆದ ಬಳಿಕ ಮರಿಗಳು ರಸ್ತೆ ದಾಟಿ ತಾಯಿಯನ್ನ ಸೇರಿಕೊಂಡಿದ್ದವು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ್ದ ಅರಣ್ಯ ಸಿಬ್ಬಂದಿ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಹುಲಿ ಇರುವಿಕೆ ಕುರಿತು ಮಾಹಿತಿ ನೀಡಿ ಎಚ್ಚರಿಕೆಯಿಂದ ಇರುವಂತೆ ಸಲಹೆ ನೀಡಿದ್ದರು. ಆ.14ರಂದು ಹುಲಿ ಕಾಣಿಸಿಕೊಂಡಿದ್ದ ಸ್ಥಳ ಸೇರಿದಂತೆ ಇಲವಾಲ ಅರಣ್ಯ ಪ್ರದೇಶದಲ್ಲಿ 15ಕ್ಕೂ ಹೆಚ್ಚು ಕ್ಯಾಮರಾ ಟ್ರ್ಯಾಪ್ ಅಳವಡಿಸಿ, ಅರಣ್ಯ ಪ್ರದೇಶದಲ್ಲಿನ ಚಟುವಟಿಕೆ ಮೇಲೆ ನಿಗಾ ಇಡಲಾಗಿತ್ತು. ಆದರೆ, ಕಳೆದ ನಾಲ್ಕೈದು ದಿನದಿಂದ ಅರಣ್ಯ ಇಲಾಖೆ ಅಳವಡಿಸಿರುವ ಕ್ಯಾಮರಾ ಟ್ರ್ಯಾಪ್‌ನಲ್ಲಿ 2 ಮರಿಯೊಂದಿಗೆ ತಾಯಿ ಹುಲಿ ಚಲನ-ವಲನ ದೃಶ್ಯ ಸೆರೆ ಸಿಕ್ಕಿದೆ. ತಾಯಿ ಹುಲಿ ಮೈ ಮೇಲಿನ ಪಟ್ಟೆಯನ್ನು ಪರಿಶೀಲಿಸಿದಾಗ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಅಂತರಸಂತೆ ಉಪವಿಭಾಗದ ಅಂತರಸಂತೆ, ಮೇಟಿಕುಪ್ಪೆ ವಲಯದಲ್ಲಿ ಈ ಹಿಂದೆ ಕಂಡು ಬಂದಿದ್ದ ಹೆಣ್ಣು ಹುಲಿ ಎಂದು ಖಚಿತವಾಗಿದೆ.

ಗರ್ಭಿಣಿಯಾದ ನಂತರ ತನ್ನ ಕರುಳ ಕುಡಿಗಳ ರಕ್ಷಣೆ ಮಾಡುವುದಕ್ಕಾಗಿ ಅದು ನಾಗರಹೊಳೆ ಕಾಡಂಚಿನ ಪ್ರದೇಶದತ್ತ ಬಂದು ಮರಿ ಹಾಕಿರುವ ಸಾಧ್ಯತೆ ಇದೆ. ಅದರ ಮರಿಗೆ 5ರಿಂದ 7 ತಿಂಗಳಾಗಿದ್ದು, ಇದೀಗ ಮತ್ತಷ್ಟು ಸುರಕ್ಷಿತ ಪ್ರದೇಶ ಹುಡುಕುತ್ತಾ ಇಲವಾಲದ ಅರಣ್ಯ ಪ್ರದೇಶದತ್ತ ಧಾವಿಸಿ ಬಂದಿದೆ ಎಂದು ಅಂದಾಜಿಸಲಾಗಿದೆ.

ಎರಡಲ್ಲ ಮೂರು ಹುಲಿ: ಇಲವಾಲದ ಅರಣ್ಯ ಪ್ರದೇಶ ಸುಮಾರು 500 ಎಕರೆ ವಿಸ್ತೀರ್ಣ ಹೊಂದಿದ್ದು, ಅಲ್ಲಿ ಕಾಡಂದಿ, ಜಿಂಕೆ, ಮೊಲ ಸೇರಿದಂತೆ ವಿವಿಧ ಸಸ್ಯಹಾರಿ ಪ್ರಾಣಿಗಳಿವೆ. ಸಾಕಷ್ಟು ಆಹಾರ (ಬಲಿ ಪ್ರಾಣಿ) ಲಭ್ಯವಾಗುತ್ತಿರುವ ಹಿನ್ನೆಲೆಯಲ್ಲಿ ಮರಿಯೊಂದಿಗೆ ತಾಯಿ ಹುಲಿ ಇಲವಾಲ ಅರಣ್ಯದಲ್ಲೇ ಬೀಡು ಬಿಟ್ಟಿದೆ. ಆರಂಭದಲ್ಲಿ ಇಲವಾಲ ಅರಣ್ಯದಲ್ಲಿ ಇರುವುದು ಎರಡು ಹುಲಿ ಎಂದಷ್ಟೇ ನಂಬಲಾಗಿತ್ತು. ಆದರೆ, ಕ್ಯಾಮರಾ ಟ್ರ್ಯಾಪ್ ದೃಶ್ಯಾವಳಿಯಿಂದಾಗಿ ಇಲವಾಲ ಅರಣ್ಯದಲ್ಲಿರುವುದು ಮೂರು ಹುಲಿ ಎಂದು ದೃಢಪಟ್ಟಿದೆ.

ಅರಣ್ಯಕ್ಕೆ ಜಾನುವಾರು ಬಿಡಬೇಡಿ: ಮರಿಯೊಂದಿಗೆ ಹುಲಿ ಇರುವಿಕೆಯಿಂದಾಗಿ ಅರಣ್ಯ ಇಲಾಖೆ ಸ್ಥಳೀಯ ಗ್ರಾಮಗಳಲ್ಲಿ ಆಯಾ ಗ್ರಾ.ಪಂ ಸಿಬ್ಬಂದಿಯ ಸಹಕಾರದಿಂದ ಅರಣ್ಯ ಪ್ರದೇಶಕ್ಕೆ ಜಾನುವಾರು ಬಿಡದಂತೆ ಹಾಗೂ ಅತ್ತ ಜನರು ಸುಳಿಯದಂತೆ ಜಾಗೃತಿ ಮೂಡಿಸಲಾಗುತ್ತಿದೆ. ಅಲ್ಲದೆ, ಅರಣ್ಯದಂಚಿನ ಹೊಲ, ತೋಟಕ್ಕೆ ಹೋಗುವ ವೇಳೆ ಹುಶಾರಾಗಿರುವಂತೆ ಎಚ್ಚರಿಕೆ ನೀಡಲಾಗುತ್ತಿದೆ.

ಮರಿ ಇದ್ದಾಗ ಅಪಾಯ: ಮರಿಯೊಂದಿಗೆ ಇದ್ದಾಗ ಜನ ಎದುರಾದರೆ ತಾಯಿ ಹುಲಿ ಮರಿಗಳಿಗೆ ಅಪಾಯವಿದೆ ಎಂದು ಭಾವಿಸಿ ದಾಳಿ ಮಾಡುವ ಸಾಧ್ಯತೆ ಇದೆ. ಈ ಕಾರಣದಿಂದ ಅರಣ್ಯ ಇಲಾಖೆಗೆ ಇದೊಂದು ತಲೆ ನೋವಾಗಿದೆ. ಮಾನವ-ವನ್ಯಜೀವಿ ಸಂಘರ್ಷ ತಡೆಗೆ ಅಗತ್ಯ ಕ್ರಮ ಕೈಗೊಳ್ಳುತ್ತಿದ್ದರೂ ಮರಿಯೊಂದಿಗೆ ಇರುವ ಹುಲಿಯಿಂದ ಆಗಬಹುದಾದ ಸಂಘರ್ಷಕ್ಕೆ ಕಡಿವಾಣ ಹಾಕುವುದು ಅರಣ್ಯ ಇಲಾಖೆಗೆ ಸವಾಲಿನ ಕೆಲಸವಾಗಿದೆ.

ಅರಬಿತಿಟ್ಟಿನ ಕಡೆ ಮುಖ ಮಾಡಿವೆಯೇ: ಪ್ರಸ್ತುತ ಮರಿಯೊಂದಿಗೆ ಇರುವ ತಾಯಿ ಹುಲಿ ಅರಬಿತಿಟ್ಟು ಅರಣ್ಯ ಪ್ರದೇಶದತ್ತ ತೆರಳಲು ಪ್ರಯತ್ನಿಸುತ್ತಿರುವಂತೆ ಕಂಡು ಬಂದಿದೆ. ಇಲವಾಲ ಅರಣ್ಯದಿಂದ ಅರಬಿತಿಟ್ಟು ಅರಣ್ಯ 8 ಕಿ.ಮೀ. ಇದೆ. ಈ ಎರಡು ಅರಣ್ಯದ ನಡುವೆ ಕೆಲ ಗ್ರಾಮ, ಹೊಲ, ತೋಟಗಳಿರುವುದರಿಂದ ಹುಲಿ ಮರಿಯನ್ನು ಕರೆದೊಯ್ಯಲು ಅಡ್ಡಿಯಾಗುತ್ತಿದೆ ಎಂಬ ಅನುಮಾನ ಮೂಡಿದೆ. ಅಲ್ಲದೆ, ಅರಬಿತಿಟ್ಟಲ್ಲೂ ಮೂರು ಹುಲಿಗಳಿರುವ ಮಾಹಿತಿಯಿದ್ದು, ಅವುಗಳೊಂದಿಗೆ ಸಂಘರ್ಷ ಏರ್ಪಡುವ ಸಾಧ್ಯತೆಯೂ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.



ಮೈಸೂರು ತಾಲೂಕು ಇಲವಾಲದ ಅರಣ್ಯ ಪ್ರದೇಶದಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿರುವ ಅರಣ್ಯ ಸಿಬ್ಬಂದಿ.

ಕಟ್ಟೆಚ್ಚರ ವಹಿಸಲಾಗಿದೆ

"ಇಲವಾಲ ಅರಣ್ಯದಲ್ಲಿ ಎರಡು ಮರಿಯೊಂದಿಗೆ ಇರುವ ತಾಯಿ ಹುಲಿಯ ದೃಶ್ಯ ಇಲಾಖೆಗೆ ಲಭಿಸಿದೆ. ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ. ಮರಿಗಳಿರುವುದರಿಂದ ಅದನ್ನು ಸೆರೆ ಹಿಡಿಯುವ ಅಥವಾ ಕೂಂಬಿಂಗ್ ಮಾಡುವ ಕಾರ್ಯಾಚರಣೆ ನಡೆಸುವುದು ಕಷ್ಟ, ಸುತ್ತಮುತ್ತಲಿನ ಗ್ರಾಮಗಳ ಜನರಲ್ಲಿ ಹುಲಿ ಇರುವಿಕೆ ಬಗ್ಗೆ ಮಾಹಿತಿ ನೀಡಿ ಎಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಲಾಗಿದೆ.

-ಪರಮೇಶ್, ಡಿಸಿಎಫ್

ಆನ್‌ಲೈನ್ ಬೆಟ್ಟಿಂಗ್: ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ಇಡಿ ಬಂಧನ



ಬೆಂಗಳೂರು,ಆ.23 (ಕೆಂಎಂ) -ಆನ್‌ಲೈನ್ ಬೆಟ್ಟಿಂಗ್ ನಡೆಸುತ್ತಿದ್ದ ಕಾಂಗ್ರೆಸ್ ಶಾಸಕ ಕೆ.ಸಿ. ವೀರೇಂದ್ರ ಅವರನ್ನು ಕೇಂದ್ರ ಜಾರಿ ನಿರ್ದೇಶನಾಲಯ (ಇ.ಡಿ.) ಬಂಧಿಸಿದೆ.

ಆರೋಪಿಯಿಂದ 12 ಕೋಟಿ ರೂ. ನಗದು, ಇದರಲ್ಲಿ ಒಂದು ಕೋಟಿ ರೂ. ಮೌಲ್ಯದ ವಿದೇಶಿ ಕರೆನ್ಸಿ ಅಲ್ಲದೆ, 6 ಕೋಟಿ ರೂ. ಮೌಲ್ಯದ ಚಿನ್ನಾಭರಣ, 10 ಕೆ.ಜಿ. ಬೆಳ್ಳಿ ಸಾಮಗ್ರಿ ಜೊತೆಗೆ 4 ವಾಹನಗಳನ್ನು ಪಿಎಂಎಲ್‌ಎ 2002 ರಡಿ ವಶಪಡಿಸಿಕೊಳ್ಳಲಾಗಿದೆ. ಇದಲ್ಲದೆ, 17 ಬ್ಯಾಂಕ್ ಖಾತೆಗಳು ಹಾಗೂ 2 ಬ್ಯಾಂಕ್ ಲಾಕರ್‌ಗಳನ್ನು ಮುಚ್ಚಲಾಗಿದೆ.

ಹಣದ ಮೂಲವನ್ನು ಪತ್ತೆ ಹಚ್ಚುವ ಸಲುವಾಗಿ ಗ್ಯಾಂಗ್ಟಾಕ್‌ನಲ್ಲಿ ಶನಿವಾರದಂದು ವೀರೇಂದ್ರ ಅವರನ್ನು ಬಂಧಿಸಲಾಯಿತು. ಬಳಿಕ ಅವರನ್ನು ಸಿಕ್ಕಿಂನ ಗ್ಯಾಂಗ್ಟಾಕ್ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿ, ಬೆಂಗಳೂರಿನ ಅಧಿಕಾರ ಕ್ಷೇತ್ರ ನ್ಯಾಯಾಲಯಕ್ಕೆ ಹಾಜರುಪಡಿಸಲು ಟ್ರಾನ್ಸಿಟ್ ರಿಮಾಂಡ್ ಪಡೆಯಲಾಯಿತು ಎಂದು ಇ.ಡಿ. ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಕಳೆದ 2 ದಿನಗಳಿಂದ ಗ್ಯಾಂಗ್ಟಾಕ್, ಚಿತ್ರದುರ್ಗ, ಜೋಧ್‌ಪುರ, ಮುಂಬೈ ಮತ್ತು ಗೋವಾದ ಪಪ್ಪೀಸ್ ಕ್ಯಾಸಿನೋ ಗೋಲ್ಡ್, ಓಷನ್ ರಿವರ್ಸ್ ಕ್ಯಾಸಿನೋ, ಪಪ್ಪೀಸ್ ಕ್ಯಾಸಿನೋ ಪ್ರೈಡ್, ಓಷನ್ ಸೆವೆನ್ ಕ್ಯಾಸಿನೋ ಹಾಗೂ ಬಿಗ್ ಡ್ಯಾಡಿ ಕ್ಯಾಸಿನೋ ಒಳಗೊಂಡಂತೆ ಸುಮಾರು 31 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿದೆ.

ವೀರೇಂದ್ರ ಮತ್ತು ಇತರರ ವಿರುದ್ಧ ಅಕ್ರಮ ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್‌ಗೆ ಸಂಬಂಧಿಸಿದಂತೆ, ಆತ ಕಿಂಗ್ 567, ರಾಜಾ 567 ಇತ್ಯಾದಿ ಹೆಸರಿನಲ್ಲಿ ಅನೇಕ ಆನ್‌ಲೈನ್ ಬೆಟ್ಟಿಂಗ್ ಸೈಟ್‌ಗಳನ್ನು ಅಳವಡಿಸಿರುವುದು ಬಹಿರಂಗವಾಗಿದೆ. ಇನ್ನಷ್ಟು ತನಿಖೆಯಲ್ಲಿ, ಆರೋಪಿಯ ಸಹೋದರ ಕೆ.ಸಿ. ತಿಪ್ಪೇಸ್ವಾಮಿ ದುಬೈನಿಂದ ಡೈಮಂಡ್ ಸಾಫ್ಟೆಕ್, ಟಿಆರ್‌ಎಸ್ ಟೆಕ್ನಾಲಜೀಸ್, ಪ್ರೈಮ್ ಟೆಕ್ನಾಲಜೀಸ್ ಎಂಬ ಮೂರು ಕಂಪನಿಗಳನ್ನು ನಡೆಸುತ್ತಿದ್ದು, ಅವು ಕರೆ ಕೇಂದ್ರ ಸೇವೆಗಳು ಮತ್ತು ಕೆ.ಸಿ. ವೀರೇಂದ್ರ ನಡೆಸುತ್ತಿರುವ ಗೇಮಿಂಗ್ ವ್ಯವಹಾರಕ್ಕೆ ಸಂಬಂಧಿಸಿವೆ ಎಂದು ಪತ್ತೆಯಾಗಿದೆ. ಆರೋಪಿ ಸಹೋದರ ಕೆ.ಸಿ.ನಾಗರಾಜ್ ಮತ್ತು ಅವರ ಮಗ ಪೃಥ್ವಿ ಎನ್.ರಾಜ್ ಅವರ ಮನೆಯಿಂದ ಆಸ್ತಿ ದಾಖಲೆಗಳು ಹಾಗೂ ಸಾಕಷ್ಟು ಅಪರಾಧ ಸಂಬಂಧಿತ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ.


ತಿಪ್ಪೇಸ್ವಾಮಿ, ಪೃಥ್ವಿ ದುಬೈ ನಿಂದಲೇ ಆನ್‌ಲೈನ್ ಗೇಮಿಂಗ್ ಕಾರ್ಯಾಚರಣೆ ನಿರ್ವಹಿಸುತ್ತಿರುವುದು ಪತ್ತೆಯಾಗಿದೆ. ವೀರೇಂದ್ರ ಮತ್ತು ಅವರ ಸಹಚರರು ಭೂಮಿಯನ್ನು ಲೀಸ್‌ಗೆ ಪಡೆಯುವ ಉದ್ದೇಶದಿಂದ ವ್ಯವಹಾರ ಪ್ರವಾಸವಾಗಿ ಬ್ಯಾಗ್ ಡೋಗ್ರಾ ಮಾರ್ಗವಾಗಿ ಗ್ಯಾಂಗ್ಟಾಕ್‌ಗೆ ಭೇಟಿ ನೀಡಿದ್ದರು. ಶೋಧ ಕಾರ್ಯಾಚರಣೆ ವೇಳೆ ವಶಪಡಿಸಿಕೊಳ್ಳಲಾದ ಸಾಕ್ಷ್ಯದಿಂದ ಹಣದ ಜಟಿಲ ಲೇಯರಿಂಗ್ ಹಾಗೂ ಇತರ ನಿಧಿಗಳ ಹಾದಿ ಪತ್ತೆಯಾಗಿದೆ.

ದೇಶಾದ್ಯಂತ ಸಿಎಂಗಳ ಆಸ್ತಿ ಮೌಲ್ಯದ ವರದಿ ಬಿಡುಗಡೆ

ಚಂದ್ರಬಾಬುನಾಯ್ಡು ಅತ್ಯಂತ ಶ್ರೀಮಂತ ಸಿಎಂ

ಸಿದ್ದರಾಮಯ್ಯಗೆ 3ನೇ ಸ್ಥಾನ

ನವದೆಹಲಿ: ದೇಶದ ಅತ್ಯಂತ ಶ್ರೀಮಂತ ಸಿಎಂಗಳ ಪಟ್ಟಿ ಬಿಡುಗಡೆಯಾಗಿದ್ದು, ಇದರ ವಿಶ್ಲೇಷಣೆಯ ಪ್ರಕಾರ, ವ್ಯಾಪಕ ವ್ಯತ್ಯಾಸಗಳೊಂದಿಗೆ ಮಣಿಪುರವನ್ನು ಹೊರತುಪಡಿಸಿ ಭಾರತದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸೇರಿದಂತೆ 30 ಮುಖ್ಯಮಂತ್ರಿಗಳ ಸರಾಸರಿ ಆಸ್ತಿ 54.42 ಕೋಟಿ ರೂ.ಗಳಷ್ಟಿದೆ ಎಂದು ತಿಳಿದು ಬಂದಿದೆ. 30 ಸಿಎಂಗಳ ಒಟ್ಟು ಆಸ್ತಿ 1,632 ಕೋಟಿ ರೂ.ಗಳಷ್ಟಿದ್ದು, 30 ಸಿಎಂಗಳಲ್ಲಿ ಇಬ್ಬರು ಕೋಟ್ಯಾಧಿಪತಿಗಳು, ಆಂಧ್ರ ಪ್ರದೇಶದ ಚಂದ್ರಬಾಬು ನಾಯ್ಡು, ಒಟ್ಟು 931 ಕೋಟಿ ರೂ. ಮೌಲ್ಯದ ಆಸ್ತಿಗಳನ್ನು ಹೊಂದಿದ್ದರೆ, ಅರುಣಾಚಲ ಪ್ರದೇಶದ ಪೆಮಾ ಖಂಡು, 332 ಕೋಟಿ ರೂ.ಗಳಿಗೂ ಹೆಚ್ಚು ಆಸ್ತಿ ಹೊಂದಿದ್ದಾರೆ.



ಚಂದ್ರಬಾಬು ನಾಯ್ಡು

ಮೂರನೇ ಸ್ಥಾನದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಇದ್ದು ಒಟ್ಟು 51 ಕೋಟಿ ರೂ. ಮೌಲ್ಯದ ಆಸ್ತಿ ಹೊಂದಿದ್ದಾರೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ 15.38 ಲಕ್ಷ ರೂ.ಗೂ ಹೆಚ್ಚು, ಜಮ್ಮು-ಕಾಶ್ಮೀರದ ಕೇಂದ್ರಾಡಳಿತ ಪ್ರದೇಶದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ 55.24 ಲಕ್ಷ ರೂ.ಗೂ ಹೆಚ್ಚು ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ 1.18 ಕೋಟಿ ರೂ.ಗಳನ್ನು ಹೊಂದಿದ್ದು ಅತಿ ಕಡಿಮೆ ಆಸ್ತಿ ಹೊಂದಿರುವ ಮುಖ್ಯಮಂತ್ರಿಗಳಾಗಿದ್ದಾರೆ. ರಾಜಸ್ಥಾನದ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ (1.46 ಕೋಟಿ ರೂ.), ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ್ (1.54 ಕೋಟಿ ರೂ.), ಬಿಹಾರದ ನಿತೀಶ್ ಕುಮಾರ್ (1.64 ಕೋಟಿ ರೂ.), ಪಂಜಾಬ್‌ನ ಭಗವಂತ್ ಮಾನ್ (1.97 ಕೋಟಿ ರೂ.), ಒಡಿಶಾದ ಮೋಹನ್ ಚರಣ್ ಮಾಝಿ (1.97 ಕೋಟಿ ರೂ.) ಮತ್ತು ಛತ್ತೀಸ್‌ಗಢದ ವಿಷ್ಣು ದೇವ್ ಸಾಯಿ (3.80 ಕೋಟಿ ರೂ.) ಕಡಿಮೆ ಆಸ್ತಿ ಹೊಂದಿರುವ ಇತರ ಸಿಎಂಗಳಾಗಿದ್ದಾರೆ. ದೇಶಾದ್ಯಂತ ರಾಜ್ಯ ವಿಧಾನಸಭೆಗಳು, ಕೇಂದ್ರಾಡಳಿತ ಪ್ರದೇಶಗಳ 30 ಪ್ರಸ್ತುತ ಮುಖ್ಯಮಂತ್ರಿಗಳ ಸ್ವಯಂ ಪ್ರಮಾಣ ಪತ್ರಗಳನ್ನು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವಿಶ್ಲೇಷಿಸಿದೆ.

ಸುಪ್ರೀಂ ಘೋಷಣೆಗೆ ಪಿಎಫ್‌ಎ ಸ್ವಾಗತ

ಮೈಸೂರು, ಆ.23-ಸುಪ್ರೀಂಕೋರ್ಟ್ ಬೀದಿನಾಯಿಗಳ ಕುರಿತ ಹಿಂದಿನ ಆದೇಶವನ್ನು ಹಿಂಪಡೆದು, ಪ್ರಾಣಿ ಜನನ ನಿಯಂತ್ರಣ(ಎಬಿಸಿ) ನಿಯಮವನ್ನು ಸಮುದಾಯದ ನಾಯಿಗಳ ನಿರ್ವಹಣೆಗೆ ಕಡ್ಡಾಯ ಮತ್ತು ವೈಜ್ಞಾನಿಕ ಚೌಕಟ್ಟಾಗಿ ಘೋಷಿಸಿರುವುದನ್ನು ಮೈಸೂರಿನ ಪೀಪಲ್ ಫಾರ್ ಅನಿಮಲ್ (ಪಿಎಫ್‌ಎ) ಸ್ವಾಗತಿಸಿದೆ.

ಪ್ರಮುಖವಾಗಿ ನಾಯಿಗಳಿಗೆ ಸಂತಾನ ಹರಣ ಚಿಕಿತ್ಸೆ, ಲಸಿಕೆ, ಹುಳನಾಶಕ ನೀಡಿ, ಹಿಡಿದ ಸ್ಥಳಕ್ಕೆ ಹಿಂದಿರುಗಿಸಬೇಕು. ಆಹಾರ ನೀಡುವುದು ನಿಷೇಧವಲ್ಲ. ಸಮುದಾಯದ ನಾಯಿಗಳಿಗೆ ಆಹಾರ ನೀಡಲು ಅವಕಾಶವಿದೆ. ಆದರೆ, ನಿಗದಿತ ಸ್ಥಳಗಳಲ್ಲಿ ಮಾತ್ರ ನೀಡಬೇಕು. ಸಾರ್ವಜನಿಕರ ಆರೋಗ್ಯ ಮತ್ತು ಪ್ರಾಣಿ ಕಲ್ಯಾಣ ಸಮತೋಲನವಾಗಿರಬೇಕು. ನಾಯಿ ಹಿಡಿಯುವ ತಂಡದ ಕೆಲಸಕ್ಕೆ ಅಡ್ಡಿಪಡಿಸುವ ಯಾರಿಗಾದರೂ 25,000 ರೂ. ಮತ್ತು ದತ್ತಿ ಸಂಸ್ಥೆಗೆ 2 ಲಕ್ಷ ರೂ. ದಂಡ ವಿಧಿಸಲು ನ್ಯಾಯಾಲಯ ಆದೇಶಿಸಿದೆ.

2023ರಿಂದ 25ರವರೆಗೆ ಮೈಸೂರಲ್ಲಿ ರೇಬೀಸ್‌ನಿಂದ ಸಾವಾಗಿಲ್ಲ. ನಾಗರಿಕರು ಎಬಿಸಿ ಕಾರ್ಯಕ್ರಮ ಬೆಂಬಲಿಸಿ ನಾಯಿಗಳೊಂದಿಗೆ ಶಾಂತಿಯುತವಾಗಿ ಸಹಬಾಳ್ವೆಯಿಂದ ಇದ್ದಾರೆ ಎಂದು ಪಿಎಫ್‌ಎ ನೀಡಿರುವ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಅಭಿನಂದನೆ...



ಮಾಜಿ ಉಪಮೇಯರ್, ಮೈಸೂರು ನಗರ (ಜಿಲ್ಲೆ) ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ ನೇತೃತ್ವದಲ್ಲಿ ಬಿಜೆಪಿ ಸೇರ್ಪಡೆಗೊಂಡ ವಿ.ಶ್ರೀನಿವಾಸ್‌ಪ್ರಸಾದ್ ಅಭಿಮಾನಿಗಳ ಬಳಗದ ರಾಜ್ಯಾಧ್ಯಕ್ಷ ಎಂ.ರಾಜಕುಮಾರ್ ಅವರು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರನ್ನು ವಿಧಾನಸೌಧದಲ್ಲಿ ಅಭಿನಂದಿಸಿದರು. ಮೈಸೂರು ಅಶೋಕಪುರಂ ಆದಿಕರ್ನಾಟಕ ಮಹಾ ಸಂಸ್ಥೆಯ ಉಪಾಧ್ಯಕ್ಷ ಶಿವಸ್ವಾಮಿ, ಮುಖಂಡರಾದ ಅಶೋಕಪುರಂನ ಸುರೇಶ್, ಮಹೇಶ್, ಧನರಾಜ್, ಬೆಂಗಳೂರಿನ ರುದ್ರಯ್ಯ, ಲೋಹಿತ್ ಅಲೆಮಾರಿ, ಕೇಶವಮೂರ್ತಿ ಇನ್ನಿತರರಿದ್ದರು.

ಇಂದು ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘದ ವಾರ್ಷಿಕ ಮಹಾಸಭೆ

ಮೈಸೂರು,ಆ.23(ಪಿಎಂ)- ಮೈಸೂರಿನ ನಿವೇದಿತನಗರದ ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘದ 2024-25ನೇ ಸಾಲಿನ 6ನೇ ವಾರ್ಷಿಕ ಮಹಾಸಭೆಯನ್ನು ಆ.24ರಂದು ಹಮ್ಮಿಕೊಳ್ಳಲಾಗಿದೆ. ಮೈಸೂರಿನ ವಿಜಯನಗರದ ಕೊಡವ ಸಮಾಜದಲ್ಲಿ ಬೆಳಗ್ಗೆ 10ಕ್ಕೆ ಮಹಾಸಭೆ ಆರಂಭಗೊಳ್ಳಲಿದೆ. ಸಂಘದ ಅಧ್ಯಕ್ಷ ಪಿ.ಕೆ.ಸೋಮಣ್ಣ, ಉಪಾಧ್ಯಕ್ಷ ಕೆ.ಡಿ.ಕಾರ್ಯಪ್ಪ, ನಿರ್ದೇಶಕರಾದ ಎ.ಕೆ.ಕುಶಾಲಪ್ಪ, ಎಂ.ಎಂ.ನಾಣಯ್ಯ, ಎಂ.ಎಂ.ಪೊನ್ನಪ್ಪ, ಎಂ.ಎಸ್.ಸುಬ್ರಮಣಿ, ಎ.ಬಿ.ಸೋಮಣ್ಣ, ಸಿ.ಪಿ.ಸರಳ, ಸಿ.ಪಿ.ಪಾವನ, ಕಾನೂನು ಸಲಹೆಗಾರರಾದ ಪಿ.ಕೆ.ಪೊನ್ನಯ್ಯ, ಎಂ.ಪಿ.ಬೆಳ್ಳಿಯಪ್ಪ, ಮುಖ್ಯಕಾರ್ಯ ನಿರ್ವಹಣಾಧಿಕಾರಿ ಬಿ.ಯು.ನಂಜಪ್ಪ ಸೇರಿದಂತೆ ಸದಸ್ಯರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಸೆ.30ರವರೆಗೆ ಮಧ್ಯಸ್ಥಿಕೆ ಅಭಿಯಾನ

ಮೈಸೂರು,ಆ.23(ಬಿಎಲ್‌ಯು)-ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಬಗೆಹರಿಸಿಕೊಳ್ಳುವ ವಿಶೇಷ ಮಧ್ಯಸ್ಥಿಕೆ ಅಭಿಯಾನ ಸೆಪ್ಟೆಂಬರ್ 30ರವರೆಗೆ ನಡೆಯಲಿದೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ತಾಲೂಕು ಕಾನೂನು ಸೇವೆಗಳ ಸಮಿತಿ ಅಭಿಯಾನ ಆಯೋಜಿಸಿದ್ದು, ನ್ಯಾಯಾಲಯದ ಆವರಣದಲ್ಲಿ ಅಭಿಯಾನ ನಡೆಯಲಿದೆ. ವಕೀಲರು ಹಾಗೂ ಕಕ್ಷಿದಾರರು ಅಭಿಯಾನದ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

ವಿದ್ಯಾರ್ಥಿಗಳಲ್ಲಿ ಅಧ್ಯಯನ ಶೀಲತೆ, ಪರೀಕ್ಷಾ ಕೌಶಲ, ನೈಪುಣ್ಯತೆ ಬೆಳೆಸುವಲ್ಲಿ ಪೋಷಕರ, ಶಿಕ್ಷಕರ ಪಾತ್ರ ಪ್ರಧಾನ

ಅಂತರರಾಷ್ಟ್ರೀಯ ವ್ಯಕ್ತಿತ್ವ ವಿಕಸನ ತರಬೇತುದಾರ ಆರ್.ಎ.ಚೇತನ್‌ರಾಮ್ ಅಭಿಮತ

ಮೈಸೂರು,ಆ.23- ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ) 2025-26ನೇ ಸಾಲಿನ ಪೋಷಕರ ಸಮಾವೇಶ ಆಯೋಜಿಸಲಾಗಿತ್ತು.

ಈ ವೇಳೆ ಅಂತರ ರಾಷ್ಟ್ರೀಯ ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ಶಿಕ್ಷಣ ತಜ್ಞ ಆರ್.ಎ.ಚೇತನ್‌ರಾಮ್ ಸಮಾವೇಶ ಉದ್ಘಾಟಿಸಿದರು. ಬಳಿಕ ಮಾತನಾಡಿ, ಮಹಾಜನ ಶಿಕ್ಷಣ ಸಂಸ್ಥೆ ಪ್ರಸ್ತುತ ವಾಣಿಜ್ಯೀಕರಣವನ್ನು ಮೀರಿ ವಿದ್ಯಾರ್ಥಿಯ ಬದುಕಿಗೆ ಬೆಳಕಿನ ಬೆಂಗಾವಲಾಗಿ ನಿಂತಿದೆ. ಮಹಾಜನ ವಿದ್ಯಾ ಸಂಸ್ಥೆ ಆರಂಭದಿಂದಲೂ ವೃತ್ತಿಪರವಾಗಿ ನಡೆದುಕೊಂಡು ಬಂದಿದೆ. ಕಾರ್ಪೊರೇಟ್ ಜಗತ್ತಿನಲ್ಲಿ ಬ್ರ್ಯಾಂಡಿಂಗ್ ತುಂಬಾ ಮುಖ್ಯವಾಗಿರುತ್ತದೆ. ಆ ನಿಟ್ಟಿನಲ್ಲಿ ಬ್ರ್ಯಾಂಡ್ ಆಗಿರುವುದು ಮಹಾಜನ ಸಂಸ್ಥೆ ಎಂದರು.

ವಿದ್ಯಾರ್ಥಿಗಳಲ್ಲಿ ಇದಕ್ಕೆ ಪೂರಕವಾದ ಅಧ್ಯಯನ ಶೀಲತೆ, ಪರೀಕ್ಷಾ ಕೌಶಲ್ಯ, ಆತ್ಮವಿಶ್ವಾಸ, ನೈಪುಣ್ಯವರ್ಧನೆ ಬೆಳೆಸಬೇಕಾಗಿದೆ. ಇದರಲ್ಲಿ ಪೋಷಕರು ಮತ್ತು ಶಿಕ್ಷಕರ ಪಾತ್ರ ಪ್ರಧಾನವಾಗಿರುತ್ತದೆ. ಮಕ್ಕಳು ತಮ್ಮ ಪೋಷಕರನ್ನೇ ನೋಡಿ ಬೆಳೆಯುವುದು. ಹಾಗಾಗಿ ಪೋಷಕರು ತಮ್ಮ ಮಕ್ಕಳ ಮುಂದೆ ಆದರ್ಶಮಯವಾಗಿ ಬದುಕಬೇಕು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಪ್ರಾಸ್ತಾವಿಕ ಮಾತನಾಡಿ, ಮಹಾಜನ ಕಾಲೇಜು ನಡೆದು ಬಂದ ದಾರಿಯನ್ನು ನೆನೆಯುತ್ತಾ, ಸ್ವಾಯತ್ತ ಸಂಸ್ಥೆಯೊಂದರಲ್ಲಿ ವಿದ್ಯಾಭ್ಯಾಸ ಪಡೆಯುವುದರ ಅನುಕೂಲತೆಗಳನ್ನು ತಿಳಿಸಿದರು. ಸ್ವಾಯತ್ತ ಕಾಲೇಜು ಶೈಕ್ಷಣಿಕ ಸ್ವಾತಂತ್ರ್ಯವನ್ನು ಹೊಂದಿದ್ದು, ವಿದ್ಯಾರ್ಥಿಗಳಿಗೆ ಬೇಕಾಗುವ ಕೌಶಲಾಧಾರಿತ ಮತ್ತು ಔದ್ಯೋಗಿಕ ಕ್ಷೇತ್ರ ನಿರೀಕ್ಷಿಸುವಂತಹ ಪಠ್ಯಕ್ರಮ ಹೊಂದಿರುತ್ತದೆ. ಪಾತ್ರ ತಮ್ಮ ಮಕ್ಕಳಿಗೆ ವಿದ್ಯಾಸಂಸ್ಥೆಯೊಂದರಲ್ಲಿ ಪ್ರವೇಶಾತಿ ಮಾಡುವುದರೊಂದಿಗೆ ಪೋಷಕರ ಪಾತ್ರ ಮುಗಿಯುವುದಿಲ್ಲ. ಅವರು ಕಾಲೇಜಿನೊಂದಿಗೆ ನಿರಂತರ ಸಂಪರ್ಕ ಹೊಂದುವುದು ಅತ್ಯಾವಶ್ಯಕ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪೋಷಕರ ಸಂಘದ ಅಧ್ಯಕ್ಷರಾದ ಶ್ರೀಮತಿ ಸೌಮ್ಯ ಕೆ.ವಿ. ವಹಿಸಿದ್ದರು. 2025-26ನೇ ಸಾಲಿಗೆ ಪೋಷಕರ ಸಂಘದ ಅಧ್ಯಕ್ಷರಾಗಿ ಸುರೇಶ್ ಪಿ, ಕಾರ್ಯದರ್ಶಿಯಾಗಿ ಶ್ರೀಮತಿ ಉಷಾ ರವಿಕಾಂತ್, ಸದಸ್ಯರಾಗಿ ನಂದೀಶ್, ಶ್ರೀಮತಿ ಚಂದ್ರಿಕಾ ದೇವಿ, ಶ್ರೀಮತಿ ಸರ್ವಮಂಗಳ ಆಯ್ಕೆಗೊಂಡರು. ಕಾರ್ಯಕ್ರಮದಲ್ಲಿ ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಶೈಕ್ಷಣಿಕ ಸಲಹೆಗಾರರಾದ ಡಾ.ಎಸ್.ಆರ್.ರಮೇಶ್, ಪೋಷಕರ ಸಂಘದ ಮರೀಗೌಡ, ಆಡಳಿತ ಮಂಡಳಿ ಸದಸ್ಯರು, ಅಧ್ಯಾಪಕರು, ಅಧ್ಯಾಪಕೇತರರು, ಪೋಷಕರು, ಸ್ವಯಂ ಸೇವಕರು, ವಿದ್ಯಾರ್ಥಿಗಳು ಹಾಜರಿದ್ದರು.



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 2025-26ನೇ ಸಾಲಿನ ಪೋಷಕರ ಸಮಾವೇಶ ಆಯೋಜಿಸಲಾಗಿತ್ತು.


ಸಂದೇಶ್ ನಾಗರಾಜ್ ಹುಟ್ಟುಹಬ್ಬದ ಹಿನ್ನೆಲೆ ಇಂದು ಆರೋಗ್ಯ, ಕಣ್ಣಿನ ಉಚಿತ ತಪಾಸಣೆ



ಮೈಸೂರು, ಆ.23(ಬಿಎಲ್‌ಯು)- ಮಾಜಿ ವಿಧಾನ ಪರಿಷತ್ ಸದಸ್ಯ ಸಂದೇಶ್ ನಾಗರಾಜ್ ಅವರ 80ನೇ ಹುಟ್ಟುಹಬ್ಬದ ಅಂಗವಾಗಿ ಆಗಸ್ಟ್ 24 ರಂದು ಕುವೆಂಪುನಗರದಲ್ಲಿ ಉಚಿತ ಆರೋಗ್ಯ ತಪಾಸಣೆ ಮತ್ತು ಉಚಿತ ಕಣ್ಣಿನ ತಪಾಸಣೆ ಆಯೋಜಿಸಲಾಗಿದೆ. ಸಂದೇಶ್ ನಾಗರಾಜ್‌ರವರ 80ನೇ ಅಭಿನಂದನಾ ಸಮಿತಿ, ಆದಿಚುಂಚನಗಿರಿ ಒಕ್ಕಲಿಗರ ಮಹಿಳಾ ಸಮಾಜ, ಸುಯೋಗ ಆಸ್ಪತ್ರೆ ಮತ್ತು ವಾಸನ್ ಐಕೇರ್ ಸಂಯುಕ್ತವಾಗಿ ಈ ಕಾರ್ಯಕ್ರಮ ಆಯೋಜಿಸಿದೆ. ಕುವೆಂಪುನಗರದ ಜೋಡಿ ಬಸವೇಶ್ವರ ದೇವಸ್ಥಾನದಲ್ಲಿ ನಾಳೆ ಬೆಳಿಗ್ಗೆ 9ರಿಂದ ಆರೋಗ್ಯ ಹಾಗೂ ಉಚಿತ ಕಣ್ಣಿನ ತಪಾಸಣೆ ನಡೆಯಲಿದೆ. ಇದರ ಪ್ರಯೋಜನ ಪಡೆದುಕೊಳ್ಳುವಂತೆ ಸಂದೇಶ್ ನಾಗರಾಜ್ ಅಭಿನಂದನಾ ಸಮಿತಿ ಅಧ್ಯಕ್ಷ ವಿಕ್ರಾಂತ್ ಡಿ.ದೇವೇಗೌಡರು ಹಾಗೂ ಆದಿಚುಂಚನಗಿರಿ ಒಕ್ಕಲಿಗರ ಮಹಿಳಾ ಸಮಜದ ಅಧ್ಯಕ್ಷೆ ಸವಿತಾ ಸಣ್ಣತಮ್ಮೇಗೌಡ ಜನರಲ್ಲಿ ಮನವಿ ಮಾಡಿದ್ದಾರೆ.

ದೇಶ - ವಿದೇಶ

ಗಾಜಾ ಮೇಲೆ ಇಸ್ರೇಲ್ ದಾಳಿ: 25 ಮಂದಿ ಸಾವು



ಖಾನ್ ಯೂನಿಸ್: ಗಾಜಾ ಪಟ್ಟಿಯ ವಿವಿಧ ಸ್ಥಳಗಳ ಮೇಲೆ ಇಸ್ರೇಲ್ ಪಡೆಗಳು ಶನಿವಾರ ದಾಳಿ ನಡೆಸಿದ್ದು, ನಿರಾಶ್ರಿತರ ಶಿಬಿರಗಳಲ್ಲಿ ಆಹಾರ ನೆರವಿಗಾಗಿ ಕಾಯುತ್ತಿದ್ದ ಕನಿಷ್ಠ 25 ಮಂದಿ ಸಾವಿಗೀಡಾಗಿದ್ದಾರೆ ಎಂದು ಸ್ಥಳೀಯ ಆಸ್ಪತ್ರೆ ಮೂಲಗಳು ತಿಳಿಸಿವೆ.

ದಕ್ಷಿಣ ಗಾಜಾದಲ್ಲಿ ಮಹಿಳೆಯರು, ಮಕ್ಕಳು ಸೇರಿ 14 ಮಂದಿ, ಉತ್ತರ ಗಾಜಾದಲ್ಲಿ 5 ಮಂದಿ ಹಾಗೂ ಇತರೆ ಪ್ರದೇಶಗಳ ಮೇಲೆ ನಡೆದ ದಾಳಿಯಲ್ಲಿ 6 ಮಂದಿ ಸಾವಿಗೀಡಾಗಿದ್ದಾರೆ. ಯುದ್ಧ ಮತ್ತು ಆಹಾರ ಪೂರೈಕೆಗೆ ಇಸ್ರೇಲ್ ಒಡ್ಡುತ್ತಿರುವ ಅಡ್ಡಿಯು ಗಾಜಾದಲ್ಲಿ ಹಸಿವಿನ ತೀವ್ರತೆ ಸೃಷ್ಟಿಸಲಿದೆ ಎಂದು ತಿಂಗಳ ಹಿಂದೆಯೇ ನೆರವು ಸಂಸ್ಥೆಗಳು ಘೋಷಿಸಿದ್ದವು. ಗಾಜಾದಲ್ಲಿ ಕ್ಷಾಮ ತಲೆದೋರಿದೆ ಎಂಬುದು ಸುಳ್ಳು ಎಂದಿರುವ ಇಸ್ರೇಲ್ ಸೇನೆಯು, ಗಾಜಾವನ್ನು ಶೀಘ್ರ ವಶಕ್ಕೆ ಪಡೆಯಲಾಗುವುದು. ಗಾಜಾದ ಸುತ್ತಮುತ್ತಲ ಪ್ರದೇಶಗಳಲ್ಲಿ ಇಸ್ರೇಲ್ ಪಡೆಗಳು ಯೋಧರ ನಿಯೋಜನೆಯನ್ನು ತೀವ್ರಗೊಳಿಸಿದ್ದು, ಮತ್ತೆ ಯುದ್ಧ ಶುರುವಾಗುವ ಆತಂಕ ಹೆಚ್ಚಿದೆ.

ನಿರ್ಮಾಪಕ, ನಿರ್ದೇಶಕ ಎಂದು ಹೇಳಿ ಅಭಿನಯ ಆಕಾಂಕ್ಷಿಗಳಿಗೆ ವಂಚನೆ: ಇಬ್ಬರ ಬಂಧನ



ನವದೆಹಲಿ: ಟಿ.ವಿ ಧಾರಾವಾಹಿ ನಿರ್ಮಾಪಕರು ಮತ್ತು ನಿರ್ದೇಶಕರು ಎಂದು ಹೇಳಿಕೊಂಡು ಅಭಿನಯಾಕಾಂಕ್ಷಿಗಳನ್ನು ವಂಚಿಸಿದ ವ್ಯಕ್ತಿ ಮತ್ತು ಮಹಿಳೆಯನ್ನು ದೆಹಲಿ ಪೊಲೀಸರು ನೈರುತ್ಯ ದೆಹಲಿಯಲ್ಲಿ ಶನಿವಾರ ಬಂಧಿಸಿದ್ದಾರೆ.

ಆರೋಪಿಗಳು ಬಾಲಿವುಡ್ ಚಿತ್ರ ಬಂಟಿ ಔರ್ ಬಬ್ಲಿನಿಂದ ಪ್ರೇರಿತರಾಗಿದ್ದರು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಲಖನೌ ನಿವಾಸಿ ತರುಣ್ ಶೇಖರ್ ಶರ್ಮಾ (32) ಮತ್ತು ದೆಹಲಿ ನಿವಾಸಿ ಆಶಾ ಸಿಂಗ್ ಅಲಿಯಾಸ್ ಭಾವನಾ (29) ಬಂಧಿತರು. ಆರೋಪಿಗಳ ವಿರುದ್ಧ ದೇಶದಾದ್ಯಂತ 20ಕ್ಕೂ ಹೆಚ್ಚು ದೂರುಗಳಿವೆ ಎಂದು ಅಧಿಕಾರಿ ತಿಳಿಸಿದ್ದಾರೆ. ಜನಪ್ರಿಯ ಟಿ.ವಿ ಧಾರಾವಾಹಿಗಳು ಮತ್ತು ಒಟಿಟಿ ಕಾರ್ಯಕ್ರಮಗಳಲ್ಲಿ ಪಾತ್ರಗಳನ್ನು ನೀಡುವುದಾಗಿ ಸಾಮಾಜಿಕ ಮಾಧ್ಯಮಗಳ ಮೂಲಕ ಆಕಾಂಕ್ಷಿಗಳನ್ನು ಆಕರ್ಷಿಸುತ್ತಿದ್ದರು. ಇತ್ತೀಚಿನ ಪ್ರಕರಣವೊಂದರಲ್ಲಿ ದೂರುದಾರರಿಂದ 24 ಲಕ್ಷ ವಂಚನೆ ಮಾಡಲಾಗಿದೆ ಎಂದು ಅಧಿಕಾರಿ ಹೇಳಿದ್ದಾರೆ.

ಭಾರತದ ರಾಯಭಾರಿಯಾಗಿ ಟ್ರಂಪ್ ಆಪ್ತ ಸಹಾಯಕ ಸೆರ್ಗಿಯೊ ಗೋರ್ ನೇಮಕ



ವಾಷಿಂಗ್ಟನ್: ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಪ್ತ ರಾಜಕೀಯ ಸಹಾಯಕ ಮತ್ತು ಶ್ವೇತ ಭವನದ ಪ್ರಮುಖ ಅಧಿಕಾರಿಯಾದ ಸೆರ್ಗಿಯೊ ಗೋರ್ ಅವರನ್ನು ಅಮೆರಿಕಾದ ಭಾರತೀಯ ರಾಯಭಾರಿಯಾಗಿ ನೇಮಕ ಮಾಡಲಾಗಿದೆ. ಭಾರತದೊಂದಿಗೆ ಅಮೆರಿಕ ಸಂಬಂಧ ಸೂಕ್ಷ್ಮ ಹಂತದಲ್ಲಿರುವಾಗ ಟ್ರಂಪ್ ತಮ್ಮ ಅತ್ಯಂತ ನಂಬಿಕಸ್ಥ ಅಧಿಕಾರಿಯನ್ನು ಈ ಮಹತ್ವದ ಹುದ್ದೆಗೆ ಆಯ್ಕೆ ಮಾಡಿದ್ದಾರೆ. ಗೋರ್ ಅವರನ್ನು ಭಾರತ ರಾಯಭಾರಿ ಮಾತ್ರವಲ್ಲದೇ ದಕ್ಷಿಣ ಮತ್ತು ಮಧ್ಯ ಏಷ್ಯಾಕ್ಕೆ ವಿಶೇಷ ರಾಯಭಾರಿಯಾಗಿಯೂ ಟ್ರಂಪ್ ನೇಮಿಸಿದ್ದಾರೆ.

ತಮ್ಮ ಟ್ರೂತ್ ಸೋಶಿಯಲ್ ವೇದಿಕೆಯಲ್ಲಿ ಪ್ರಕಟಿಸಿರುವ ಡೊನಾಲ್ಡ್ ಟ್ರಂಪ್, ವಿಶ್ವದ ಅತ್ಯಂತ ಜನನಿಬಿಡ ಪ್ರದೇಶದಲ್ಲಿ ನನ್ನ ಕಾರ್ಯಸೂಚಿ ಜಾರಿಗೊಳಿಸಲು ಮತ್ತು ಅಮೆರಿಕವನ್ನು ಮತ್ತೆ ಶ್ರೇಷ್ಠವಾಗಿಸಲು ನಾನು ವಿಶ್ವಾಸ ಇಡಬಹುದಾದ ವ್ಯಕ್ತಿ ಇರುವುದು ಮುಖ್ಯ. ಆದ್ದರಿಂದ ಗೋರ್‌ರನ್ನು ಭಾರತದ ರಾಯಭಾರಿಯಾಗಿ ನೇಮಿಸುತ್ತಿದ್ದು, ಭಾರತ ಗಣರಾಜ್ಯಕ್ಕೆ ನಮ್ಮ ಮುಂದಿನ ಅಮೆರಿಕದ ರಾಯಭಾರಿಯಾಗಿ ಬಡ್ತಿ ನೀಡುತ್ತಿದ್ದೇನೆ ಎಂದು ಘೋಷಿಸಲು ನನಗೆ ಸಂತೋಷವಾಗುತ್ತಿದೆ ಎಂದಿದ್ದಾರೆ.

ಸುಂಕ ಹೇರಿಕೆ: ಅಮೆರಿಕಕ್ಕೆ ಅಂಚೆ ಸೇವೆ ಅಮಾನತುಗೊಳಿಸಿದ ಭಾರತ

ನವದೆಹಲಿ: ಅಂಚೆ ಇಲಾಖೆಯು ಅಮೆರಿಕಕ್ಕೆ ಕೆಲವು ವಸ್ತುಗಳ ರವಾನೆ ಸೇವೆಯನ್ನು ಅಮಾನತ್ತಿನಲ್ಲಿರಿಸಿದೆ.

ಅಮೆರಿಕದ ಸೀಮಾಸುಂಕ ಇಲಾಖೆಯು ಹೊರಡಿಸಿರುವ ಹೊಸ ನಿಯಮಗಳ ಬಗ್ಗೆ ಸ್ಪಷ್ಟತೆ ಇಲ್ಲದ ಕಾರಣ ಅಮೆರಿಕಕ್ಕೆ ತೆರಳುವ ವಿಮಾನಗಳು ವಸ್ತುಗಳನ್ನು ಒಯ್ಯಲು ಒಪ್ಪುತ್ತಿಲ್ಲ. ಹೀಗಾಗಿ ಅಂಚೆ ಇಲಾಖೆಯು ಈ ನಿರ್ಧಾರ ಕೈಗೊಂಡಿದೆ ಎಂದು ಸಂವಹನ ಸಚಿವಾಲಯವು ಹೇಳಿದೆ. ಆದರೆ ಪತ್ರಗಳು, ಕಡತಗಳು ಹಾಗೂ 100 ಡಾಲರ್‌ಗಿಂತ ಕಡಿಮೆ ಮೌಲ್ಯದ ಉಡುಗೊರೆಗಳನ್ನು ಅಮೆರಿಕಕ್ಕೆ ಕಳುಹಿಸಿಕೊಡುವ ಸೇವೆಗಳು ಮುಂದುವರಿಯುತ್ತವೆ ಎಂದು ಅದು ಸ್ಪಷ್ಟಪಡಿಸಿದೆ. ಅಮೆರಿಕವು ಹೊರಡಿಸಿರುವ ಕಾರ್ಯಕಾರಿ ಆದೇಶದ ಪ್ರಕಾರ 100 ಡಾಲರ್‌ಗಿಂತ ಹೆಚ್ಚಿನ ಮೌಲ್ಯದ ಸರಕುಗಳಿಗೆ ಅಮೆರಿಕದಲ್ಲಿ ಆ.29ರಿಂದ ಸುಂಕ ವಿಧಿಸಲಾಗುತ್ತದೆ. ಈ ಕಾರ್ಯಕಾರಿ ಆದೇಶದಲ್ಲಿ ಹೇಳಿರುವಂತೆ, ಅಂತರರಾಷ್ಟ್ರೀಯ ಅಂಚೆ ಜಾಲ ಅಥವಾ ಅಮೆರಿಕದ ಸೀಮಾಸುಂಕ, ಗಡಿ ರಕ್ಷಣಾ ವಿಭಾಗದ ಒಪ್ಪಿಗೆ ಪಡೆದಿರುವ ಇತರ ಅರ್ಹ ಸಂಸ್ಥೆಗಳ ಮೂಲಕ ಸರಕು ಸಾಗಣೆ ಮಾಡಿಕೊಡುವ ಸಂಸ್ಥೆಗಳು ಸುಂಕದ ಮೊತ್ತ ಸಂಗ್ರಹಿಸಬೇಕು, ಆ ಮೊತ್ತವನ್ನು ಜಮಾ ಮಾಡಬೇಕು. ಸುಂಕ ಸಂಗ್ರಹಿಸುವುದು. ಅದನ್ನು ಜಮಾ ಮಾಡುವುದಕ್ಕೆ ಸಂಬಂಧಿಸಿದಂತೆ ಹಲವು ಮಹತ್ವದ ಪ್ರಕ್ರಿಯೆಗಳ ಬಗ್ಗೆ ಸ್ಪಷ್ಟನೆ ಬೇಕಾಗಿದೆ.

ಭಾರತೀಯರಿದ್ದ ಪ್ರವಾಸಿ ಬಸ್ ಉರುಳಿಬಿದ್ದು ಐವರು ದುರ್ಮರಣ..!



ನ್ಯೂಯಾರ್ಕ್: ನ್ಯೂಯಾರ್ಕ್‌ನಲ್ಲಿ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಭಾರತೀಯರು ಸೇರಿದಂತೆ 54 ಜನರನ್ನು ಹೊತ್ತೊಯ್ಯುತ್ತಿದ್ದ ಪ್ರವಾಸಿ ಬಸ್ಸೊಂದು ಉರುಳಿಬಿದ್ದು ಐವರು ಸಾವನ್ನಪ್ಪಿರುವ ಘಟನೆ ನಡೆದಿದೆ. ನಯಾಗರಾ ಜಲಪಾತವನ್ನು ವೀಕ್ಷಿಸಿದ ನಂತರ ಪ್ರವಾಸಿಗರು ನ್ಯೂಯಾರ್ಕ್ ನಗರಕ್ಕೆ ಹಿಂತಿರುಗುತ್ತಿದ್ದಾಗ ಬಫಲೋದಿಂದ ಪೂರ್ವಕ್ಕೆ 25 ಮೈಲಿ (40 ಕಿಲೋಮೀಟರ್) ದೂರದಲ್ಲಿ ದುರ್ಘಟನೆ ಸಂಭವಿಸಿದೆ. ಅಪಘಾತಕ್ಕೀಡಾದ ಬಸ್ಸಿನಲ್ಲಿ ಭಾರತೀಯ, ಚೀನೀ ಮತ್ತು ಫಿಲಿಪಿನೋ ಮೂಲದವರು ಇದ್ದರು ಎಂದು ತಿಳಿದುಬಂದಿದೆ. 1 ವರ್ಷದಿಂದ 74 ವರ್ಷ ವಯಸ್ಸಿನವರು ಬಸ್ಸಿನಲ್ಲಿದ್ದರು. ಅಪಘಾತದ ವೇಳೆ ಹಲವರು ಬಸ್ಸಿನಿಂದ ಹೊರಗೆ ಬಿದ್ದಿದ್ದಾರೆ. ಐವರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಎಲ್ಲರೂ ವಯಸ್ಕರಾಗಿದ್ದಾರೆಂದು ಪೊಲೀಸ್ ಅಧಿಕಾರಿ ಮೇಜರ್ ಆಂಡ್ರೆ ರೇ ಅವರು ಘಟನೆ ಕುರಿತು ಮಾಹಿತಿ ನೀಡಿದ್ದಾರೆ. ಹಲವರನ್ನು ರಕ್ಷಣೆ ಮಾಡಲಾಗಿದ್ದು, ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಬಸ್‌ನಲ್ಲಿದ್ದ ಹೆಚ್ಚಿನ ಪ್ರಯಾಣಿಕರು ಭಾರತೀಯ, ಚೀನಿಯರು ಮತ್ತು ಫಿಲಿಪಿನೋ ಮೂಲದವರಾಗಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಾಮೂಹಿಕ ಶ್ರೀ ವರ ಮಹಾಲಕ್ಷ್ಮಿ ಪೂಜಾ ಕಾರ್ಯಕ್ರಮ

ನಾಪೋಕ್ಲು, ಆ.23– ಧರ್ಮ ಎನ್ನುವುದು ಹೊರಗಿಲ್ಲ. ಅದು ಇರುವುದು ಅಂತರಂಗದಲ್ಲಿ ಮತ್ತು ನಿತ್ಯದ ನಡವಳಿಕೆಯಲ್ಲಿ. ಸಾಮಾಜಿಕ ಸೌಹಾರ್ದತೆಯನ್ನು ಕಾಪಾಡುತ್ತ ಗಳಿಕೆಯ ಜೊತೆಗೆ ಉಳಿಕೆಯ ಬಗ್ಗೆ ಕೂಡ ಪ್ರತಿ ಕ್ಷಣ ಜನತೆ ಎಚ್ಚರದಲ್ಲಿರಬೇಕು. ಅದೇ ಲಕ್ಷ್ಮಿಗೆ ನಾವು ಸಲ್ಲಿಸುವ ದೊಡ್ಡಗೌರವ ಎಂದು ಮಡಿಕೇರಿ ಆಕಾಶವಾಣಿ ಕೇಂದ್ರದ ನಿವೃತ್ತ ಉದ್ಘೋಷಕ ಸುಬ್ರಾಯ ಸಂಪಾಜೆ ನುಡಿದರು.

ಸಂಪಾಜೆ – ದೇವರಕೊಲ್ಲಿ ಶ್ರೀ ಚಾಮುಂಡೇಶ್ವರೀ ದೇವಸ್ಥಾನ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಲಯ ಮಟ್ಟದ ಸಾಮೂಹಿಕ ಶ್ರೀ ವರಮಹಾಲಕ್ಷ್ಮಿ ಪೂಜಾ ಕಾರ್ಯಕ್ರಮದಲ್ಲಿ ಧಾರ್ಮಿಕ ಉಪನ್ಯಾಸ ನೀಡಿ ಅವರು ಮಾತನಾಡಿದರು.

ಲಕ್ಷ್ಮೀ ಪೂಜೆಯ ಮಹತ್ವದ ಬಗ್ಗೆ ಪುರಾಣಾಧಾರಿತ ಮಾಹಿತಿಯನ್ನೂ ನೀಡಿ ಉಪನ್ಯಾಸ ನೀಡಿದ ಸಂಪಾಜೆಯವರು ಜಾತಿ ಮತ ಭೇದವಿಲ್ಲದೆ ಗ್ರಾಮಾಭಿವೃದ್ಧಿ ಯೋಜನೆ ನಡೆಸುತ್ತಿರುವ ಜನೋಪಯೋಗಿ ಕೆಲಸವನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಡಿಕೇರಿ ತಾಲೂಕಿನ ಯೋಜನಾಧಿಕಾರಿ ಪುರುಷೋತ್ತಮ ಯನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪಶುತ್ವ ಮನುಷ್ಯತ್ವ, ದೈವತ್ವದ ಬಗ್ಗೆ ಹಾಗೂ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಮನ ಮುಟ್ಟುವಂತೆ ಹೇಳಿದರು. ಉತ್ತಮ ಗುಣ, ನಡತೆ, ಭಕ್ತಿ ಭಾವಗಳನ್ನು ತಮ್ಮ ಜೀವನದಲ್ಲೂ ಅಳವಡಿಸಿಕೊಳ್ಳುವಂತೆ ಅವರು ಹೇಳಿದರು. ಅತಿಥಿಗಳಾಗಿ ಆಗಮಿಸಿದ ಜಿಲ್ಲಾ ಜನಜಾಗೃತಿ ವೇದಿಕೆಯ ಉಪಾಧ್ಯಕ್ಷರಾದ ಧನಂಜಯ ಆಗೋಳಿಕಜೆ ಅವರು ಕ್ಷೇತ್ರದ ಸಂರಕ್ಷಣೆ, ಯೋಜನೆಯ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು.

ವರಮಹಾಲಕ್ಷ್ಮಿ ಪೂಜಾ ಸಮಿತಿ ಅಧ್ಯಕ್ಷರಾದ ರಾಜೇಶ್ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಕಾರ್ಯಕ್ರಮವನ್ನು ವೇದಿಕೆ ಮೇಲಿನ ಗಣ್ಯರು ದೀಪ ಬೆಳಗುವ ಮೂಲಕ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಚುಟುಕು ಸಾಹಿತ್ಯ ಪರಿಷತ್ ಸುಳ್ಯ ಇದರ ಕಾರ್ಯದರ್ಶಿಗಳಾದ ಉದಯ ಭಾಸ್ಕರ್, ದೇವರಕೊಲ್ಲಿ ಚಾಮುಂಡೇಶ್ವರಿ ದೇವಸ್ಥಾನದ ಅಧ್ಯಕ್ಷರಾಗಿರುವ ಯಶೋಧರ ಸಂಪಾಜೆ, ಪಂಚಾಯತ್ ಅಧ್ಯಕ್ಷೆ ವಿಮಲಾಕ್ಷಿ, ಶೌರ್ಯ ವಿಪತ್ತು ತಂಡದ ಸದಸ್ಯರು, ವಲಯದ ಸೇವಾ ಪ್ರತಿನಿಧಿಗಳು, ಒಕ್ಕೂಟದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಯವರು ಸರ್ವ ಸದಸ್ಯರು ಉಪಸ್ಥಿತರಿದ್ದರು, ಈ ಸಂದರ್ಭ ಸಾಮೂಹಿಕ ಶ್ರೀ ವರಮಹಾಲಕ್ಷ್ಮಿ ಪೂಜಾ ಕಾರ್ಯಕ್ರಮ ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು.

ಜಸ್ಮಿತ ಅವರ ಪ್ರಾರ್ಥನೆಯೊಂದಿಗೆ ಆರಂಭಗೊಂಡ ಕಾರ್ಯಕ್ರಮದಲ್ಲಿ ವಲಯ ಮೇಲ್ವಿಚಾರಕರಾದ ಸಂತೋಷ್ ಅವರು ಸ್ವಾಗತಿಸಿದರು. ತಾಲೂಕಿನ ಜ್ಞಾನ ವಿಕಾಸ ಸಮನ್ವಯಾಧಿಕಾರಿ ಮಾಲಿನಿ ಅವರು ನಿರೂಪಿಸಿ, ಸೇವಾ ಪ್ರತಿನಿಧಿ ಶಬೀನಾರವರು ವಂದಿಸಿದರು.



ಸಾಮೂಹಿಕ ಶ್ರೀ ವರಮಹಾಲಕ್ಷ್ಮಿ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಮಹಿಳೆಯರು.

ತೋಟಗಳಿಗೆ ಲಗ್ಗೆ ಇಟ್ಟ ಕಾಡಾನೆ; ಅಪಾರ ನಷ್ಟ



ಯವಕಪಾಡಿ ಗ್ರಾಮದ ಕಬ್ಬಿನಕಾಡಿನ ಮಳಿಯಂಡ್ರ ಸುರೇಶ್ ಮತ್ತು ಸರು ಅವರ ಕೃಷಿ ಗಿಡಗಳನ್ನು ಕಾಡಾನೆಗಳು ನಾಶಪಡಿಸಿರುವುದು.

ನಾಪೋಕ್ಲು: ಸಮೀಪದ ಕಕ್ಕಬೆ ಕುಂಜಿಲ ಗ್ರಾಮ ಪಂಚಾಯಿತಿ ಯವಕಪಾಡಿ ಗ್ರಾಮದ ಕಬ್ಬಿನಕಾಡಿನಲ್ಲಿ ತೋಟಗಳಿಗೆ ಲಗ್ಗೆ ಇಟ್ಟ ಕಾಡಾನೆಗಳು ಅಪಾರ ಪ್ರಮಾಣದ ಬೆಳೆಗಳನ್ನು ನಾಶಪಡಿಸಿವೆ.

ಕಾಡಾನೆಗಳು ಮಳಿಯಂಡ್ರ ಸುರೇಶ್ ಮತ್ತು ಸರು ಅವರ ಮನೆಯಂಗಳಕ್ಕೆ ಬಂದು ಅಡ್ಡಾಡಿದ್ದಲ್ಲದೆ ಮನೆಯ ಸುತ್ತಮುತ್ತಲಿನ ತೋಟದಲ್ಲಿದ್ದ ಬಾಳೆ, ಕಾಫಿ ಮತ್ತು ಕೃಷಿ ಗಿಡಗಳನ್ನು ನಾಶಪಡಿಸಿ ಅಪಾರ ನಷ್ಟ ಪಡಿಸಿವೆ. ಗ್ರಾಮ ಸುತ್ತಮುತ್ತಲ ಬೆಳೆಗಾರರ ತೋಟಗಳಿಗೆ ಕಾಡಾನೆಗಳು ಲಗ್ಗೆಯಿಟ್ಟಿವೆ. ಹತ್ತಾರು ಕಾರಣಗಳಿಂದ ಕೃಷಿಯಿಂದ ವಿಮುಖರಾಗುತ್ತಿರುವ ರೈತರಿಗೆ ಕಾಡಾನೆಗಳ ಉಪಟಳ ನುಂಗಲಾರದ ತುತ್ತಾಗಿದೆ. ಇದೀಗ ಭತ್ತದ ನಾಟಿ ಮುಗಿದ ಅವಧಿಯಾಗಿದ್ದು ಪೈರುಗಳು ನಾಶವಾದರೆ ರೈತರು ಭತ್ತದ ಕೃಷಿಯನ್ನೇ ಕೈಬಿಡುವ ಪರಿಸ್ಥಿತಿ ಎದುರಾಗಲಿದೆ. ಕಳೆದ ಇದೆ ಅವಧಿಯಲ್ಲಿ ನಾಟಿ ಗದ್ದೆಗಳಿಗೂ ಕಾಡಾನೆ ದಾಳಿ ನಡೆಸಿದ್ದು, ಗ್ರಾಮದಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳಿಂದಾಗಿ ಭಯದ ವಾತಾವರಣ ಸೃಷ್ಟಿಯಾಗಿದ್ದು ಜೀವ ಹಾನಿ ಸಂಭವಿಸುವ ಮೊದಲು ಕೂಡಲೇ ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಗ್ರಾಮದ ಬೆಳೆಗಾರರರು ಒತ್ತಾಯಿಸಿದ್ದಾರೆ.

ದೇಶದ ಇತಿಹಾಸ, ಸಂಸ್ಕೃತಿಯಲ್ಲಿ ಕೃಷ್ಣ ಜನ್ಮಾಷ್ಟಮಿಗೆ ಮಹತ್ವದ ಸ್ಥಾನ



ವಿರಾಜಪೇಟೆ: ಕೃಷ್ಣ ಜನ್ಮಾಷ್ಟಮಿಯು ದೇಶದ ಇತಿಹಾಸ ಮತ್ತು ಸಂಸ್ಕೃತಿಯಲ್ಲಿ ಮಹತ್ವವನ್ನು ಪಡೆದುಕೊಂಡಿದೆ ಎಂದು ಶಿಕ್ಷಕ ವಿ.ಟಿ.ವೆಂಕಟೇಶ್ ಅಭಿಪ್ರಾಯಪಟ್ಟರು.

ಪಟ್ಟಣದ ಅಪ್ಪಯ್ಯ ಸ್ವಾಮಿ ರಸ್ತೆಯ ಬಾಲಾಂಜನೇಯ ದೇವಸ್ಥಾನದ ಸಭಾಂಗಣದಲ್ಲಿ ನಾಟ್ಯ ಮಯೂರಿ ನೃತ್ಯ ಶಾಲೆಯ ವತಿಯಿಂದ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕದಳಿ ವೇದಿಕೆಯ ತಾಲೂಕು ಅಧ್ಯಕ್ಷೆ ರಜಿತ ಕಾರ್ಯಪ್ಪ ಮಾತನಾಡಿ, ವಿದ್ಯಾರ್ಥಿಗಳು ರಾಮಾಯಣ, ಮಹಾಭಾರತದಂತಹ ಕಾವ್ಯಗಳನ್ನು ಹೆಚ್ಚು ಹೆಚ್ಚಾಗಿ ಓದಿ ಅದರಲ್ಲಿರುವ ಸಾರವನ್ನು ತಿಳಿದು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳಿರುವ ವಿಚಾರಗಳು ಹಾಗೂ ಕೃಷ್ಣನ ಬದುಕಿನ ಕಥೆಗಳು ಪ್ರಸ್ತುತ ನಮ್ಮ ಜೀವನಕ್ಕೂ ಪ್ರೇರಣೆಯಾಗಲಿದೆ. ಪೋಷಕರು ತಮ್ಮ ಮಕ್ಕಳಿಗೆ ವಿದ್ಯೆಯೊಂದಿಗೆ ಸಂಸ್ಕಾರ, ಸಂಸ್ಕೃತಿಯನ್ನು ಕಲಿಸಿಕೊಡಬೇಕು. ಜೊತೆಗೆ ನಾಯಕತ್ವದ ಗುಣಗಳನ್ನು ಗಳಿಸಲು ಸ್ಪರ್ಧೆಗಳು ಬಹು ಸಹಕಾರಿಯಾಗಿವೆ ಎಂದರು.

ದಕ್ಷಿಣ ಕೊಡಗು ಲೇಖಕಿಯರ ಮತ್ತು ಕಲಾವಿದರ ಬಳಗದ ಅಧ್ಯಕ್ಷೆ ಪುಷ್ಪಲತಾ ಶಿವಪ್ಪ ಮಾತನಾಡಿ, ರಾಮಾಯಣ, ಮಹಾಭಾರತ ಈ ಎರಡು ಮಹಾಕಾವ್ಯಗಳಲ್ಲಿರುವ ಸಾರವನ್ನು ಅರಿತು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಾಟ್ಯ ಮಯೂರಿ ನೃತ್ಯ ಶಾಲೆಯ ಶಿಕ್ಷಕಿ ವಿದೂಷಿ ಪ್ರೇಮಾಂಜಲಿ ಆಚಾರ್ಯ ಮಾತನಾಡಿ, ಜಾತಿ ಮತ ಭೇದವಿಲ್ಲದೆ ಜಗತ್ತಿನಾದ್ಯಂತ ಕೃಷ್ಣನನ್ನು ಇಂದು ಆರಾಧಿಸಲಾಗುತ್ತಿದೆ ಎಂದರು. ದೇವಸ್ಥಾನದ ಧರ್ಮದರ್ಶಿ ಬಾಬಾ ಶಂಕರ್ ಮಾತನಾಡಿದರು. ಸ್ಪರ್ಧೆಯಲ್ಲಿ ವಿಜೇತರಾದ ಎಲ್ಲ ಮಕ್ಕಳಿಗೂ ಅತಿಥಿಗಳು ಬಹುಮಾನ ವಿತರಿಸಿದರು.

ಹಾಲೇರಿ ಗ್ರಾಮದಲ್ಲಿ ಮಳೆಯಿಂದ ಕುಸಿದ ಮನೆ

ಪುನರ್ವಸತಿ ಕಲ್ಪಿಸುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ

ಮಡಿಕೇರಿ, ಆ.23– ಕೆದಕಲ್ ಗ್ರಾ.ಪಂ ವ್ಯಾಪ್ತಿಯ ಹಾಲೇರಿ ಗ್ರಾಮದಲ್ಲಿ ಪ್ರಸ್ತುತ ವರ್ಷದ ಆಗಸ್ಟ್ ತಿಂಗಳ ಮಳೆಯಿಂದ ಮನೆ ನೆಲಸಮವಾಗಿದ್ದು, ಪುನರ್‌ವಸತಿ ಕಲ್ಪಿಸುವಂತೆ ಕೋರಿ ಸ್ಥಳೀಯ ನಿವಾಸಿ ವಿಶಾಲಾಕ್ಷಿ ಬಿ.ಜೆ ಅವರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಕಳೆದ 36 ವರ್ಷಗಳಿಂದ ಹಾಲೇರಿ ತಾತಿಬಾಣೆಯಲ್ಲಿ ವಾಸವಿದ್ದ ಮನೆ 2018ರ ಪ್ರಾಕೃತಿಕ ವಿಕೋಪದ ಸಂದರ್ಭ ಸಂಪೂರ್ಣ ಬಿರುಕು ಬಿಟ್ಟಿತ್ತು. ಈ ಮನೆ ವಾಸಕ್ಕೆ ಯೋಗ್ಯವಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ ಹಿನ್ನೆಲೆ ಮಡಿಕೇರಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆವು. ನಂತರ ಪುನರ್‌ವಸತಿ ಕಲ್ಪಿಸುವಂತೆ ಕೋರಿ 2018ರಿಂದ ಅರ್ಜಿಗಳನ್ನು ಸಲ್ಲಿಸುತ್ತಾ ಬಂದಿದ್ದರೂ ಯಾವುದೇ ಸ್ಪಂದನೆ ದೊರೆತ್ತಿರಲಿಲ್ಲ. ಜಂಬೂರುಬಾಣೆಯಲ್ಲಿ 2ನೇ ಮನೆ ಹಂಚಿಕೆ ಪಟ್ಟಿಯಲ್ಲಿ ನನ್ನ ಪತಿ ಬಿ.ಪಿ.ಜನಾರ್ಧನ ಅವರ ಹೆಸರಿನಲ್ಲಿ ಮನೆ ನೋಂದಾವಣಿಗೊಂಡು ಮನೆ ಸಂಖ್ಯೆಯನ್ನು ಕೂಡ ನೀಡಲಾಗಿತ್ತು. ಆದರೆ ಇಲ್ಲಿಯವರೆಗೆ ನಮಗೆ ಮನೆ ದೊರೆತಿರುವುದಿಲ್ಲ ಎಂದು ಮನವಿಯಲ್ಲಿ ಗಮನ ಸೆಳೆದಿದ್ದಾರೆ.

ಬಡವರಾದ ನಮಗೆ ಬಾಡಿಗೆ ಪಾವತಿಸಲು ಸಾಧ್ಯವಾಗುತ್ತಿಲ್ಲ. ಇದೀಗ ಕೆಲವೇ ದಿನಗಳ ಹಿಂದೆ ಹಾಲೇರಿ ಪೈಸಾರಿಯ ಹಳೆಯ ಮನೆ ಮಳೆಯಿಂದ ನೆಲಸಮಗೊಂಡ ಕಾರಣ ನಮಗೆ ಆಶ್ರಯ ಇಲ್ಲದಾಗಿದೆ. ಸುಂಟಿಕೊಪ್ಪ ಕಂದಾಯ ಪರಿವೀಕ್ಷರಿಗೆ ಮಾಹಿತಿ ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದ್ದಾರೆ.



ಮಳೆಯಿಂದ ಸಂಪೂರ್ಣವಾಗಿ ಕುಸಿದು ಬಿದ್ದಿರುವ ಮನೆ

ಕಳೆದ 7 ವರ್ಷಗಳಿಂದ ಸರಕಾರದ ಮನೆಗಾಗಿ ಪ್ರಯತ್ನ ನಡೆಸುತ್ತಿದ್ದರೂ ಯಾವುದೇ ಸ್ಪಂದನೆ ದೊರೆತ್ತಿಲ್ಲ. ಆದ್ದರಿಂದ ಕಂದಾಯ ಅಧಿಕಾರಿಗಳು ನೆಲಸಮಗೊಂಡಿರುವ ನಮ್ಮ ಮನೆಯನ್ನು ಖುದ್ದು ಪರಿಶೀಲಿಸಬೇಕು. ನಾನು ನೀಡಿರುವ ದಾಖಲೆಗಳನ್ನು ಪರಿಗಣಿಸಿ ಸೋಮವಾರಪೇಟೆ ತಾಲೂಕಿನ ಜಂಬೂರು ಬಾಣೆಯಲ್ಲಿ ಸರಕಾರ ನಿರ್ಮಿಸಿರುವ ಪುನರ್ವಸತಿಯಲ್ಲಿ ನಮಗೂ ಒಂದು ಮನೆ ನೀಡಬೇಕೆಂದು ವಿಶಾಲಾಕ್ಷಿ ಬಿ.ಜೆ ಅವರು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಸೆ.13ರಂದು ಕೈಲ್ ಪೊಳ್ದ್ ಹಬ್ಬ ಆಚರಣೆ

ಮಡಿಕೇರಿ: ವಿರಾಜಪೇಟೆಯಲ್ಲಿರುವ ಬಾಳುಗೋಡು ಕೊಡವ ಸಮಾಜ ಒಕ್ಕೂಟ ಮತ್ತು ಪೊಮ್ಮಕ್ಕಡ ಕೂಟದ ಜಂಟಿ ಆಶ್ರಯದಲ್ಲಿ ಸೆ.13ರಂದು ಸಮಾಜದ ಆವರಣದಲ್ಲಿ ಕೈಲ್ ಪೊಳ್ದ್ ಹಬ್ಬಾಚರಣೆ ನಡೆಯಲಿದೆ. ಅಂದು ಬೆಳಗ್ಗೆ 10 ಗಂಟೆಗೆ ಆಯುಧ ಪೂಜೆ, ತೆಂಗಿನಕಾಯಿಗೆ ಗುಂಡು ಹೊಡೆಯುವುದು ಹಾಗೂ ಕ್ರೀಡಾಕೂಟಗಳು, ಮಹಿಳೆಯರಿಗೆ ವಿವಿಧ ಸ್ಪರ್ಧಾ ಕಾರ್ಯಕ್ರಮಗಳು ನಡೆಯಲಿವೆ.

ಡಿಸ್ಕಸ್ ಥ್ರೋ ವೇಳೆ ಅವಘಡ: ವಿದ್ಯಾರ್ಥಿ ತಲೆಗೆ ತೀವ್ರ ಗಾಯ

ಕುಶಾಲನಗರ : ಸಮೀಪದ ನಂಜರಾಯಪಟ್ಟಣ ಪ್ರೌಢಶಾಲಾ ಮೈದಾನದಲ್ಲಿ ಶುಕ್ರವಾರ ನಡೆಯುತ್ತಿದ್ದ ವಲಯ ಮಟ್ಟದ ಕ್ರೀಡಾಕೂಟ ವೇಳೆ ವಿದ್ಯಾರ್ಥಿಗಳು ಡಿಸ್ಕಸ್ ಥ್ರೋ ಅಭ್ಯಾಸ ನಡೆಸುತ್ತಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ಅಡ್ಡ ಬಂದ ವಿದ್ಯಾರ್ಥಿಯೊಬ್ಬನಿಗೆ ತಲೆಗೆ ಡಿಸ್ಕಸ್ ಬಡಿದು ತೀವ್ರವಾಗಿ ಗಾಯಗೊಂಡ ಘಟನೆ ನಡೆದಿದೆ.



ತಲೆಗೆ ಡಿಸ್ಕಸ್ ಬಡಿದು ತೀವ್ರವಾಗಿ ಗಾಯಗೊಂಡಿರುವ ವಿದ್ಯಾರ್ಥಿಯನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿರುವುದು.

ವಿರೂಪಾಕ್ಷಪುರ ಗ್ರಾಮದ ಶೇಖರ್, ಆಶಾ ದಂಪತಿಗಳ ಪುತ್ರ 8ನೇ ತರಗತಿಯ ವಿದ್ಯಾರ್ಥಿ ಪ್ರಜ್ವಲ್ ಗಾಯಗೊಂಡ ವಿದ್ಯಾರ್ಥಿಯಾಗಿದ್ದು, ಹೆಚ್ಚಿನ ಚಿಕಿತ್ಸೆಗೆ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇದೀಗ ವಿದ್ಯಾರ್ಥಿ ಚಿಕಿತ್ಸೆಗೆ ಸ್ಪಂದಿಸುತ್ತಿದ್ದು, ಮಂಗಳೂರು ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಆಗಿದೆ ಎಂದು ಕುಟುಂಬದವರು ಮಾಹಿತಿ ನೀಡಿದ್ದಾರೆ.

ಆದಷ್ಟು ಬೇಗ ಪ್ರಜ್ವಲ್ ಗುಣಮುಖರಾಗಿ ಬರಲಿ ಎಂದು ಗ್ರಾಮಸ್ಥರು, ವಿದ್ಯಾರ್ಥಿಗಳು ಪ್ರಾರ್ಥಿಸುತ್ತಿದ್ದು, ನಂಜರಾಯಪಟ್ಟಣ ಗ್ರಾಮ ಪಂಚಾಯಿತಿ ವತಿಯಿಂದ ಶೇಕಡ 25 ಅನುದಾನದಡಿಯಲ್ಲಿ ಪ್ರಜ್ವಲ್ ಚಿಕಿತ್ಸೆಗೆ ಸಹಾಯಧನವನ್ನು ನೀಡುವುದಾಗಿ ಪಂಚಾಯಿತಿ ಆಡಳಿತ ಮಂಡಳಿಯಿಂದ ನಿರ್ಣಯಿಸಲಾಗಿದೆ ಎಂದು ಅಧ್ಯಕ್ಷ ಸಿ.ಎಲ್.ವಿಶ್ವ ಹಾಗೂ ಸದಸ್ಯ ರಕ್ಷಿತ್ ಮಾವ್ರೋಜಿ ಮಾಹಿತಿ ನೀಡಿದ್ದಾರೆ.

ವಿಷಸೇವಿಸಿ ಅಪರಿಚಿತ ವ್ಯಕ್ತಿ ಸಾವು

ಕೊಳ್ಳೇಗಾಲ: ಪಟ್ಟಣದ ಬಸ್ ನಿಲ್ದಾಣದಲ್ಲಿ ಸುಮಾರು 65 ರಿಂದ 70 ವರ್ಷದ ವಯಸ್ಸಿನ ವ್ಯಕ್ತಿಯೋರ್ವ ವಿಷ ಸೇವಿಸಿ ಸಾವನ್ನಪ್ಪಿರುವ ಘಟನೆ ಜರುಗಿದೆ.

ಬಸ್ ನಿಲ್ದಾಣದಲ್ಲಿ ಅಸ್ವಸ್ಥನಾಗಿ ಬಿದ್ದಿದ್ದ ವ್ಯಕ್ತಿಯನ್ನು ಸ್ಥಳೀಯರು ಆಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕಳುಹಿಸಿದಾಗ ವೈದ್ಯರು ಪರಿಶೀಲಿಸಿ ಸಾವನ್ನಪ್ಪಿರುವುದು ಖಚಿತಪಡಿಸಿದರು.

ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಮೃತರ ಕಡೆಯವರು ಯಾರೂ ಪತ್ತೆಯಾಗದ ಕಾರಣ ಶವವನ್ನು ಚಾ.ನಗರ ಆಸ್ಪತ್ರೆಯಲ್ಲಿ ಇರಿಸಿ ಮುಂದಿನ ಕ್ರಮಕೈಗೊಂಡಿದ್ದಾರೆ.

ಪುರುಷ ನಾಪತ್ತೆ

ಚಾಮರಾಜನಗರ: ಕೆಂಪನಪುರ ಗ್ರಾಮದ ನಿವಾಸಿ ಮಹದೇವಸ್ವಾಮಿ ಕಾಣೆಯಾಗಿದ್ದು, ಸಂತೇಮರಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


41 ವರ್ಷದ ಮಹದೇವಸ್ವಾಮಿ 5.3 ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈ ಬಣ್ಣ, ದುಂಡು ಮುಖ ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ನೀಲಿ ಬಣ್ಣದ ತುಂಬು ತೋಳಿನ ಶರ್ಟ್ ಮತ್ತು ಬಿಳಿ ಬಣ್ಣದ ಪ್ಯಾಂಟ್ ಧರಿಸಿದ್ದರು.

ಇವರ ಸುಳಿವು ದೊರೆತಲ್ಲಿ ಸಂತೇಮರಹಳ್ಳಿ ಠಾಣೆ ದೂ.ಸಂ.08226–240250, 08226–222383, ಪಿಎಸ್ಐ ಮೊ.ಸಂ. 9480804650, ಸಂಪರ್ಕಿಸುವುದು.

ಅಕ್ರಮ ಗಾಂಜಾ ಸಾಗಣೆ; ಬೈಕ್ ಸಮೇತ ಆರೋಪಿ ಸೆರೆ

ಕೊಳ್ಳೇಗಾಲ. ಆ.23– ಕೊಳ್ಳೇಗಾಲ ತಾಲೂಕಿನ ಜಕ್ಕಳ್ಳಿಯಿಂದ ಕೊಳ್ಳೇಗಾಲ ಪಟ್ಟಣದ ಕಡೆಗೆ ಅಕ್ರಮವಾಗಿ ಪಟ್ಟಣದಲ್ಲಿ ಗಾಂಜಾವನ್ನು ಮಾರಾಟ ಮಾಡುವ ಸಲುವಾಗಿ ಬೈಕ್‌ನಲ್ಲಿ ಸಾಗಿಸುತ್ತಿದ್ದ ಆರೋಪಿಯೋರ್ವನನ್ನು ಪಟ್ಟಣದ ಪೊಲೀಸರು ಬಂಧಿಸಿದ್ದಾರೆ.

ಕೊಳ್ಳೇಗಾಲ ಪಟ್ಟಣದ ಬಸ್ತೀಪುರ ಬಡಾವಣೆಯ ಕುಮಾರ್ (42) ಬಂಧಿತ ಆರೋಪಿ. ಈತ ಅರೇ ಪಾಳ್ಯ ಗ್ರಾಮದ ಬಳಿ ಯಾರೋ ಅಪರಿಚಿತರಿಂದ ಹಣ ನೀಡಿ ಒಣ ಗಾಂಜಾ ಸೊಪ್ಪು ಖರೀದಿಸಿ ಕೊಳ್ಳೇಗಾಲದಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಲುವಾಗಿ ತನ್ನ ಬೈಕ್‌ನಲ್ಲಿ ತೆಗೆದುಕೊಂಡು ಬರುತ್ತಿರುವ ಕುರಿತು ಡಿವೈಎಸ್ಪಿ ಧರ್ಮೇಂದ್ರ ಅವರಿಗೆ ದೊರೆತ ಖಚಿತ ಮಾಹಿತಿ ಹಿನ್ನೆಲೆ ಎಸ್ಪಿ ಂುುವ'ರ ಮಾರ್ಗದರ್ಶನದಲ್ಲಿ ಅಪರಾಧ ಪತ್ತೆದಳದ ಪೊಲೀಸರಿಗೆ ಕ್ರಮಕ್ಕೆ ಸೂಚಿಸಿದ ಹಿನ್ನೆಲೆ ಬಸ್ತಿಪುರ ಚಾನಲ್ ಬಳಿ ಪಿಎಸ್ಸೈ ವರ್ಷ, ಎಎಸ್ಸೈ ತಖೀವುಲ್ಲಾ, ಸಿಬ್ಬಂದಿಗಳಾದ ಬಿಳಿಗೌಡ, ವೆಂಕಟೇಶ್, ರಾಜು ಕಾರ್ಯಾಚರಣೆ ಮೂಲಕ ಆರೋಪಿ ಬಂಧಿಸಿ ಬಂಧಿತನಿಂದ ಬೈಕ್ ಸಮೇತ 360 ಗ್ರಾಂ ಒಣಗಾಂಜಾ ವಶಕ್ಕೆ ಪಡೆದು ಮುಂದಿನ ಕ್ರಮಕೈಗೊಂಡಿದ್ದಾರೆ.



ಆರೋಪಿಯಿಂದ ವಶಪಡಿಸಿಕೊಳ್ಳಲಾದ ಬೈಕ್

ರಾಧಾ, ಕೃಷ್ಣರ ವೇಷ ಧರಿಸಿ ಸಂಭ್ರಮಿಸಿದ ಪುಟಾಣಿಗಳು

ಯಳಂದೂರು, ಆ.23– ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಶುಕ್ರವಾರ ಅದ್ದೂರಿಯಾಗಿ ಶ್ರೀ ಕೃಷ್ಣಜನ್ಮಾಷ್ಟಮಿ ಕಾರ್ಯಕ್ರಮ ನಡೆಯಿತು. ಇದರಲ್ಲಿ ಎಲ್‌ಕೆಜಿ ಹಾಗೂ ಯುಕೆಜಿ ಪುಟಾಣಿ ಮಕ್ಕಳು ಶ್ರೀಕೃಷ್ಣ ರಾಧೆಯ ಪೋಷಾಕುಗಳನ್ನು ಧರಿಸಿ ಸಂಭ್ರಮಿಸಿದರು.

ಶಾಲೆಯ ಮುಖ್ಯ ಶಿಕ್ಷಕಿ ಪುಟ್ಟಸಿದ್ದಮ್ಮ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸರ್ಕಾರಿ ಶಾಲೆಗಳಲ್ಲಿ ಉತ್ತಮ ಕಲಿಕೆ, ತಬೇತಿ, ಸಾಂಸ್ಕೃತಿಕ ಚಟುವಟಿಕೆ ಸೇರಿದಂತೆ ಸಾಕಷ್ಟು ಸೌಲಭ್ಯಗಳನ್ನು ನೀಡಲಾಗುತ್ತಿದೆ. ಖಾಸಗಿ ಶಾಲೆಯ ವ್ಯಾಮೋಹವನ್ನು ಬಿಟ್ಟು ಪೋಷಕ ವರ್ಗದವರು ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಿದ್ದಾರೆ. ಅಲ್ಲಿನ ವಾತಾವರಣವನ್ನೇ ನಾವು ಇಲ್ಲಿ ನಿರ್ಮಿಸಲು ಯತ್ನಿಸುತ್ತಿದ್ದೇವೆ. ಇದರ ನಿಮಿತ್ತ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಅಲ್ಲದೆ ಉತ್ತಮ ಶಿಕ್ಷಣವನ್ನು ನೀಡಲಾಗುತ್ತಿದೆ. ಪೋಷಕರು ಇಲ್ಲಿಗೆ ಭೇಟಿ ನೀಡಿ ಇಲ್ಲಿನ ವ್ಯವಸ್ಥೆಗಳ ಬಗ್ಗೆ ಮಾಹಿತಿ ಪಡೆದುಕೊಂಡು ತಮ್ಮ ಮಕ್ಕಳನ್ನು ಈ ಶಾಲೆಗೆ ಸೇರಿಸಲು ಪ್ರಯತ್ನಿಸಬೇಕು. ಇಲ್ಲಿನ ಸವಲತ್ತುಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಬೇಕು ಎಂದರು.

ಶಾಲೆಯಲ್ಲಿ ಕೃಷ್ಣರಾಧೆಯ ವೇಷದಲ್ಲಿ ಚಿಣ್ಣರಾದಿಯಾಗಿ ಪೋಷಕರೂ ಇಷ್ಟಪಡುತ್ತಾರೆ. ಆತನ ಲೀಲೆಗಳು ಎಲ್ಲರಿಗೂ ಅಚ್ಚುಮೆಚ್ಚು. ಇದನ್ನು ಪ್ರತಿನಿಧಿಸುವ ಮಕ್ಕಳು ನಮ್ಮ ಸಂಸ್ಕೃತಿಯನ್ನು ತಿಳಿಯುವ ಜೊತೆಗೆ ಅದರಲ್ಲಿ ತಾವೂ ಕೂಡ ಭಾಗಿಯಾಗಿ ಇದನ್ನು ಕಲಿಯಲು ಯತ್ನಿಸುತ್ತಾರೆ. ದ್ವಾಪರ ಯುಗದಲ್ಲಿ ಜನಿಸಿದ ಕೃಷ್ಣ ಮಹಾಭಾರತ ಯುದ್ಧದಲ್ಲಿ ಅರ್ಜುನನಿಗೆ ನೀಡಿದ ಬೋಧನೆಯು ಭಗವದ್ಗೀತೆಯಾಗಿದೆ. ಕೃಷ್ಣನ ಬಾಲಲೀಲೆಯನ್ನು ಮಕ್ಕಳು ವೇಷಭೂಷಣದಲ್ಲಿ ಪ್ರದರ್ಶಿಸುವಂತಹ ಕಾರ್ಯಕ್ರಮ ಅನುಕರಣೀಯವಾಗಿದೆ. ಇಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಹೊಸ ಹುಮ್ಮಸ್ಸು ತುಂಬುವ ಜೊತೆಗೆ ಪೋಷಕರ ಗಮನವನ್ನೂ ಸೆಳೆಯುತ್ತದೆ. ಮಕ್ಕಳಿಗೆ ಇಂತಹ ಚಟುವಟಿಕೆಗಳಿಂದ ವ್ಯಕ್ತಿತ್ವ ವಿಕಸನವಾಗಲಿದೆ ಎಂದರು.

ರಾಧಾ, ಕೃಷ್ಣರ ವೇಷದಲ್ಲಿ ಮಕ್ಕಳು ಆಕರ್ಷಕವಾಗಿ ಕಂಗೊಳಿಸಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕಿಯರಾದ ರಾಧ, ಸೌಭಾಗ್ಯಲಕ್ಷ್ಮಿ, ಕುಮುದ, ವರಲಕ್ಷ್ಮಿ, ಪುಷ್ಪಲತಾ, ಶ್ರೀಧರನಾಯಕ, ಎಸ್ಡಿಎಂಸಿ ಅಧ್ಯಕ್ಷ ಜೈಗುರು, ಸದಸ್ಯರಾದ ರೂಪಾ, ಚಂದ್ರಶೇಖರ, ದುಗ್ಗಹಟ್ಟಿ ಸಿ.ಸೌಮ್ಯ, ಡಿ.ಪಿ.ಮಹೇಶ್, ಸುಂದರ್, ಉಪ್ಪಿನಮೋಳೆ ಸತೀಶ್ ಇತರರು ಹಾಜರಿದ್ದರು.



ಯಳಂದೂರು ಪಬ್ಲಿಕ್ ಶಾಲೆಯಲ್ಲಿ ಶುಕ್ರವಾರ ಎಲ್‌ಕೆಜಿ, ಯುಕೆಜಿ ಪುಟಾಣಿ ಮಕ್ಕಳು ರಾಧಕೃಷ್ಣರ ವೇಷತೊಟ್ಟು ಸಂಭ್ರಮಿಸಿದರು.

ತೆರಕಣಾಂಬಿಹುಂಡಿ ಡೇರಿಗೆ 1.91 ಲಕ್ಷ ನಿವ್ವಳ ಲಾಭ



ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿಹುಂಡಿ–1ರಲ್ಲಿ ಹಾ.ಉ.ಸ.ಸಂಘದ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ಸಂಘದ ಅಧ್ಯಕ್ಷ ನಾಗಪ್ಪ ಉದ್ಘಾಟಿಸಿದರು.

ಗುಂಡ್ಲುಪೇಟೆ, ಆ.23– ತಾಲೂಕಿನ ತೆರಕಣಾಂಬಿಹುಂಡಿ–1ರಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯು ಸಂಘದ ಅಧ್ಯಕ್ಷ ನಾಗಪ್ಪನವರ ಅಧ್ಯಕ್ಷತೆಯಲ್ಲಿ ಸಂಘದ ಕಚೇರಿ ಆವರಣದಲ್ಲಿ ನಡೆಯಿತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹೈನುಗಾರಿಕೆಯು ರೈತರ ಬಾಳಿನ ಜೀವಾಳವಾಗಿದೆ. ಉತ್ತಮ ಗುಣಮಟ್ಟದ ಹಾಲನ್ನು ಡೇರಿಗೆ ಹಾಕುವುದರೊಂದಿಗೆ ಉತ್ತಮ ಲಾಭವನ್ನು ಹಾಲು ಉತ್ಪಾದಕರು ಪಡೆಯಬಹುದೆಂದು ಹಾಗೂ ಸಂಘವು 2024–25ನೇ ಸಾಲಿಗೆ ನಿವ್ವಳ ಲಾಭ 1,91,916 ರೂ.ಗಳನ್ನು ಹೊಂದಿದೆ ಎಂದರು.

ಮುಖ್ಯ ಅತಿಥಿಗಳಾಗಿ ಚಾಮುಲ್ ವಿಸ್ತರಣಾಧಿಕಾರಿ ಹೆಚ್.ಪ್ರಕಾಶ್, ಮಾರ್ಗ ವಿಸ್ತರಣಾಧಿಕಾರಿ ಮಂಜೇಶ್‌ಕುಮಾರ್ ಆಗಮಿಸಿ ಮಾತನಾಡಿ, ಚಾಮುಲ್ ರೈತರ ಹಿತಾಸಕ್ತಿಯನ್ನು ಕಾಪಾಡಿಕೊಂಡು ಬರುತ್ತಿದೆ ಎಂದರು.

ಸಭೆಯಲ್ಲಿ ಉಪಾಧ್ಯಕ್ಷ ಶಂಕರಪ್ಪ, ನಿರ್ದೇಶಕರಾದ ನಾಗಮಲ್ಲಪ್ಪ, ನಂಜಪ್ಪ, ಮಹೇಶ್, ನಾಗರಾಜು, ನಾಗಮಲ್ಲಪ್ಪ, ಗುರುಸ್ವಾಮಪ್ಪ, ಪುಟ್ಟದಾಸಯ್ಯ, ಸುರೇಶ್, ಬಿ.ಮಹದೇವಮ್ಮ, ಮಹದೇವಮ್ಮ ಮತ್ತು ಸಂಘದ ಮುಖ್ಯ ಕಾರ್ಯನಿರ್ವಾಹಕ ಜಿ.ಸುಂದರೇಶ್, ಹಾಲು ಪರೀಕ್ಷಕ ಎಂ. ಮಾದಪ್ಪ, ಗುಮಾಸ್ತ ಭವಿಷ್‌ಕುಮಾರ್, ಸಹಾಯಕ ಬಿ.ನವೀನ್ ಮತ್ತು ಹಾಲು ಉತ್ಪಾದಕರು ಭಾಗವಹಿಸಿದ್ದರು.

ನಾಗಪುರ ದೀಕ್ಷಾಭೂಮಿ ಯಾತ್ರೆಗೆ ತೆರಳಲು ಅರ್ಜಿ ಆಹ್ವಾನ

ಚಾಮರಾಜನಗರ: ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2025–26ನೇ ಸಾಲಿನಲ್ಲಿ ಮಹಾರಾಷ್ಟ್ರದ ನಾಗಪುರದಲ್ಲಿರುವ ದೀಕ್ಷಾಭೂಮಿ ಯಾತ್ರೆಗೆ ತೆರಳಲು ಡಾ.ಬಿ.ಆರ್.ಅಂಬೇಡ್ಕರ್ ಅನುಯಾಯಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆ.25 ರಿಂದ ಸೆ.9ರವರೆಗೆ ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ https://swd.karnataka.gov.in/ ನಲ್ಲಿ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಅಥವಾ ಆಯಾ ತಾಲೂಕಿನ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸುವುದು.

ಎನ್‌ಎಸ್‌ಯುಐನಿಂದ 200 ಅಡಿ ಉದ್ದದ ತಿರಂಗಾ ಯಾತ್ರೆ

ಚಾಮರಾಜನಗರ : ಸ್ವಾತಂತ್ರ್ಯೋತ್ಸವದ ಅಂಗವಾಗಿ ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿ 200 ಅಡಿ ಉದ್ದದ ತ್ರಿವರ್ಣ ಧ್ವಜಯಾತ್ರೆ ನಡೆಸಿ, ಸಾರ್ವಜನಿಕರಲ್ಲಿ ದೇಶ ಪ್ರೇಮದ ಅರಿವು ಮೂಡಿಸಲಾಯಿತು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಿಂದ ಆರಂಭವಾದ ತಿರಂಗಯಾತ್ರೆಯು ಸತ್ತಿರಸ್ತೆ, ಡಿವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ವ'ುುಕ್ತಾ ಂುು'ುವಾಯಿುತ'ು. ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು.



ಸ್ವಾತಂತ್ರ್ಯೋತ್ಸವ ಅಂಗವಾಗಿ ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಸಮಿತಿ ವತಿಯಿಂದ ಚಾ.ನಗರದಲ್ಲಿ 200 ಅಡಿ ಉದ್ದದ ತ್ರಿವರ್ಣ ಧ್ವಜಯಾತ್ರೆ ನಡೆಯಿತು.

ತಿರಂಗಾ ಯಾತ್ರೆಗೆ ಚಾಲನೆ ನೀಡಿದ ಕಾಡಾಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಸ್ವಾತಂತ್ರ್ಯೋತ್ಸವದ ಅಂಗವಾಗಿ ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಸಮಿತಿಯು 200 ಅಡಿ ಉದ್ದದ ತ್ರಿವರ್ಣ ಧ್ವಜಯಾತ್ರೆ ನಡೆಸಿ, ಸಾರ್ವಜನಿಕರಲ್ಲಿ ದೇಶ ಪ್ರೇಮದ ಅರಿವು ಮೂಡಿಸುತ್ತಿದೆ. ದೇಶಾಭಿಮಾನ, ದೇಶಪ್ರೇಮ ಇದ್ದಾಗ ಮಾತ್ರ ಸ್ವಾತಂತ್ರ್ಯ ಎಂಬ ಕಲ್ಪನೆಗೆ ಪರಿಪೂರ್ಣ ಅರ್ಥ ಬರುತ್ತದೆ. ಪ್ರತಿಯೊಬ್ಬರೂ ದೇಶಪ್ರೇಮ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಯೋಗೇಂದ್ರ, ಬಿ.ಕೆ.ರವಿಕುಮಾರ್, ಎನ್‌ಎಸ್‌ಯುಐ ರಾಜ್ಯ ಉಪಾಧ್ಯಕ್ಷ ರಫೀಕ್ ಅಲಿ, ಸಾಮಾಜಿಕ ಜಾಲತಾಣ ಜಿಲ್ಲಾಧ್ಯಕ್ಷ ನಾಗೇಂದ್ರನಾಯಕ, ಜಿಲ್ಲಾಧ್ಯಕ್ಷ ಮೋಹನ್ ನಗು, ಉಪಾಧ್ಯಕ್ಷ ಮುತ್ತುರಾಮು, ದಸ್ತಗಿರ್, ಉಮನಾಶ್ರೀ, ದರ್ಶನ್. ಕಿರಣ್‌ನಾಯಕ, ನಂದನ್, ಮನು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಿಡಿಗೇಡಿಗಳು ಅಕ್ರಮವಾಗಿ ಇರಿಸಿದ್ದ ಸಿಡಿಮದ್ದಿಗೆ ಅಮಾಯಕ ಶ್ವಾನ ಬಲಿ

ತಿಂಡಿ ಎಂದು ಭಾವಿಸಿ ಮದ್ದುತಿಂದ ಶ್ವಾನದ ಬಾಯಿ ಛಿದ್ರ, ಛಿದ್ರ..!



ಕೊಳ್ಳೇಗಾಲ: ಕಿಡಿಗೇಡಿಗಳು ಅಕ್ರಮವಾಗಿ ಇರಿಸಿದ್ದ ಸಿಡಿಮದ್ದಿಗೆ ಅಮಾಯಕ ಶ್ವಾನವೊಂದು ಬಲಿಯಾಗಿರುವ ದುರ್ಘಟನೆ ಪಟ್ಟಣದ ಬಸ್ತೀಪುರ ಸಮೀಪದ ಮದುಮಲೈ ಗುಡ್ಡ ಸಮೀಪದಲ್ಲಿ ನಡೆದಿದೆ.

ಶನಿವಾರ ಮಧ್ಯಾಹ್ನ ಮುಡಿಗುಂಡ ಸರ್ವೇ ನಂಬರ್ 601(ಬಿ,ಎ)ಗೆ ಹೊಂದಿ ಕೊಂಡಿರುವ ಸಮೀಪದ ಜಾಗದಲ್ಲಿ ಇದಕ್ಕಿದ್ದಂತೆ ಬಾರೀ ಸ್ಫೋಟಗೊಂಡ ಶಬ್ದ ಕೇಳಿ ಬಂತು. ಈ ಹಿನ್ನೆಲೆ ಅಲ್ಲಿಗೆ ಕೆಲ ರೈತರು ತೆರಳಿ ಪರಿಶೀಲಿಸಿದ್ದಾರೆ. ಈ ನಡುವೆ ಸದ್ದಿಗೆ ಸಮೀಪದಲ್ಲೆ ಇದ್ದ ಶಂಕರ್, ಕಾರ್ತಿಕ್ ಎಂಬುವರು ತೆರಳಿದ್ದಾರೆ. ಐದಾರು ನಿಮಿಷಗಳ ಕಾಲ ಹುಡುಕಾಡಿದ ವೇಳೆ ರೈತರು ಸಾಕಿದ್ದ ಶ್ವಾನ ವೊಂದು ಸತ್ತು ಬಿದ್ದಿರುವುದು, ಶ್ವಾನ ಸಿಡಿ ಮದ್ದು ತಿಂದು ಸಾವಿಗೀಡಾಗಿರುಹುದು ಎಂದು ಖಚಿತಪಡಿಸಿಕೊಂಡಿದ್ದಾರೆ.

ಸಿಡಿಮದ್ದನ್ನ ತಿಂಡಿ ಎಂದು ತಿಂದ ಶ್ವಾನದ ಬಾಯಿ ಛಿದ್ರ ಛಿದ್ರವಾಗಿದೆ. ಒಟ್ಟಾರೆ ಕಿಡಿಗೇಡಿಗಳು ವನ್ಯಜೀವಿಗಳಿಗಾಗಿ ಈ ಸಿಡಿಮದ್ದು ಇಟ್ಟಿರಬಹುದು, ಅದನ್ನ ಶ್ವಾನ ತಿಂದಿದೆ ಎಂದು ಹೇಳಲಾಗಿದ್ದು, ಈ ಸಂಬಂಧ ಅರಣ್ಯ ಇಲಾಖಾಧಿಕಾರಿಗಳು ಗಮನಹರಿಸಿ, ಸಿಡಿಮದ್ದು ಇಡುತ್ತಿರುವ ಕಿಡಿಗೇಡಿಗಳ ಬಂಧನಕ್ಕೆ ಕ್ರಮವಹಿಸುವಂತಾಗಲಿ ಎಂದು ಪ್ರಾಣಿಪ್ರಿಯರು ಮನವಿ ಮಾಡಿದ್ದಾರೆ.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಪುಟ 9
ಮೈಸೂರು ಮಿತ್ರ
ಭಾನುವಾರ 24-08-2025

ಪರಮೇಶ ಕೆ.ಉತ್ತನಹಳ್ಳಿ

ಆದಿ ಪೂಜಿತ

ಗಣೇಶ ಚತುರ್ಥಿ



ಭಾರತವು ಹಬ್ಬಗಳ ನಾಡು. ಇಲ್ಲಿ ಪ್ರತಿ ಹಬ್ಬವು ತನ್ನದೇ ಆದ ವಿಶೇಷತೆ, ಸಂಪ್ರದಾಯ ಮತ್ತು ಪಾರಂಪರ್ಯವನ್ನು ಹೊಂದಿದೆ. ಕರ್ನಾಟಕದಲ್ಲಿ ಆಚರಿಸಲಾಗುವ ಗೌರಿ ಗಣೇಶ ಹಬ್ಬವು ಭಕ್ತಿ, ಕುಟುಂಬದ ಒಗ್ಗಟ್ಟು ಮತ್ತು ಸಂಸ್ಕೃತಿ ಸಂರಕ್ಷಣೆಯ ಸಂಕೇತವಾಗಿದೆ. ಈ ಹಬ್ಬವನ್ನು ಸಾಮಾನ್ಯವಾಗಿ ಭಾದ್ರಪದ ಮಾಸದಲ್ಲಿ (ಆಗಸ್ಟ್-ಸೆಪ್ಟೆಂಬರ್) ಆಚರಿಸಲಾಗುತ್ತದೆ. ಮೊದಲು ಸ್ವರ್ಣಗೌರಿ ಪೂಜೆ ಮತ್ತು ನಂತರ ಗಣೇಶ ಚತುರ್ಥಿ ಹಬ್ಬವನ್ನು ನಿರಂತರವಾಗಿ ಆಚರಿಸಲಾಗುತ್ತದೆ.

ಈ ನಿಟ್ಟಿನಲ್ಲಿ ಭಾರತವು ಅನೇಕ ದೇವತೆಗಳು ನೆಲೆಸಿರುವ ಹಾಗೂ ಆ ದೇವಾನುದೇವತೆಗಳನ್ನು ತುಂಬು ಭಕ್ತಿ ಭಾವದಿಂದ ಆರಾಧಿಸುವ ಮನೋಭಾವ ರೂಢಿಯಾಗಿದೆ. ಅಂತಹ ನೂರಾರು ದೇವತೆಗಳಲ್ಲಿ ಗಣೇಶನು ಅತ್ಯಂತ ಪ್ರಿಯ ಮತ್ತು ಜನಪ್ರಿಯ ದೇವರು. ಭಾರತದ ಧಾರ್ಮಿಕ ಹಬ್ಬಗಳಲ್ಲಿ ಗಣೇಶ ಚತುರ್ಥಿ ಹಬ್ಬವು ವಿಶೇಷ ಮಹತ್ವವನ್ನು ಪಡೆದುಕೊಂಡಿದೆ. ಗಣೇಶನನ್ನು ಗಣಪತಿ, ವಿನಾಯಕ, ವಿಘ್ನೇಶ್ವರ, ವಿಘ್ನ ನಿವಾರಕ, ಮೂಷಿಕವಾಹನ, ಲಂಬೋದರ, ಏಕದಂತ, ಸುಮುಖ ಮುಂತಾದ ಅನೇಕ ಹೆಸರುಗಳಿಂದ ಕರೆಯಲಾಗುತ್ತದೆ. ಹಿಂದೂ ಧರ್ಮದಲ್ಲಿ ಯಾವುದೇ ಶುಭಕಾರ್ಯಕ್ಕೂ ಮೊದಲು ಗಣೇಶನ ಪೂಜೆ ಮಾಡುವ ಸಂಪ್ರದಾಯವಿದೆ.

'ವಕ್ರತುಂಡ ಮಹಾಕಾಯ ಕೋಟಿ
ಸೂರ್ಯ ಸಮಪ್ರಭ
ನಿರ್ವಿಘ್ನಂ ಕುರು ಮೇ ದೇವ
ಸರ್ವಕಾರ್ಯೇಷು ಸರ್ವದಾ'.

ಎಂಬ ಶ್ಲೋಕವು ಗಣೇಶನ ಬಲ, ಪ್ರಭೆ ಮತ್ತು ವಿಘ್ನ ನಿವಾರಕ ಶಕ್ತಿಯನ್ನು ಸಾರುತ್ತದೆ.

ಪೌರಾಣಿಕ ಜನ್ಮಕಥೆಗಳು

● ಶಿವ-ಪಾರ್ವತಿ ಕಥೆ

ಕೈಲಾಸದಲ್ಲಿ ಪಾರ್ವತಿ ದೇವಿ ಸ್ನಾನಕ್ಕೆ ಹೋಗುವ ಮೊದಲು, ತನ್ನ ದೇಹದ ಮೈಮಣ್ಣಿನಿಂದ ಒಂದು ಸುಂದರ ಬಾಲಕನನ್ನು ಸೃಷ್ಟಿಸಿ ಬಾಗಿಲಲ್ಲಿ ಕಾವಲು ಕಾಯಲು ಹೇಳಿದರು. ಶಿವನು ಬಂದಾಗ, ಬಾಲಕನು ತಡೆಯುತ್ತಿದ್ದರಿಂದ ಕೋಪಗೊಂಡ ಶಿವನು ತ್ರಿಶೂಲದಿಂದ ಅವನ ತಲೆಯನ್ನು ಕತ್ತರಿಸಿದನು. ಪಾರ್ವತಿ ದುಃಖದಿಂದ ರೋದಿಸಿದಾಗ, ಶಿವನು ಉತ್ತರ ದಿಕ್ಕಿಗೆ ತಲೆ ಇಟ್ಟು ಮಲಗಿದ್ದ ಆನೆಯ ತಲೆಯನ್ನು ತಂದು ಬಾಲಕನ ದೇಹಕ್ಕೆ ಜೋಡಿಸಿ ಜೀವ ತುಂಬಿದರು. ಹೀಗೆ ಅವನು ಗಜಾನನನಾದನು.

● ಮತ್ಸ್ಯ ಪುರಾಣ

ಪಾರ್ವತಿ ತನ್ನ ಮೈ ಬೆವರಿನಿಂದ ಮಗುವನ್ನು ಸೃಷ್ಟಿಸಿ ಗಂಗಾ ನದಿಗೆ ಬಿಡುತ್ತಾರೆ. ಗಂಗಾ ಮಾತೆ ಅವನನ್ನು ವತ್ಸಾ ಎಂದು ಕರೆದಳು. ಹೀಗಾಗಿ ಗಣೇಶನಿಗೆ ಇಬ್ಬರು ತಾಯಂದಿರು. ಪಾರ್ವತಿ ಮತ್ತು ಗಂಗಾ ಇದ್ದರು. ಇದರಿಂದಲೇ ಮಣ್ಣಿನ ಗಣಪತಿ ಮೂರ್ತಿಯನ್ನು ನೀರಿನಲ್ಲಿ ವಿಸರ್ಜನೆ ಮಾಡುವ ಸಂಪ್ರದಾಯ ಬೆಳೆದಿತು.

● ಲಿಂಗ ಪುರಾಣ

ಅಸುರರಿಂದ ದೇವತೆಗಳು ತೊಂದರೆಗೊಳಗಾದಾಗ, ಶಿವ-ಪಾರ್ವತಿಯರು ಒಟ್ಟಾಗಿ ಒಂದು ಮಹಾಶಕ್ತಿಯನ್ನು ಸೃಷ್ಟಿಸಿದರು. ಅವನು ಹುಟ್ಟುವಾಗಲೇ ಆನೆಯ ಮುಖವನ್ನು ಹೊಂದಿದ್ದನು. ಈ ಗಜಮುಖ ದೇವರು ಅಸುರರ ದುಷ್ಟಕಾರ್ಯಗಳಿಗೆ ಅಡ್ಡಿ ತಂದನು. ಹೀಗಾಗಿ ಅವನಿಗೆ ವಿಘ್ನರಾಜ ಎಂಬ ಹೆಸರು ದೊರೆಯಿತು.

ಗಣೇಶ ಚತುರ್ಥಿಯ ಪೂಜಾ ವಿಧಾನ

ಭಾದ್ರಪದ ಶುಕ್ಲ ಚತುರ್ಥಿ ದಿನ, ಗಣೇಶನ ಪೂಜೆಯನ್ನು ಮನೆ ಮತ್ತು ಸಾರ್ವಜನಿಕ ಮಂಟಪಗಳಲ್ಲಿ ಭಕ್ತಿಯಿಂದ ಮಾಡಲಾಗುತ್ತದೆ.

ಪೂಜಾ ಸಾಮಗ್ರಿ

- ಕೆಂಪು ಬಟ್ಟೆ
- ವೀಳ್ಯದೆಲೆ, ಬಾಳೆ ಎಲೆ, ತೆಂಗಿನಕಾಯಿ
- ಪಂಚಾಮೃತ, ಕುಂಕುಮ, ಶ್ರೀಗಂಧ
- ದುರ್ವಾ ಗಡ್ಡೆ, ಹೂವು, ಗರಿಕೆ
- ಮೋದಕ, ಕಡಬು, ಎಳ್ಳುಂಡೆ, ಲಾಡು, ಚಕ್ಕುಲಿ, ಅವಲಕ್ಕಿ
- ತುಪ್ಪದ ದೀಪ, ಕರ್ಪೂರ

ಗಣೇಶ ಚತುರ್ಥಿ ಕೇವಲ ಧಾರ್ಮಿಕ ಹಬ್ಬವಲ್ಲ: ಅದು ಭಕ್ತಿ, ಪರಿಸರ ಪ್ರೀತಿ, ಸಂಸ್ಕೃತಿ ಸಂರಕ್ಷಣೆ ಮತ್ತು ಸಾಮಾಜಿಕ ಏಕತೆಯ ಪ್ರತೀಕ. ಮಣ್ಣಿನ ಮೂರ್ತಿಯಿಂದ ಆರಂಭವಾಗಿ ಜಲವಿಸರ್ಜನೆ ಮೂಲಕ ಪ್ರಕೃತಿಗೆ ಮರಳುವ ಈ ಹಬ್ಬ, ಮಾನವ ಜೀವನದ ಅಸ್ಥಿರತೆ ಮತ್ತು ಪ್ರಕೃತಿಯ ಶಾಶ್ವತತೆಯ ಸಂದೇಶವನ್ನು ನೀಡುತ್ತದೆ. ವಿಘ್ನ ನಿವಾರಕನ ಆಶೀರ್ವಾದದಿಂದ ಜೀವನದ ಅಡೆತಡೆಗಳನ್ನು ದೂರ ಮಾಡಿ, ಬುದ್ಧಿಜ್ಞಾನ ಸಮೃದ್ಧಿಯನ್ನು ನಮ್ಮ ಜೀವನದಲ್ಲಿ ತುಂಬಿಸಿಕೊಳ್ಳುವುದು ಈ ಹಬ್ಬದ ತತ್ತ್ವ.

ಗಣೇಶ ಚತುರ್ಥಿಯ ಮಹತ್ವ : ಗಣೇಶ ಚತುರ್ಥಿ ಹಬ್ಬವು ಭಾರತದಲ್ಲಿಯೂ, ವಿಶೇಷವಾಗಿ ಮಹಾರಾಷ್ಟ್ರ, ಕರ್ನಾಟಕ, ಗೋವಾ, ಆಂಧ್ರಪ್ರದೇಶ, ತಮಿಳುನಾಡು, ಗುಜರಾತ್, ಒಡಿಶಾ ಮತ್ತು ಇನ್ನಿತರ ರಾಜ್ಯಗಳಲ್ಲಿ ಅತ್ಯಂತ ಭಕ್ತಿಭಾವದಿಂದ ಆಚರಿಸಲಾಗುವ ಪ್ರಮುಖ ಹಬ್ಬವಾಗಿದೆ. ಈ ಹಬ್ಬವನ್ನು ಗಣೇಶನ ಜನ್ಮದಿನವೆಂದು ಪರಿಗಣಿಸಲಾಗುತ್ತದೆ. ಪಾರ್ವತಿದೇವಿಯವರಿಂದ ಗಣೇಶನ ಜನನ ನಡೆದ ದಿನವೆಂದು ಪುರಾಣಗಳು ಹೇಳುತ್ತವೆ. ಭಕ್ತರು ಈ ದಿನವನ್ನು ಅತ್ಯಂತ ಮಂಗಳಕರವೆಂದು ನಂಬುತ್ತಾರೆ. ಇದರ ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳು ಜನರ ಜೀವನದಲ್ಲಿ ಆಳವಾದ ಪ್ರಭಾವ ಬೀರುತ್ತವೆ.

ಅಡೆತಡೆಗಳನ್ನು ನಿವಾರಿಸುವ ದೇವರು: ಗಣಪತಿಯನ್ನು "ವಿಘ್ನೇಶ್ವರ" ಎಂದು ಕರೆಯಲಾಗುತ್ತದೆ. ಜೀವನದಲ್ಲಿ ಮಾನವರಿಗೆ ಅನೇಕ ಅಡೆತಡೆಗಳು ಎದುರಾಗುತ್ತವೆ ಕೆಲಸ, ವಿದ್ಯಾಭ್ಯಾಸ, ವ್ಯಾಪಾರ, ಸಂಬಂಧಗಳು ಅಥವಾ ಯಾವುದೇ ಕ್ಷೇತ್ರದಲ್ಲಾಗಲಿ. ಭಕ್ತರು ಗಣೇಶನನ್ನು ಪೂಜಿಸುವುದರಿಂದ ಆ ಅಡೆತಡೆಗಳು ನಿವಾರಣೆಯಾಗುತ್ತವೆ ಎಂದು ನಂಬಲಾಗಿದೆ.

ಯಾವುದೇ ಕಾರ್ಯವನ್ನು ಪ್ರಾರಂಭಿಸುವ ಮೊದಲು 'ಓಂ ಶ್ರೀ ಗಣೇಶಾಯ ನಮಃ' ಎಂದು ಪ್ರಾರ್ಥಿಸುವ ಪದ್ಧತಿಯೇ ಇದಕ್ಕೆ ಸಾಕ್ಷಿ.



ಹೊಸ ಆರಂಭಗಳ ದೇವರು: ಗಣೇಶನನ್ನು "ಆದ್ಯದೇವ" ಎಂದೂ ಕರೆಯುತ್ತಾರೆ, ಏಕೆಂದರೆ ಯಾವುದೇ ಕಾರ್ಯದ ಮೊದಲ ಪೂಜೆಯು ಗಣೇಶನಿಗೇ ಸಲ್ಲುತ್ತದೆ. ಮದುವೆ, ಮನೆಪ್ರವೇಶ, ಶಿಕ್ಷಣದ ಆರಂಭ, ಹೊಸ ವ್ಯಾಪಾರ ಅಥವಾ ಯಾವುದೇ ಪ್ರಮುಖ ಕಾರ್ಯವಾಗಲಿ ಮೊದಲಿಗೆ ಗಣೇಶನಿಗೆ ಹಾರೈಸುತ್ತಾರೆ. ಗಣೇಶ ಚತುರ್ಥಿಯ ಹಬ್ಬವು ಜೀವನದಲ್ಲಿ ಹೊಸ ಗುರಿಗಳು, ಹೊಸ ಪ್ರಯತ್ನಗಳು ಮತ್ತು ಹೊಸ ದಾರಿಗಳ ಪ್ರಾರಂಭಕ್ಕೆ ಅತ್ಯುತ್ತಮ ಸಮಯವೆಂದು ಪರಿಗಣಿಸಲಾಗಿದೆ.

ಜ್ಞಾನ ಮತ್ತು ಸಮೃದ್ಧಿಯ ದೇವರು: ಗಣೇಶನ ತಲೆ ಆನೆ ರೂಪದಲ್ಲಿರುವುದರಿಂದ, ಅದನ್ನು ಬುದ್ಧಿವಂತಿಕೆ ಮತ್ತು ಜ್ಞಾನದ ಸಂಕೇತವೆಂದು ಪರಿಗಣಿಸಲಾಗಿದೆ. ಗಣೇಶನ ದೊಡ್ಡ ತಲೆ ವಿಶಾಲ ಚಿಂತನೆ ಮತ್ತು ಜ್ಞಾನವನ್ನು ಸೂಚಿಸುತ್ತದೆ. ಆತನ ಚಿಕ್ಕ ಕಣ್ಣುಗಳು ಕೇಂದ್ರೀಕರಣದ ಮಹತ್ವವನ್ನು ಸಾರುತ್ತವೆ. ಆತನ ದೊಡ್ಡ ಕಿವಿಗಳು ಇತರರನ್ನು ಗಮನದಿಂದ ಆಲಿಸುವ ಗುಣವನ್ನು ಪ್ರತಿಪಾದಿಸುತ್ತವೆ. ಈ ಹಬ್ಬದಲ್ಲಿ ಭಕ್ತರು ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ, ಉದ್ಯೋಗದಲ್ಲಿ ಯಶಸ್ಸು ಮತ್ತು ಜೀವನದಲ್ಲಿ ಸಮೃದ್ಧಿಗಾಗಿ ಪ್ರಾರ್ಥಿಸುತ್ತಾರೆ.

ಸಾಂಸ್ಕೃತಿಕ ಮತ್ತು ಸಾಮಾಜಿಕ ಮಹತ್ವ: ಗಣೇಶ ಚತುರ್ಥಿ ಧಾರ್ಮಿಕ ಹಬ್ಬ ಮಾತ್ರವಲ್ಲ, ಅದು ಸಾಮಾಜಿಕ ಏಕತೆಯ ಹಬ್ಬ ಕೂಡ ಆಗಿದೆ. ಕುಟುಂಬ ಸದಸ್ಯರು, ಬಂಧುಬಳಗ ಹಾಗೂ ಸಮುದಾಯದ ಜನರು ಒಟ್ಟಾಗಿ ಸೇರಿ ವಿಗ್ರಹವನ್ನು ಪ್ರತಿಷ್ಠಾಪಿಸಿ ಪೂಜೆ ಮಾಡುತ್ತಾರೆ. ಎಲ್ಲರೂ ಒಟ್ಟಾಗಿ ಪ್ರಸಾದವನ್ನು ಸೇವಿಸುವುದು, ಹಬ್ಬದ ಮೆರವಣಿಗೆಗಳಲ್ಲಿ ಭಾಗವಹಿಸುವುದು ಇವುಗಳೆಲ್ಲ ಸಮಾನತೆ ಮತ್ತು ಸಹಕಾರವನ್ನು ಬೆಳೆಸುತ್ತವೆ. ವಿಶೇಷವಾಗಿ ಮಹಾರಾಷ್ಟ್ರದಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರವರು ಬ್ರಿಟಿಷರ ವಿರುದ್ಧ ಜನಸಮುದಾಯವನ್ನು ಒಗ್ಗೂಡಿಸಲು ಗಣೇಶ ಚತುರ್ಥಿಯನ್ನು ಸಾರ್ವಜನಿಕವಾಗಿ ಆಚರಿಸಲು ಪ್ರಾರಂಭಿಸಿದರು. ಇದರಿಂದ ಇದು ರಾಷ್ಟ್ರಭಕ್ತಿಯ ಹಬ್ಬವಾಗಿಯೂ ರೂಪುಗೊಂಡಿತು.

ದೈವಿಕ ಶಕ್ತಿಯೊಂದಿಗೆ ಸಂಪರ್ಕ: ಗಣೇಶ ಚತುರ್ಥಿ ಕೇವಲ ಬಾಹ್ಯ ಆಚರಣೆ ಮಾತ್ರವಲ್ಲ, ಅದು ಆಂತರಿಕ ಆಧ್ಯಾತ್ಮಿಕ ಬೆಳವಣಿಗೆಗೆ ದಾರಿಯಾದ ಹಬ್ಬವಾಗಿದೆ. ಪ್ರತಿದಿನದ ಪೂಜೆ, ಮಂತ್ರೋಚ್ಚಾರಣೆ ಮತ್ತು ಭಕ್ತಿಗೀತೆಗಳು ಭಕ್ತರನ್ನು ದೈವಿಕ ಶಕ್ತಿಯತ್ತ ಕರೆದೊಯ್ಯುತ್ತವೆ. ವಿಗ್ರಹ ಪ್ರತಿಷ್ಠಾಪನೆ ಮತ್ತು ಅವಿಸರ್ಜನೆ (ವಿಸರ್ಜನೆ) ಪ್ರಕ್ರಿಯೆಗಳು ಮಾನವನ ಜೀವನದ ತಾತ್ಕಾಲಿಕತೆಯನ್ನು ನೆನಪಿಸುತ್ತವೆ "ಬಂದದ್ದು ಮರಳಿ ಹೋಗಬೇಕು" ಎಂಬ ದಾರ್ಶನಿಕ ಸಂದೇಶವನ್ನು ಇದು ಸಾರುತ್ತದೆ.

ಒಟ್ಟಾರೆಯಾಗಿ ಒಂದು ಧಾರ್ಮಿಕ ಭಾವದಿಂದ ಆಚರಣೆಗೊಳ್ಳುವ ಗಣೇಶ ಚತುರ್ಥಿಯು ಆದಿ ಪೂಜಿತನಾಗಿ, ವಿಘ್ನಗಳ ನಿವಾರಕನಾಗಿ, ವಿದ್ಯೆಯನ್ನು ಕರುಣಿಸುವವನಾಗಿ, ಮೋದಕ ಪ್ರಿಯನಾಗಿ, ಕಿರಿಯವರಿಂದ ಹಿರಿಯರವರೆಗೆ ದೇವಾಲಯಗಳಲ್ಲಿ ಮಾತ್ರವಲ್ಲದೆ ಪ್ರತಿ ಬೀದಿ ಬೀದಿಗಳಲ್ಲು ತಾತ್ಕಾಲಿಕ ಗುಡಿಗಳ ನಿರ್ಮಿಸಿ ಐಕ್ಯತೆಯ ಭಾವದಿಂದ ಪೂಜಿಸುವ ಹಾಗೂ ಸರ್ವರನ್ನು ಒಳಗೊಂಡಂತೆ ಆಚರಿಸುವ ಹಬ್ಬವೇ ಗೌರಿ ಗಣೇಶ ಹಬ್ಬವಾಗಿದೆ. ಸಹಜವಾಗಿ ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ಜನರನ್ನು ಒಂದುಗೂಡಿಸಲು ಬಾಲಗಂಗಾಧರ ತಿಲಕರು ಈ ಗಣೇಶ ಹಬ್ಬವನ್ನು ಒಂದು ಭಾವನಾತ್ಮಕವಾಗಿ ಅಸ್ತ್ರವಾಗಿ ಬಳಸಿಕೊಂಡದ್ದು ಗಣೇಶ ಚತುರ್ಥಿಯ ಮಹತ್ವವನ್ನು ಸಾರುತ್ತದೆ

ಪೂಜಾ ಕ್ರಮ

- ದೇವರ ಕೋಣೆಯನ್ನು ಶುಚಿಗೊಳಿಸಿ, ಮಂಟಪವನ್ನು ಅಲಂಕರಿಸುವುದು
- ಬಾಳೆ ಎಲೆಯ ಮೇಲೆ ಅಕ್ಕಿ ಹಾಕಿ ವಿನಾಯಕ ವಿಗ್ರಹವನ್ನು ಸ್ಥಾಪಿಸುವುದು
- ಹೂವು ಅರ್ಪಿಸುವುದು
- ಗಣೇಶನಿಗೆ ಪ್ರಿಯವಾದ ಮೋದಕ ನೈವೇದ್ಯ ಸಲ್ಲಿಸುವುದು
- ಮಂತ್ರಪಠಣ ಮತ್ತು ಆರತಿ ಮಾಡುವುದು

ಭಕ್ತರು ಈ ದಿನ ತನು ಮನ ಧನವನ್ನು ಸಮರ್ಪಣೆ ಮಾಡುತ್ತ, ಸಂತೋಷ ಮತ್ತು ಸಮೃದ್ಧಿಗಾಗಿ ಗಣಪತಿಯನ್ನು ಪ್ರಾರ್ಥಿಸುತ್ತಾರೆ.

ಸಾಂಸ್ಕೃತಿಕ ಮತ್ತು ವೈಜ್ಞಾನಿಕ ಹಿನ್ನೆಲೆ

ಹಿಂದೂ ಹಬ್ಬಗಳು ಪೌರಾಣಿಕ, ಧಾರ್ಮಿಕ, ಸಾಮಾಜಿಕ ಹಾಗೂ ಪ್ರಕೃತಿಯ ಚಕ್ರದೊಂದಿಗೆ ಸಂಬಂಧ ಹೊಂದಿವೆ. ಗಣೇಶ ಚತುರ್ಥಿಯೂ ಅದರಲ್ಲಿ ಒಂದು.

ಕೃಷಿ ಸಂಬಂಧ: ಈ ಹಬ್ಬ ಮಳೆಗಾಲದ ಮಧ್ಯದಲ್ಲಿ ಬರುತ್ತದೆ. ಇದು ಬೆಳೆಯು ಚೆನ್ನಾಗಿ ಬೆಳೆಯುವ ಸಮಯವಾಗಿದ್ದು, ಮಳೆಯ ಅಗತ್ಯ ಹೆಚ್ಚಾಗಿರುತ್ತದೆ.

ಚಂದ್ರನ ನಂಬಿಕೆ: ಈ ದಿನ ಚಂದ್ರನನ್ನು ನೋಡುವುದನ್ನು ಅಶುಭವೆಂದು ಪರಿಗಣಿಸಲಾಗಿದೆ, ಏಕೆಂದರೆ ಪುರಾಣ ಪ್ರಕಾರ, ಗಣೇಶನು ಚಂದ್ರನ ಹೆಮ್ಮೆ ಕಡಿಮೆ ಮಾಡಲು ಶಾಪ ನೀಡಿದನು.


ಪರಿಸರ ಜಾಗೃತಿ: ಮಣ್ಣಿನ ಗಣಪತಿ ಮೂರ್ತಿಯನ್ನು ವಿಸರ್ಜನೆ ಮಾಡುವುದರಿಂದ, ಮಣ್ಣು ಮತ್ತೆ ಪ್ರಕೃತಿಗೆ ಸೇರುತ್ತದೆ. ಇದು ಪಂಚಭೂತ ಚಕ್ರಕ್ಕೆ ಗೌರವ ಸಲ್ಲಿಸುವಂತಾಗಿದೆ.

ಗಣೇಶನ ಸಂಕೇತಾರ್ಥ

ಆನೆಯ ಮುಖ: ಬಲ, ಬುದ್ಧಿವಂತಿಕೆ ಮತ್ತು ಸಹನೆ
ಲಂಬೋದರ: ಜಗತ್ತಿನ ಸಕಲ ಅನುಭವಗಳನ್ನು ಸಮಾಧಾನದಿಂದ ಅಳವಡಿಸಿಕೊಳ್ಳುವ ಶಕ್ತಿ
ಏಕದಂತ: ತ್ಯಾಗ ಮತ್ತು ಬದ್ಧತೆ
ಮೋದಕ: ಸಂತೋಷ ಮತ್ತು ತೃಪ್ತಿಯ ಸಂಕೇತ
ದಾಳಿಂಬೆ: ಜ್ಞಾನ ಮತ್ತು ಸಮೃದ್ಧಿಯ ನಿಧಿ
ಪಾಶ ಅಂಕುಶ: ನಿಯಂತ್ರಣ ಮತ್ತು ಮಾರ್ಗದರ್ಶನ
ಮೂಷಿಕವಾಹನ: ವಿನಯ ಮತ್ತು ಚುರುಕುತನ

ಮಕ್ಕಳ ಚಿತ್ರಕಥೆ: ನನ್ನನ್ನು ಶಾಪ ವಿಮುಕ್ತನನ್ನಾಗಿ ಮಾಡು...!


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




1. ಗಣಪತಿಯು ಸಪ್ತಲೋಕಗಳನ್ನು ಸಂಚರಿಸಬೇಕೆಂದು ಇಚ್ಛಿಸಿ ಮೂಷಿಕ ವಾಹನವನ್ನೇರಿ ಸಂಚರಿಸುತ್ತಾ ಚಂದ್ರಲೋಕವನ್ನು ತಲುಪಿದಾಗ ಮದಾನ್ವಿತನಾದ ಚಂದ್ರನು ಗಣಪತಿಯನ್ನು ಕಂಡು ಅಪಹಾಸ್ಯ ಮಾಡಿದನು.



2. ಇದರಿಂದ ಕೋಪಗೊಂಡ ಗಣಪ, 'ನೋಡಲು ಸೌಂದರ್ಯಶಾಲಿಯೆಂಬ ಗರ್ವದಿಂದ ಮೆರೆಯುತ್ತಿರುವ ನಿನ್ನನ್ನು ಯಾರು ಚತುರ್ಥಿಯ ದಿನದಂದು ನೋಡುತ್ತಾರೊ ಅವರು ಅಪವಾದಕ್ಕೊಳಗಾಗುವರು...ಇದು ನಿಶ್ಚಯ' ಎಂದು ಶಪಿಸಿದನು.



3. ಬಾಡಿದ ಮುಖದಿಂದ ಚಂದ್ರನು ಬಿಳಿ ತಾವರೆ ಹಿಂದೆ ಅಡಗಿಕೊಂಡನು. ತರುವಾಯ ದೇವತೆಗಳು ಚಂದ್ರನನ್ನು ಕಾಣದೆ ಆತಂಕದಿಂದ ಬ್ರಹ್ಮನ ಬಳಿಗೆ ಹೋಗಿ ಗಣಪತಿ ಹಾಗೂ ಚಂದ್ರನ ನಡುವೆ ನಡೆದ ಸಂಗತಿಯನ್ನು ತಿಳಿಸಿದರು.



4. ಆಗ ಬ್ರಹ್ಮನು "ಗಣಪತಿ ಕೊಟ್ಟ ಶಾಪವನ್ನು ಹಿಂದೆ ಪಡೆಯಲು ತ್ರಿಮೂರ್ತಿಗಳಿಂದಲೂ ಸಾಧ್ಯವಾಗದು. ಆ ಗಣಪತಿಯಲ್ಲೇ ಶರಣಾಗಿ ಬೇಡಿಕೊಂಡು ಚತುರ್ಥಿಯ ದಿನದಲ್ಲಿ ಸಂಕಷ್ಟಹರ ಗಣಪತಿ ವ್ರತವನ್ನು ಮಾಡಬೇಕು. ಆಗ ಆತನೇ ಶಾಪ ವಿಮೋಚನೆ ಮಾಡುತ್ತಾನೆ" ಎಂದನು.



5. ದೇವತೆಗಳು ಚಂದ್ರನ ಸಮೀಪಕ್ಕೆ ಬಂದು ಬ್ರಹ್ಮನಿಂದ ಹೇಳಲ್ಪಟ್ಟ ಪೂಜಾ ವಿಧಾನವನ್ನು ತಿಳಿಸಿದರು. ಅವರು ಹೇಳಿದಂತೆ ಚಂದ್ರನು ಗಣಪತಿಯನ್ನು ಪೂಜಿಸಿದಾಗ ಗಣಪತಿ ಪ್ರತ್ಯಕ್ಷನಾದನು. ಚಂದ್ರನು "ನಾನು ಮಾಡಿದ ಅಪಹಾಸ್ಯವನ್ನು ಮನ್ನಿಸು... ನನ್ನನ್ನು ಶಾಪದಿಂದ ವಿಮುಕ್ತನನ್ನಾಗಿ ಮಾಡು" ಎಂದು ಬೇಡಿಕೊಂಡನು.



6. ಆಗ ಸುಪ್ರೀತನಾದ ಗಣಪತಿ,"ಶುಕ್ಲಪಕ್ಷದ ಚತುರ್ಥಿಯ ದಿನದೊಳು ಯಾರು ಚಂದ್ರ ದರ್ಶನ ಮಾಡುತ್ತಾರೊ... ಅವರು ಸಂವತ್ಸರಾಂತ್ಯದವರೆವಿಗೂ ನಿರರ್ಥಕವಾದ ಅಪವಾದ ಹೊಂದುವುದರಲ್ಲಿ ಯಾವುದೇ ಸಂಶಯವಿಲ್ಲ. ಭಾದ್ರಪದ ಶುಕ್ಲ ಪಕ್ಷ ಬಿದಿಗೆಯಲ್ಲಿ ಯಾರು ನಿನ್ನನ್ನು ನೋಡುತ್ತಾರೋ ಅವರನ್ನು ಚತುರ್ಥಿಯ ಚಂದ್ರನ ದರ್ಶನದಿಂದ ಪ್ರಾಪ್ತವಾದ ದೋಷವು ಬಾಧಿಸಲಾರದು" ಎಂದು ವಚನವಿತ್ತನು.

ವಾರಭವಿಷ್ಯ

24.08.2025 ರಿಂದ 30.08.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಸಿಂಹ, ಚಂದ್ರ-ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಕುಜ-ಕನ್ಯಾ, ಬುಧ-ಕಟಕ, ಗುರು-ವೃಷಭ, ಶುಕ್ರ-ಕಟಕ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಶನಿ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ತುಳಿಯುವವರು ಎಷ್ಟೇ ಜನವಿದ್ದರೂ ಕಾಪಾಡಲು ಒಬ್ಬ ದೇವರಿದ್ದಾನೆ ಎಂಬ ನಂಬಿಕೆ ಇರಲಿ. ನಿಮ್ಮ ರಾಶ್ಯಾಧಿಪತಿ ಕುಜನ ಸಂಚಾರ ಸಾಹಸ ಪ್ರವೃತ್ತಿಗೆ ಪ್ರೇರಣೆ ನೀಡುವನು. ಭೂ ಸಂಬಂಧಿ ವ್ಯವಹಾರಗಳಲ್ಲಿ ಲಾಭವನ್ನು ನಿರೀಕ್ಷಿಸಬಹುದು. ಎಲೆಕ್ಟ್ರಿಕಲ್ ವಸ್ತು ಮಾರಾಟ ತೇಜಿ ಇರುವುದು. ಶನಿ ಪ್ರಭಾವದಿಂದ ಮೂಳೆ ಕೀಲುಗಳ ನೋವು ಇರುವುದು.

ಶ್ರೀ ಕಾರ್ತಿಕಸ್ವಾಮಿ ದರ್ಶನ. ಶುಭ ಸಂಖ್ಯೆ-6

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ವಾರದ ಆದಿಗೆ ನೂತನ ವಸ್ತ್ರ, ಆಭರಣ ಖರೀದಿ. ವಿದ್ಯಾರ್ಥಿಗಳು ಲವಲವಿಕೆಯಿಂದ ಅಭ್ಯಾಸ ಅಧ್ಯಯನದಲ್ಲಿ ನಿರತರಾಗುವರು. ಏಕಾದಶ ಶನಿದೇವನಿಂದ ಕಬ್ಬಿಣ, ಸಿಮೆಂಟ್ ವ್ಯಾಪಾರ ಭರಾಟೆಯಿಂದ ಸಾಗುವುದು. ನೌಕರ ವರ್ಗದವರಿಗೆ ಬಡ್ತಿಯೊಂದಿಗೆ ಸಂಬಳ, ಸಾರಿಗೆ ಹೆಚ್ಚುವುದು. ಯುವತಿಯರಿಗೆ ಕನ್ಯಾಸೆರೆಯಿಂದ ಬಿಡುಗಡೆಯಾಗಲು ಶ್ರೀ ಗೌರಿ ಪೂಜೆ ಮಾಡಿ.

ಶ್ರೀ ಗೌರಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-7

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ಕಷ್ಟ ಇದ್ದಾಗ ದುಡಿಮೆಯೇ ದೇವರು. ವಾರದಾರಂಭಕ್ಕೆ ದ್ರವ್ಯಲಾಭ. ಗುರಿ ಮುಟ್ಟಬೇಕೆಂದರೆ ಪ್ರತಿಯೊಂದು ಕೆಲಸದಲ್ಲೂ ಧೈರ್ಯದಿಂದ ಮುನ್ನಡೆಯಿರಿ. ಸಾಮಾಜಿಕ ಸೇವಾ ಕಾರ್ಯಗಳಲ್ಲಿ ಭಾಗವಹಿಸುವಿರಿ. ಪೂಜಾ ಸಾಮಗ್ರಿ ಮಾರಾಟಗಾರರಿಗೆ ಹೆಚ್ಚಿನ ವ್ಯಾಪಾರದಿಂದ ಅಧಿಕ ಧನಲಾಭವಾಗುವುದು. ಅನ್ಯ ಸ್ತ್ರೀಯರನ್ನು ಗೌರವದಿಂದ ಕಾಣಿ. ಅನ್ಯಥಾ ಅಪಮಾನಕ್ಕೆ ಗುರಿಯಾಗುವಿರಿ.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-1

ಕಟಕ (ಹೊ,ಹು,ಹೆ,ಡ,ಡಿ,ಡು)

ಈ ವಾರದಲ್ಲಿ ಬುಧ-ಮಿತ್ರರ ಸಹಾಯ ದೊರೆತು ಕೌಟುಂಬಿಕ ಸಮಸ್ಯೆಗಳು ಪರಿಹಾರವಾಗುವುದು. ಮಗನಿಗೆ ನೌಕರಿ ದೊರೆಯುವ ಸಾಧ್ಯತೆ ಇರುತ್ತದೆ. ವರಿಷ್ಠ ಅಧಿಕಾರಿಗಳಿಗೆ ಜವಾಬ್ದಾರಿ ಹೆಚ್ಚುವುದು. ಬ್ಯಾಂಕ್ ಸಾಲ ದೊರೆಯದೆ ನಿರಾಸೆ ಅನುಭವಿಸುವಿರಿ. ರಾಜಕಾರಣಿಗಳಿಗೆ ಅಪವಾದ ಸುತ್ತಿಕೊಳ್ಳುವುದು. ಪಿತೃ ಸಮಾನ ವ್ಯಕ್ತಿಯ ವಿಯೋಗ. ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ಇರಲಿ.

ಶ್ರೀ ದುರ್ಗಾ ಪರಮೇಶ್ವರಿ ಉಪಾಸನೆ. ಶುಭ ಸಂಖ್ಯೆ-5

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ಲಾಭಸ್ಥಾನದಲ್ಲಿರುವ ಗುರು ಶನಿದೇವನ ಪ್ರಭಾವವನ್ನು ತಗ್ಗಿಸಿದ್ದಾನೆ. ಅಪೇಕ್ಷಿತ ಕೆಲಸ ಕಾರ್ಯಗಳು ವೇಗವನ್ನು ಪಡೆದುಕೊಳ್ಳಲಿದೆ. ಗೃಹ ನಿರ್ಮಾಣಕ್ಕೆ ಬ್ಯಾಂಕ್ ಸಾಲಕ್ಕಾಗಿ ಪ್ರಯತ್ನಿಸಬಹುದು. ದೇವತಾ ಕಾರ್ಯ ಹಾಗೂ ದಾನ ಧರ್ಮ ಕಾರ್ಯಗಳಲ್ಲಿ ಭಾಗವಹಿಸಿ ಸಮಾಜದ ಗೌರವಕ್ಕೆ ಪಾತ್ರರಾಗುವಿರಿ. ಅಷ್ಟ ಶನಿ ಇರುವ ಕಾರಣ ಬೇಜವಾಬ್ದಾರಿಯ ವಾಹನ ಚಾಲನೆಯಿಂದ ಸಂಕಷ್ಟಕ್ಕೆ ಒಳಗಾಗುವಿರಿ.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-3

ಕನ್ಯಾ (ಟೊ,ಪ,ಪಿ,ಪು,ಫ,ಣ,ಠ,ಪೆ,ಪೊ)

'ಜಗದಲ್ಲಿ ನಡೆಯುವುದೆಲ್ಲ ಜಗದೀಶನಿಚ್ಛೆ'. ಪೂರ್ವಭಾವಿ ತಯಾರಿ ಇಲ್ಲದೆ ಮಾಡಿದ ಕೆಲಸಗಳಿಂದ ಧನ ನಷ್ಟವಾಗುವುದು. ಮನೆ ಮಂದಿಯಲ್ಲಿ ಸಂಶಯ ಪ್ರವೃತ್ತಿ ಮುಂದುವರಿಯುವುದು. ನಿಮ್ಮ ತಪ್ಪುಗಳನ್ನು ಅವಲೋಕಿಸಿಕೊಳ್ಳಿ. ವಾರದ ಕಡೆಗೆ ಮನೆಯಲ್ಲಿನ ಬಿಗು ವಾತಾವರಣ ನಿಮ್ಮ ರಾಶಿಗೆ ಚಂದ್ರ ಬರುವ ಕಾರಣ ನಿವಾರಣೆ ಆಗುವುದು. ಹೋಟೆಲ್ ವ್ಯಾಪಾರಿಗಳಿಗೆ ಉತ್ತಮ ಧನಲಾಭ.

ಶ್ರೀ ಸತ್ಯನಾರಾಯಣ ಅರ್ಚನೆ. ಶುಭ ಸಂಖ್ಯೆ-6

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

'ಬಹು ನಿರೀಕ್ಷಿತ ಫಲ ಮಧುರವೆ' ನೀವು ಬಯಸಿದ್ದನ್ನು ಗಳಿಸಿಕೊಳ್ಳುವಿರಿ. ಕ್ಷೀರ ಜನ್ಯ ವಸ್ತು ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ. ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದ ವಿಚಾರ ಇತ್ಯರ್ಥವಾಗುವುದು. ವಧು-ವರರ ಅನ್ವೇಷಣೆಯಲ್ಲಿ ಯಶಸ್ಸು ದೊರೆಯುವ ಸಾಧ್ಯತೆ ಇರುತ್ತದೆ. ನೂತನ ವಾಹನ ಖರೀದಿಸುವ ನಿಮ್ಮ ದೀರ್ಘಕಾಲದ ಬಯಕೆ ಈಡೇರಲು ಗ್ರಹಾನುಕೂಲವಿದೆ.

ಶ್ರೀ ದೇವಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-9

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ಚಂದ್ರಗ್ರಹದ ಶುಭ ಸಂಚಾರದ ಕಾರಣ ವಾರದ ಆದಿಭಾಗದಲ್ಲಿ ಆದಾಯದಲ್ಲಿ ಹೆಚ್ಚಳ, ಸುಖ ಸಂತೋಷದ ವಾತಾವರಣ, ಪ್ರೀತಿ ಪಾತ್ರರ ಮಿಲನಗಳಿಂದ ಮನಸ್ಸು ಹಗುರವೆನಿಸುವುದು. ಕೆಲವು ಕೆಲಸಗಳು ಹೂವು ಎತ್ತಿದಂತೆ ಪೂರ್ಣಗೊಳ್ಳುವುದು. ರಾಹು-ಕೇತುಗಳು ನಿಮ್ಮ ವಿರುದ್ಧವಿದ್ದು ನಿಮ್ಮ ಚತುರೋಪಾಯಗಳು ಕೆಲಸ ಮಾಡದು. ಡ್ರೈವಿಂಗ್ ಮಾಡುವಾಗ ಮನೆಯಲ್ಲಿ ನಿಮ್ಮನ್ನು ಪ್ರೀತಿಸುವವರು ಇದ್ದಾರೆ ಎಂಬ ನೆನಪಿರಲಿ.

ಶ್ರೀ ಗಣಪತಿ ದರ್ಶನ, ಪ್ರಾರ್ಥನೆ. ಶುಭ ಸಂಖ್ಯೆ-4

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ಈ ವಾರ ಗ್ರಹಗಳ ಸಂಚಾರ ಶುಭವಿದೆ. ಮನೆ ಮಂದಿಯೊಂದಿಗೆ ಸಂತಸದ ಸಮಯವನ್ನು ಕಳೆಯುವಿರಿ. ರಾಜಕೀಯ ರಂಗದವರು ರಾಜಧರ್ಮವನ್ನು ಅನುಸರಿಸಿ ಜನಾನುರಾಗಿಗಳಾಗುವರು. ಜನಸೇವೆಯಲ್ಲಿ ಪಕ್ಷಪಾತ ಸಲ್ಲದು. ನಿಮ್ಮ ಪೂರ್ವಜರ ಆಸ್ತಿಯ ಬಗ್ಗೆ ಇಲ್ಲ ಸಲ್ಲದ ವ್ಯಾಜ್ಯಗಳು ಉಂಟಾಗಬಹುದು. ಮಾತೃಶ್ರೀಯವರ ಸ್ವಾಸ್ಥ್ಯದಲ್ಲಿ ಏರುಪೇರು ಉಂಟಾದೀತು. ರಾತ್ರಿ ಪ್ರಯಾಣ ಬೇಡಿ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-8

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

'ಬುದ್ಧಿ ಎಷ್ಟೇ ಇದ್ದರೂ ಕರ್ಮಫಲ ಗುದ್ದದೆ ಬಿಡದು' ತೀಕ್ಷ್ಣ ಮಾತುಗಳಿಂದ ಸಂಬಂಧಗಳಲ್ಲಿ ಒಡಕು ಉಂಟಾಗುವುದು. ನೀವು ನಿರಾಶರಾಗುವ ಅಗತ್ಯವಿಲ್ಲ. ನಿಮ್ಮ ರಾಶ್ಯಾಧಿಪತಿ ಶನಿದೇವ ವಿಕ್ರಮ ಸ್ಥಾನದಲ್ಲಿ ಗೋಚರಿಸುವ ಪರಿಣಾಮ ನಿಮಗಾಗದವರ ತಂತ್ರಗಳು ಫಲಿಸದು. ಅರ್ಥ ಲಾಭ, ಸ್ಥಾನ ಪ್ರಾಪ್ತಿ ಹಾಗೂ ಭೃತ್ಯ ಸುಖಗಳನ್ನು ಅನುಭವಿಸುವಿರಿ. ಧನ ಸಂಪತ್ತಿನ ಅಭಿವೃದ್ಧಿ ದೂರ ಪ್ರಯಾಣಗಳ ಸಂಭವಿಸುತ್ತವೆ.

ಶ್ರೀ ವರಾಹಸ್ವಾಮಿ ದರ್ಶನ. ಶುಭ ಸಂಖ್ಯೆ-2

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಇದು ನಿಮ್ಮ ಜೀವನದ ಪಾಠ ಕಲಿತು ಆತಂಕಗಳನ್ನು ನಿವಾರಿಸಿಕೊಳ್ಳುವ ಸಮಯ. ವ್ಯಾಪಾರ, ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭ ದೊರೆಯುವುದು, ಸ್ತ್ರೀ ಸುಖಾದಿಗಳು, ಸೇವಕರ ಸಹಕಾರದಿಂದ ಪಶು ಸಮೃದ್ಧಿ, ಆರೋಗ್ಯ ಸುಧಾರಿಸುವುದು, ದೇವತಾ ಕಾರ್ಯಗಳಿಗೆ ಹಣ ವಿನಿಯೋಗ. ಆಸ್ತಿ ವಿವಾದಗಳು ನ್ಯಾಯಾಲಯ ತಲುಪಬಹುದು. ಹಿರಿಯರ ಆಶೀರ್ವಾದದಿಂದ ಮಾನಸಿಕ ಶಾಂತಿ ಲಭಿಸುವುದು.

ಶ್ರೀ ವೆಂಕಟೇಶ್ವರ ಅರ್ಚನೆ, ಶುಭ ಸಂಖ್ಯೆ-4

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ವಾರದ ಆದಿಗೆ ಗೋಪಾಲಕರಿಗೆ ಉತ್ತಮ ಆದಾಯ, ಪಶು ಮಾರಾಟದಿಂದಲೂ ಉತ್ತಮ ಧನಲಾಭವಾಗುವುದು. ಕೌಟುಂಬಿಕ ತಾಪತ್ರಯಗಳು ಗುರುಜನರ ಸಲಹೆ ಆಶೀರ್ವಾದಗಳಿಂದ ನಿವಾರಣೆ ಆಗುವುದು. ವಿದ್ಯಾರ್ಥಿಗಳು ಅಭ್ಯಾಸದಲ್ಲಿ ಹಿಂದೆ ಬೀಳುವರು. ಸರ್ಕಾರಿ ನೌಕರರು ಅಕ್ರಮ ಕಾರ್ಯ ಮಾಡಿ ಕಾನೂನಿನ ತೊಡಕಿಗೆ ಸಿಲುಕುವರು. ಹಿಂದೆ-ಮುಂದೆ ಯೋಚಿಸದೆ ಮಾಡಿದ ಕೆಲಸದಿಂದ ಧನ ನಷ್ಟ.

ಶ್ರೀ ಶಿವ ಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ-6

ಮೈಸೂರು ಮಿತ್ರ

ಕಪಿಲಾ ಪ್ರವಾಹ ತಡೆಗೆ ತಡೆಗೋಡೆ ನಿರ್ಮಾಣ

ನಂಜನಗೂಡು ಆಸ್ಪತ್ರೆಯಲ್ಲಿ ಟ್ರಾಮಾಕೇರ್ ಸೆಂಟರ್



ನಂಜನಗೂಡು: ಕಪಿಲಾ ನದಿಯ ಪ್ರವಾಹದಿಂದ ಆಗುವ ಹಾನಿಯನ್ನು ತಪ್ಪಿಸಲು 70 ಕೋಟಿ ವೆಚ್ಚದಲ್ಲಿ ತಡೆಗೋಡೆ ನಿರ್ಮಾಣ ಮತ್ತು 10 ಕೋಟಿ ವೆಚ್ಚದಲ್ಲಿ ತಾಲೂಕು ಆಸ್ಪತ್ರೆಗೆ ಟ್ರಾಮಾ ಕೇರ್ ಸೌಲಭ್ಯವನ್ನು ಕಲ್ಪಿಸಲು ಸರ್ಕಾರ ಅನುಮತಿ ನೀಡಿದೆ ಎಂದು ಶಾಸಕ ದರ್ಶನ್ ಧ್ರುವ ನಾರಾಯಣ ಹೇಳಿದರು.

ಶನಿವಾರ ವಿದ್ಯಾನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಳೆ ಹೆಚ್ಚಾದ ಸಂದರ್ಭದಲ್ಲಿ ಕಪಿಲಾ ನದಿಯ ಪ್ರವಾಹದಿಂದ ಶ್ರೀಕಂಠೇಶ್ವರ ದೇವಾಲಯದ ಆಸು–ಪಾಸಿನ ಪ್ರದೇಶಗಳು ಮತ್ತು ಸುತ್ತ ಮುತ್ತಲಿನ ಬಡಾವಣೆಗಳು ಜಲಾವೃತಗೊಂಡು ಮನೆಗಳು ಸೇರಿದಂತೆ ಹಲವು ಪ್ರದೇಶಗಳು ಹಾನಿಗೊಳಗಾಗುತಿವೆ. ಅಲ್ಲದೆ ಪರಶುರಾಮ ದೇವಾಲಯ ಜಲಾವೃತಗೊಂಡು ಭಕ್ತರಿಗೆ ತೊಂದರೆಯಾಗಿರುವ ಬಗ್ಗೆ ವಿಧಾನಸಭೆಯ ಕಲಾಪದ ವೇಳೆ ಪ್ರಶ್ನೆ ಕೇಳಿ ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಲಾಗಿತ್ತು ಎಂದರು.

ಇದಕ್ಕೆ ಸೂಕ್ತವಾಗಿ ಸ್ಪಂದಿಸಿದ ಉಪ ಮುಖ್ಯಮಂತ್ರಿ ಮತ್ತು ಸಣ್ಣ ಹಾಗೂ ಮಧ್ಯಮ ನೀರಾವರಿ ಸಚಿವರಾದ ಡಿಕೆ ಶಿವಕುಮಾರ್‌ರವರು ಈಗಾಗಲೇ 70 ಕೋಟಿ ಬಿಡುಗಡೆ ಮಾಡಿ, ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲಾಗಿದೆ, ನಗರದ ಪ್ರವಾಸಿ ಮಂದಿರದಿಂದ ಪರಶುರಾಮ ದೇವಾಲಯದವರೆಗೆ ಕಪಿಲಾ ನದಿಗೆ ತಡೆಗೋಡೆ ನಿರ್ಮಾಣ ಮತ್ತು ವಾಕಿಂಗ್ ಪಾತ್ ನಿರ್ಮಾಣ ಮಾಡಿ ಸಮಗ್ರವಾಗಿ ಅಭಿವೃದ್ಧಿಪಡಿಸಿ ಪ್ರವಾಸಿ ತಾಣವಾಗಿ ರೂಪಿಸಲು ಯೋಜನೆಯ ಸಿದ್ಧಪಡಿಸಲಾಗಿದ್ದು ಕಾಮಗಾರಿ ಆರಂಭಗೊಳ್ಳಲಿದೆ ಎಂದು ಮಾಹಿತಿ ನೀಡಿದ್ದಾರೆ ಎಂದರು.


10 ಕೋಟಿ ವೆಚ್ಚದಲ್ಲಿ ಟ್ರಾಮಾ ಕೇರ್ ಸೆಂಟರ್: ಊಟಿ– ಮೈಸೂರು ರಾಷ್ಟ್ರೀಯ ಹೆದ್ದಾರಿ ಮತ್ತು ಬಾಗಲಕೋಟೆಯಿಂದ ನಂಜನಗೂಡು ಮೂಲಕ ಚಾಮರಾಜನಗರ ಕೊಯಮತ್ತೂರಿಗೆ ಸಂಪರ್ಕ ಕಲ್ಪಿಸುವ ಎರಡು ರಾಷ್ಟ್ರೀಯ ಹೆದ್ದಾರಿಗಳು ಹಾದಿ ಹೋಗುವ ಕಾರಣದಿಂದಾಗಿ ಅಪಘಾತಗಳ ಸಂಖ್ಯೆ ಅಧಿಕವಾಗಿದೆ ನಮ್ಮ ತಾಲೂಕು



ವ್ಯಾಪ್ತಿಯ ನಾಲ್ಕು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹೆಚ್ಚು ಅಪಘಾತ ಪ್ರಕರಣಗಳು ದಾಖಲಾಗಿವೆ ಸುಮಾರು 336, ಪ್ರಕರಣಗಳಲ್ಲಿ ಗಂಭೀರವಾಗಿ ಗಾಯಗೊಂಡ ಪ್ರಕರಣವಿದೆ, ಅಲ್ಲದೆ ಸುಮಾರು 120 ಪ್ರಕರಣಗಳಲ್ಲಿ ಸಾವು ಸಂಭವಿಸಿದೆ, ಹೆಚ್ಚಿನ ಅಪಘಾತಗಳು ಘಟಿಸುವ ಕಾರಣ ತುರ್ತಾಗಿ ಚಿಕಿತ್ಸೆ ನೀಡಲು ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಟ್ರಾಮಾ ಕೇರ್ ಸೆಂಟರ್ ಅವಶ್ಯಕತೆ ಇದೆ ಅದನ್ನು ಮಂಜೂರು ಮಾಡುವಂತೆ ಆರೋಗ್ಯ ಸಚಿವರಲ್ಲಿ ಮನವಿ ಮಾಡಿದ ಕಾರಣ ನಮ್ಮ ಮನವಿಗೆ ಸ್ಪಂಧಿಸಿದ ಸಚಿವ ದಿನೇಶ್ ಗುಂಡೂರಾವ್ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ಎಲ್ಲಾ ತಾಲೂಕು ಆಸ್ಪತ್ರೆಗಳಲ್ಲಿ 10 ಕೋಟಿ ವೆಚ್ಚದಲ್ಲಿ ಟ್ರಾಮಾ ಕೇರ್ ಸೆಂಟರ್ ತೆರೆದು ಆ ಕೇಂದ್ರಕ್ಕೆ ಅಗತ್ಯವಿರುವ ಯಂತ್ರೋಪಕರಣಗಳು, ಅನಸ್ತೇಶಿಯಾ ವಿಭಾಗ ಸೇರಿದಂತೆ ಹೆಚ್ಚುವರಿ ಆಂಬುಲೆನ್ಸ್‌ಗಳನ್ನು ವಿತರಿಸಲು ನಿರ್ಧಾರ ಕೈಗೊಳ್ಳಲಾಗಿದೆ ಎಂದು ಉತ್ತರ ನೀಡಿದ್ದು ಶೀಘ್ರದಲ್ಲಿ ಆರಂಭಗೊಳ್ಳುವ ಭರವಸೆಯಿದ್ದು ಇದರಿಂದ ಹೆಚ್ಚಿನ ಸಾವು ನೋವುಗಳನ್ನು ತಪ್ಪಿಸಬಹುದಾಗಿದೆ ಎಂದರು.

ರೈತರಿಗೆ ಬೆಳೆ ಹಾನಿ ಪರಿಹಾರ ಸರ್ಕಾರದ ಭರವಸೆ: 2024–25 ಮತ್ತು 2025–26ನೇ ಸಾಲಿನ ಮುಂಗಾರಿನಲ್ಲಿ ಸುರಿದ ಭಾರಿ ಮಳೆಯಿಂದಾಗಿ ನಂಜನಗೂಡು ತಾಲೂಕಿನ ರೈತರಿಗೆ ಬೆಳೆ ಹಾನಿಯಾಗಿ ಸರ್ಕಾರದ ಪರಿಹಾರ ತಂತ್ರಾಂಶದಲ್ಲಿ ಒಟ್ಟು 222 ಮಂದಿ ಸಂತ್ರಸ್ತ ರೈತರು ತಮ್ಮ ಬೆಳೆ ಹಾನಿಯನ್ನು ನಮೂದಿಸಿದ್ದಾರೆ. ಆದರೆ, ಇವರಲ್ಲಿ ಕೇವಲ 82 ರೈತರಿಗೆ ಮಾತ್ರ ಪರಿಹಾರ ವಿತರಣೆ ಮಾಡಲಾಗಿದ್ದು, ಉಳಿದ 140 ರೈತರುಗಳಿಗೆ ಈವರೆಗೂ ಪರಿಹಾರ ನೀಡಲಾಗಿಲ್ಲ. ಬಾಕಿ ಇರುವ ಅರ್ಜಿದಾರರಿಗೆ ಯಾವ ಕಾಲಮಿತಿಯಲ್ಲಿ ಪರಿಹಾರ ವಿತರಿಸಲಾಗುವುದು ಎಂಬ ಚುಕ್ಕೆ ಗುರುತಿನ ಪ್ರಶ್ನೆಯನ್ನು ಕೇಳಲಾಗಿದ್ದು ಮಾನ್ಯ ಕಂದಾಯ ಸಚಿವರಾದ ಕೃಷ್ಣ ಬೈರೇಗೌಡ ರವರು ಸಕಾರಾತ್ಮಕವಾಗಿ ಸ್ಪಂದಿಸುವುದರೊಂದಿಗೆ ಬಾಕಿ ಉಳಿದಿರುವ 140 ರೈತರಿಗೂ ಪರಿಹಾರ ನೀಡಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಖಂಡಿಸಿ ನಾಳೆ ಕಾರುಗಳ ಮೂಲಕ ಧರ್ಮಸ್ಥಳಕ್ಕೆ ರ್‍ಯಾಲಿ



ಕೆ.ಆರ್.ನಗರ: ಧರ್ಮಸ್ಥಳ ಕುರಿತಾಗಿ ನಡೆಯುತ್ತಿರುವ ಅಪಪ್ರಚಾರ ಖಂಡಿಸಿ ಜೆಡಿಎಸ್‌ನ ಮಾಜಿ ಸಚಿವ ಹಾಗೂ ರಾಜ್ಯ ಕಾರ್ಯಾಧ್ಯಕ್ಷ ಸಾ.ರಾ. ಮಹೇಶ್ ಅವರ ನೇತೃತ್ವ ದಲ್ಲಿ ಆ.25ರಂದು ಬೆಳಗ್ಗೆ 4.30 ಗಂಟೆಗೆ 'ಧರ್ಮಸ್ಥಳ ಪರ' ಘೋಷಣೆಯೊಂದಿಗೆ ಕಾರುಗಳ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ.

ಮಾಜಿ ಸಚಿವ ಸಿ. ಎಸ್.ಪುಟ್ಟರಾಜು, ಮಾಜಿ ಶಾಸಕರಾದ ಪಿರಿಯಾಪಟ್ಟಣದ ಕೆ.ಮಹ ದೇವ್, ತೀ.ನರಸೀಪುರದ ಅಶ್ವಿನ್ ಕುಮಾರ್ ಮತ್ತು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡರ ಸಹ ಭಾಗಿತ್ವದಲ್ಲಿ ಮೈಸೂರು ನಗರದ ದಟ್ಟಗಳ್ಳಿಯ ಸಾ.ರಾ.ಕನ್ವೆನ್ಷನ್ ಹಾಲ್‌ನಿಂದ ಸುಮಾರು 40 ಕಾರುಗಳಲ್ಲಿ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ.

ಮೈಸೂರು ಜಿಲ್ಲೆಯ ಭಕ್ತರ ಯಾತ್ರೆಯು ಮೈಸೂರು ನಗರದ ಸಾ.ರಾ.ಕನ್ವೆನ್ಷನ್ ಹಾಲ್‌ನಿಂದ ಇಲವಾಲ, ಕೆ.ಆರ್.ನಗರ ಪಟ್ಟಣದ ತೋಪಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಬಳಿಕ ಸಾಲಿಗ್ರಾಮ, ಹರದನಹಳ್ಳಿ, ಮಾರ್ಗವಾಗಿ ಹಾಸನ ಜಿಲ್ಲೆಯ ಅರಕಲ ಗೂಡು ತಾಲೂಕಿನ ರಾಮ ನಾಥಪುರ, ಕೊಣನೂರು, ಸಿದ್ದಾಪುರ–ಬಾಣಾವರ ಮೂಲಕ ಶನಿವಾರಸಂತೆ, ಕೊಡುರಸ್ತೆ, ಬಿಸಿಲೆ ಘಾಟ್, ಸುಬ್ರಮಣ್ಯ–ಕುಲ್ಕುಂದ ಗೇಟ್ ಮಾರ್ಗವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ತಲುಪಲಾಗುತ್ತದೆ.

ಧರ್ಮಸ್ಥಳ ಪರ ಯಾತ್ರೆಗೆ ಮೈಸೂರು ಜಿಲ್ಲೆಯ ಜಿ.ಪಂ ಮಾಜಿ ಅಧ್ಯಕ್ಷರು, ಮಾಜಿ ಸದಸ್ಯರು, ಮೈಸೂರು ಮಹಾ ನಗರ ಪಾಲಿಕೆಯ ಮಾಜಿ ಮಹಾಪೌರರು, ಮಾಜಿ ಉಪ ಮಹಾಪೌರರು, ಮಾಜಿ ಸದಸ್ಯರು ಹಾಗೂ ಶ್ರೀ ಕ್ಷೇತ್ರದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಕೈಗೊಂಡಿರುವ ಶ್ರೀ ಕ್ಷೇತ್ರ ಧರ್ಮಸ್ಥಳ ಯಾತ್ರೆಗೆ ಮೈಸೂರು ಜಿಲ್ಲೆಯಿಂದ 400ಕ್ಕೂ ಹೆಚ್ಚು ಕಾರು ಹಾಗೂ ಇತರೆ ವಾಹನಗಳಲ್ಲಿ ಪ್ರಯಾಣ ಬೆಳೆಸಲಾಗುತ್ತದೆ ಎಂದು ಮೈಸೂರು ದಕ್ಷಿಣ ವಲಯ ಪೊಲೀಸ್ ಉಪ ಮಹಾನಿರೀಕ್ಷಕರಾದ ಬೋರಲಿಂಗಯ್ಯ ಅವರಿಗೆ ಮಾಜಿ ಸಚಿವರು ಹಾಗೂ ಜೆಡಿಎಸ್ ಪಕ್ಷದ ಕಾರ್ಯಾಧ್ಯಕ್ಷರಾದ ಸಾ.ರಾಮಹೇಶ್ ಪತ್ರ ಬರೆದಿದ್ದಾರೆ.

ಜೀವನಾಧಾರ ಕೇಂದ್ರದಿಂದ ಆರ್ಥಿಕ ಸಬಲತೆಗೆ ಕೌಶಲ್ಯ ತರಬೇತಿ

ಸರಗೂರು: ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ವತಿಯಿಂದ ಎನ್.ಬೇಗೂರು ಗ್ರಾಮ ಪಂಚಾಯಿತಿಯಲ್ಲಿ ಉದ್ಯೋಗ ಮಾರ್ಗದರ್ಶನ ಶಿಬಿರವನ್ನು ನಡೆಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ವ್ಯವಸ್ಥಾಪಕ ಚಿನ್ನ ಮಹದೇವ ನಮ್ಮ ಸಂಸ್ಥೆಯ ವತಿಯಿಂದ ಯುವಕರಿಗೆ, ಮಹಿಳೆಯರಿಗೆ ಹಾಗೂ ರೈತರಿಗೆ ಆರ್ಥಿಕ ಸಬಲತೆಗೆ ರೇಷ್ಮೆ ಕೃಷಿ, ಕುರಿ ಮತ್ತು ಮೇಕೆ ಸಾಕಾಣಿಕೆ, ಹಸು ಸಾಕಾಣಿಕೆ, ಕೋಳಿ ಸಾಕಾಣಿಕೆಯಂತಹ ತರಬೇತಿಗಳು ಮತ್ತು ಎಲೆಕ್ಟ್ರಿಷಿಯನ್, ಮೊಬೈಲ್ ರಿಪೇರಿ, ಪ್ಲಂಬಿಂಗ್, ಸ್ಪೋಕನ್ ಇಂಗ್ಲಿಷ್, ಬೇಸಿಕ್ ಕಂಪ್ಯೂಟರ್ ಲೈಫ್ ಸ್ಕಿಲ್, ಜನರಲ್ ಡ್ಯೂಟಿ ಅಸಿಸ್ಟೆಂಟ್, ಪಂಚಕರ್ಮ ಥೆರಫಿ ಮತ್ತು ಯೋಗ ಬೇಸ್ಡ್, ಬ್ಯೂಟಿಷಿಯನ್, ಫ್ಯಾಷನ್ ಡಿಸೈನಿಂಗ್ ನಂತಹ ಸಾಂಸ್ಥಿಕ ತರಬೇತಿಗಳನ್ನು ನೀಡಲಾಗುತ್ತಿದೆ ಎಂದರು.



ಎನ್.ಬೇಗೂರು ಗ್ರಾಮ ಪಂಚಾಯಿತಿಯಲ್ಲಿ ಉದ್ಯೋಗ ಮಾರ್ಗದರ್ಶನ ಶಿಬಿರದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್ಮೆಂಟ್‌ನ ವಿವೇಕ ಗ್ರಾಮೀಣ ಜೀವನಾದಾರ ಕೇಂದ್ರದ ವ್ಯವಸ್ಥಾಪಕರಾದ ಚಿನ್ನಮಹದೇವ ಮಾತನಾಡಿದರು

ಕರ್ನಾಟಕದ 20 ಜಿಲ್ಲೆಗಳಿಂದ ಬಂದು ತರಬೇತಿ ಪಡೆದು ಉತ್ತಮ ಉದ್ಯೋಗವನ್ನು ಮಾಡುತ್ತಿದ್ದಾರೆ. ಪ್ರಸ್ತುತ ಜನರಲ್ ಡ್ಯೂಟಿ ಅಸಿಸ್ಟಂಟ್ ಮತ್ತು ತರಬೇತಿಗೆ ಅರ್ಜಿ ಆಹ್ವಾನ ಮಾಡಲಾಗಿದ್ದು, ಕೆಲವೇ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ಇರುವುದರಿಂದ ಆಶಕ್ತಿ ಇರುವವರು ತ್ವರಿತವಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಅವಕಾಶವಿದೆ. ತರಬೇತಿ ಸಮಯದಲ್ಲಿ ಸಂಸ್ಥೆಯ ವತಿಯಿಂದ ಉಚಿತ ಊಟ ಮತ್ತು ವಸತಿ ನೀಡಲಾಗುತ್ತಿದ್ದು ಉದ್ಯೋಗದ ವ್ಯವಸ್ಥೆಯನ್ನು ಸಹ ಮಾಡಿಕೊಡಲಾಗುತ್ತಿದೆ. ಈ ಕ್ಷೇತ್ರದಲ್ಲಿ ತರಬೇತಿ ಪಡೆದವರಿಗೆ ಉದ್ಯೋಗಕ್ಕೆ ಹೆಚ್ಚು ಅವಕಾಶ ಇರುವುದರಿಂದ ಇದರ ಸದುಪಯೋಗವನ್ನು ಪಡೆದುಕೊಳ್ಳಲು ಯುವಕ ಯುವತಿಯರು ಮುಂದಾಗಬೇಕು ಎಂದು ತಿಳಿಸಿದರು.

ಶಿಬಿರಕ್ಕೆ ಆಗಮಿಸಿದ್ದ ಅಭ್ಯರ್ಥಿಗಳಿಗೆ ಸಂಸ್ಥೆಯಿಂದ ನೀಡಲಾಗುತ್ತಿರುವ ವಿವಿಧ ಕೌಶಲ್ಯ ತರಬೇತಿಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಿ ತರಬೇತಿಗಳಿಗೆ ಆಸಕ್ತಿ ಇರುವವರನ್ನು ನೋಂದಣಿ ಮಾಡಿಕೊಳ್ಳಲಾಯಿತು. ವೇದಿಕೆಯಲ್ಲಿ ಸಮುದಾಯ ಆರೋಗ್ಯ ಅಧಿಕಾರಿ ಶಿವಕುಮಾರಿ, ಸಮುದಾಯ ಪ್ರತಿನಿಧಿ ರಾಜು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಎಸ್.ವಿ.ವೈ.ಎಂನ ವಿವೇಕ ಗ್ರಾಮೀಣ ಜೀವನಧಾರ ಕೇಂದ್ರದ ಸಂಯೋಜಕ ಶಿವಲಿಂಗನಾಯಕ ಬಿ.ಎಂ, ಸಿಬ್ಬಂದಿಗಳಾದ ರಂಗಸ್ವಾಮಿ, ಸುಂದ್ರನಾಯಕ, ಸ್ವಾಮಿ ಹಾಗೂ ಅರ್ಥಿಗಳು ಭಾಗವಹಿಸಿದ್ದರು.

ಶಾಸಕ ಅನಿಲ್ ಚಿಕ್ಕಮಾದುವಿಗೆ ಸಚಿವ ಸ್ಥಾನ ಕೊಡಿ

ಹೆಚ್.ಡಿ.ಕೋಟೆ: ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಹೆಚ್.ಡಿ.ಕೋಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ ಒತ್ತಾಯಿಸಿದ್ದಾರೆ.

ಪಟ್ಟಣದ ಪತ್ರಕರ್ತರ ಸಂಘದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಅತ್ಯಧಿಕ ಮತಗಳ ಮೂಲಕ ಸತತ ಎರಡನೇ ಭಾರಿ ಕಿರಿಯ ವಯಸ್ಸಿನಲ್ಲಿ ವಿಧಾನ ಸಭೆ ಪ್ರವೇಶಿಸುವ ಮೂಲಕ ಜನಸೇವೆ ಮಾಡುತ್ತಿದ್ದಾರೆ. ಜೊತೆಗೆ ಅವರು ತಾಲೂಕಿನ ಅಭಿವೃದ್ಧಿಗಾಗಿ ಪ್ರತಿಯೊಂದು ಹಳ್ಳಿ, ಕಾಡಂಚಿನ ಕಟ್ಟಕಡೆಯ ಗ್ರಾಮಗಳ ಜನರ ಸಮಸ್ಯೆಗಳನ್ನು ಆಲಿಸಿ, ಅವುಗಳನ್ನು ವಿಧಾನ ಸಭೆ ಕಲಾಪಗಳಲ್ಲಿ ಚರ್ಚಿಸಿ, ಸರ್ಕಾರದ ಗಮನಕ್ಕೆ ತಂದು ಸರ್ಕಾರದಿಂದ ಹೆಚ್ಚಿನ ಅನುದಾನ ಮೂಲಕ ತಾಲೂಕಿನ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿದ್ದಾರೆ.



ನಂಜುಂಡಪ್ಪ ವರದಿಯ ಪ್ರಕಾರ ಹೆಚ್.ಡಿ.ಕೋಟೆ ತಾಲೂಕು ಅತೀ ಹಿಂದುಳಿದ ತಾಲೂಕು ಆಗಿದ್ದು, ಈ ಹಣೆಪಟ್ಟಿಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಸಚಿವ ಸ್ಥಾನ ನೀಡಬೇಕು. ಸ್ವಾತಂತ್ರ್ಯ ನಂತರ ಹೆಚ್.ಡಿ. ಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಈವರೆಗೆ ಕೇವಲ ಒಂದು ಬಾರಿ ಮಾತ್ರ ಸಚಿವ ಸ್ಥಾನ ನೀಡಲಾಗಿದೆ. ಹೆಚ್.ಡಿ.ಕೋಟೆ ತಾಲೂಕಿಗೆ ಈ ಬಾರಿ ಸಚಿವ ಸ್ಥಾನ ನೀಡಬೇಕೆಂದು ತಾಲೂಕಿನ ಮಹಾಜನತೆಯ ಅಭಿಪ್ರಾಯವಾಗಿದೆ.

ರಾಜ್ಯದ ನಾಯಕ ಸಮಾಜದ ಹಿರಿಯ ಪ್ರಭಾವಿ ಮುಖಂಡರಾಗಿದ್ದ, ಮಾಜಿ ಶಾಸಕರಾದ ದಿ.ಚಿಕ್ಕಮಾದು ಅವರ ಪುತ್ರರು ಹಾಗೂ ಕೆ.ಪಿ.ಸಿ.ಸಿ ಕಾರ್ಯಾಧ್ಯಕ್ಷ ಮಾಜಿ ಸಂಸದ ದಿ.ಆರ್.ದ್ರುವನಾರಾಯಣ ಶಿಷ್ಯ ಅನಿಲ್ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಪಕ್ಷದ ವರಿಷ್ಠರುಗಳನ್ನು ಕಾಂಗ್ರೆಸ್ ಪಕ್ಷ ಒತ್ತಾಯಿಸುತದೆ.

ಸುದ್ದಿ ಗೋಷ್ಠಿಯಲ್ಲಿ ಸರಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮನುಗನಹಳ್ಳಿ ಮಾದಪ್ಪ, ಕೋಟೆ ವಿಧಾನಸಭಾ ಯುವ ಕಾಂಗ್ರೆಸ್ ಅಧ್ಯಕ್ಷ ಕಂದೇಗಾಲ ಶಿವರಾಜ್, ಪ್ರಧಾನ ಕಾರ್ಯದರ್ಶಿ ಚಾಮರಾಜು, ಟೌನ್ ಅಧ್ಯಕ್ಷ ಸ್ಟುಡಿಯೋ ಪ್ರಕಾಶ್, ಇದ್ದರು.

ಗೌರಿ–ಗಣೇಶ, ಈದ್ ಮಿಲಾದ್ ಹಬ್ಬ ಶಾಂತಿಯುತ ಆಚರಣೆಗೆ ಶಾಂತಿ ಸಭೆ

ಹುಣಸೂರು: ಗ್ರಾಮಾಂತರ ಪೊಲೀಸ್ ಠಾಣೆ ವತಿಯಿಂದ ರತ್ನಪುರಿ ಗ್ರಾಮದ ಗಣಪತಿ ದೇವಸ್ಥಾನದ ಆವರಣದಲ್ಲಿ ಗೌರಿ–ಗಣೇಶ ಹಾಗೂ ಈದ್ ಮಿಲಾದ್ ಹಬ್ಬದ ಪ್ರಯುಕ್ತ ಶಾಂತಿ ಸಭೆ ನಡೆಸಲಾಯಿತು.

ಸಭೆಯಲ್ಲಿ ಮಾತನಾಡಿದ ಸರ್ಕಲ್ ಇನ್ಸ್‌ಪೆಕ್ಟರ್ ಮುನಿಯಪ್ಪ ಗ್ರಾಮದ ಪ್ರಮುಖ ಮುಖಂಡರು ಹಾಗೂ ಸಂಘ ಸಂಸ್ಥೆಯ ಪ್ರತಿನಿಧಿಗಳು, ಕಾನೂನಿನ ಅಡಿಯಲ್ಲಿ ನಾವುಗಳು ಒಗ್ಗಟಾಗಿ ಸೇರಿಕೊಂಡು ಗಣೇಶ ಹಾಗೂ ಈದ್ ಮಿಲಾದ್ ಹಬ್ಬವನ್ನು ಶಾಂತಿಯುತವಾಗಿ ಆಚರಣೆ ಮಾಡಿಕೊಂಡು ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಹಬ್ಬವನ್ನು ಆಚರಣೆ ಮಾಡಬೇಕು ಎಂದರು

ಗಣೇಶ ಮೂರ್ತಿಗಳ ವಿಸರ್ಜನೆಗೆ ಸಣ್ಣ ಪುಟ್ಟ ಮಕ್ಕಳು ಮೆರವಣಿಗೆ ಹೋಗದಂತೆ ಪೋಷಕರು ಗಮನಹರಿಸಿ ಹಾಗೂ ಮೂರ್ತಿಗಳ ವಿಸರ್ಜನೆಗೆ ನಮ್ಮ ಇಲಾಖೆ ಬೇಕಾದ ಅಗತ್ಯ ಸಿಬಂದಿಯನ್ನು ನಿಯೋಜನೆ ಮಾಡಲಾಗುವುದು. ಪಿಒಪಿ ಗಣೇಶ ಮೂರ್ತಿಗಳನ್ನು ನಿಷೇಧಿಸಿದ್ದು, ಯಾರೂ ಕೂಡಾ ಪಿಒಪಿ ಗಣೇಶ ಮೂರ್ತಿಗಳನ್ನು ಖರೀದಿಸದೇ ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಬೇಕು.



ಶಾಂತಿ ಸಭೆಯಲ್ಲಿ ಮಾತನಾಡುತ್ತಿರುವ ಸರ್ಕಲ್ ಇನ್ಸ್‌ಪೆಕ್ಟರ್ ಮುನಿಯಪ್ಪ.

ವಿಸರ್ಜನೆ ಸಂದರ್ಭದಲ್ಲಿ ತ್ಯಾಜ್ಯವನ್ನು ಒಂದು ನಿಗದಿಪಡಿಸಿದ ಸ್ಥಳದಲ್ಲಿ ಹಾಕಬೇಕು ಎಂದು ಸಲಹೆ ನೀಡಿದರು.

ಗ್ರಾಮದಲ್ಲಿ ಗಲಭೆ ಸೃಷ್ಟಿ ಮಾಡುವರನ್ನು ಪತ್ತೆ ಹಚ್ಚಿ ಪೊಲೀಸ್ ಇಲಾಖೆಯ ಗಮನಕ್ಕೆ ತರಬೇಕೆಂದು ತಿಳಿಸಿದರು ಹಬ್ಬದ ವೇಳೆ ಬಂಟಿಂಗ್ಸ್, ಫ್ಲೆಕ್ಸ್ ಅಳವಡಿಸಲು ನಿಗದಿತ ಸ್ಥಳಗಳಲ್ಲಿ ಮಾತ್ರ ಅನುಮತಿ ಪಡೆದು ಅಳವಡಿಸಬೇಕೆಂದು ಸೂಚಿಸಲಾಗಿದೆ.

ಗ್ರಾಮದ ಮುಖಂಡರಾದ ಸುದರ್ಶನ್ ಸಿಂಗ್, ದೀಪು, ಶ್ರೀಧರ್ ರಾವ್ ಶಿಂಧೆ, ಚಾಂದ್ ಪಾಷ, ಅಲ್ತಾಪ್ ಷರೀಪ್, ಇರ್ಷದ್ ಅಲಿ ಖಾನ್, ಪ್ರೊಬೆಷನರಿ ಸಬ್ ಇನ್ಸ್‌ಪೆಕ್ಟರ್ ಈಶ್ವರ್ ಪೊಲೀಸ್ ಸಿಬ್ಬಂದಿ ಮಂಜುನಾಥ ವಿ.ಜೆ ಹಾಜರಿದ್ದರು.

ರೈತರ ಅಭಿವೃದ್ಧಿಗೆ ಕೃಷಿ ಸಹಕಾರ ಸಂಘದ ಸದಸ್ಯರ ಸಹಕಾರ ಅಗತ್ಯ

ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಇಂದ್ರೇಶ್ ಮನವಿ

ತಿ.ನರಸೀಪುರ, ಆ.23– ಗ್ರಾಮೀಣ ಪ್ರದೇಶದಲ್ಲಿ ಕೃಷಿ ಚಟುವಟಿಕೆಯಲ್ಲಿ ನಿರತರಾಗಿರುವ ರೈತಾಪಿ ವರ್ಗದ ಅನುಕೂಲತೆಗೆ ತಕ್ಕಂತೆ ಮತ್ತು ಅವರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲು ಸಂಘದ ಸರ್ವ ಸದಸ್ಯರ ಸಹಕಾರ ಅಗತ್ಯ ಎಂದು ಚಿದರವಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಇಂದ್ರೇಶ್ ಹೇಳಿದರು.

ತಾಲೂಕಿನ ಚಿದರವಳ್ಳಿ ಗ್ರಾಮದ ಶ್ರೀ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಸಂಘದ 2024–25 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು



ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಇಂದ್ರೇಶ್ ಮಾತನಾಡಿದರು.

ಗ್ರಾಮಾಂತರ ಭಾಗದಲ್ಲಿ ಕೃಷಿ ಚಟುವಟಿಕೆಗಳಲ್ಲಿ ಸದಾ ತೊಡಗಿಸಿಕೊಂಡಿರುವ ರೈತರ ಏಳ್ಗೆಗಾಗಿ ಕೃಷಿ ಪತ್ತಿನ ಸಹಕಾರ ಸಂಘಗಳು ಸದಾ ಶ್ರಮಿಸುತ್ತಿದ್ದು, ಮುಂದಿನ ದಿನಗಳಲ್ಲಿಯೂ ಸಂಘದ ಸರ್ವ ಸದಸ್ಯರು ಇದೇ ರೀತಿಯ ಸಹಕಾರ ನೀಡಿದರೆ ಇನ್ನಷ್ಟು ಲಾಭದಾಯಕವಾಗಿ ಮುನ್ನಡೆಸಲು ಸಾಧ್ಯ ಎಂದರು. ಮುಂದಿನ ದಿನಗಳಲ್ಲಿ ಸಂಘದ ನೂತನ ಕಟ್ಟಡ ನಿರ್ಮಾಣ ಮಾಡಬೇಕೆಂಬ ಉದ್ದೇಶ ಹೊಂದಲಾಗಿದ್ದು ಸದಸ್ಯರು ಹಾಗೂ ಷೇರುದಾರರು ತಮ್ಮಕೈಲಾದಷ್ಟು ದೇಣಿಗೆ ನೀಡಿ ಸಂಘದ ನೂತನ ಕಟ್ಟಡ ನಿರ್ಮಾಣಕ್ಕೆ ಸಹಕರಿಸುವಂತೆ ಮನವಿ ಮಾಡಿದರು.

ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸಿ.ಪಿ.ರಾಜೇಂದ್ರ ಪ್ರಸಾದ್ ಸಂಘದ ವಾರ್ಷಿಕ ವರದಿ ಮಂಡಿಸಿ 2024–25 ನೇ ಸಾಲಿನಲ್ಲಿ ಸಂಘವು 2.21 ಲಕ್ಷ ರೂ. ಗಳ ನಿವ್ವಳ ಲಾಭಗಳಿಸಿ ಯಶಸ್ವಿಯಾಗಿ ಮುನ್ನಡೆಯುತ್ತಿದೆಯಾದರೂ 13 ಮಂದಿ ಸಂಘದಿಂದ ಸಾಲ ಪಡೆದು ಸುಸ್ತಿದಾರರಾಗಿ ದ್ದಾರೆ. ಅವರಿಂದ 10 ಲಕ್ಷ 52 ಸಾವಿರ ರೂ.ಗಳ ಬಾಕಿ ಬರಬೇಕಿದೆ. ಅನೇಕ ಬಾರಿ ಸುಸ್ತಿದಾರರಿಗೆ ನೋಟಿಸ್ ನೀಡಲಾಗಿದೆ. ಕೆಲವರು ಸಾಲ ಕಟ್ಟಿದ್ದರೆ,ಮತ್ತೆ ಕೆಲವರು ನಿರ್ಲಕ್ಷ್ಯ ತೋರಿದ್ದಾರೆ. ಹಾಗಾಗಿ ಸುಸ್ತಿದಾರರ ಷೇರು ಅಮೌಂಟ್ ಹಾಗೂ ಅವರ ವ್ಯವಹಾರಗಳನ್ನು ಸ್ಥಗಿತಗೊಳಿಸಲಾಗುತ್ತದೆ ಎಂದರು.

ನೂತನ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ನೀಡುವಂತೆ ಅಧ್ಯಕ್ಷರು ಮಾಡಿದ ಮನವಿ ಕೆಲ ಕಾಲ ಗೊಂದಲಕ್ಕೆ ಎಡೆ ಮಾಡಿಕೊಟ್ಟಿತು. ಜಿಲ್ಲಾ ಸಂಘದ ಎಲೆಕ್ಷನ್‌ನಲ್ಲಿ ಮತ ಹಾಕಲು 5 ಲಕ್ಷ ಪಡೆದಿದ್ದೀರಲ್ಲ. ಅದನ್ನು ಕಟ್ಟಡ ನಿರ್ಮಾಣಕ್ಕೆ ಬಳಸಿಕೊಳ್ಳಬಹುದಿತ್ತು ಎಂದು ಷೇರುದಾರರು ಆಡಿದ ಮಾತು ಕೆಲ ಕಾಲ ಗೊಂದಲ ಸೃಷ್ಟಿಸಿತು.ನಂತರ ಮಾತನಾಡಿದ ಅಧ್ಯಕ್ಷರು ಸಹಕಾರ ಸಂಘದಿಂದ ಸಾಲ ಪಡೆದ ರೈತರು ಯಾವುದೇ ಕಾರಣಕ್ಕೂ ಸುಸ್ತಿದಾರರಾಗದೇ ಪಡೆದ ಸಾಲವನ್ನು ಕಾಲಕಾಲಕ್ಕೆ ಮರು ಪಾವತಿ ಮಾಡುವ ಮೂಲಕ ಸಂಘದ ಬೆಳವಣಿಗೆಗೆ ಸಹಕರಿಸುವಂತೆ ಮನವಿ ಮಾಡಿದರು.

ಈ ವೇಳೆ ಸಂಘದ ಉಪಾಧ್ಯಕ್ಷ ಹೆಚ್.ಟಿ.ಮಹದೇವ, ಆರ್.ಜಿ.ಶಿವಮೂರ್ತಿ, ಸಿದ್ದು, ಜೆ.ವಿಜಯಕುಮಾರ್, ಮಹದೇವ, ಚೌಡಯ್ಯ, ಗೌರಮ್ಮ ಬಿ.ಲಕ್ಷ್ಮಿ, ಪಾರ್ವತಮ್ಮ, ಸಿ.ಎಸ್.ನವೀನ್ ಕುಮಾರ್, ಡೈರಿ ಕಾರ್ಯದರ್ಶಿ ರವಿ, ಮಲ್ಲೇಶ್ ಕುಮಾರ್ ಸೇರಿದಂತೆ ಷೇರುದಾರರು ಗ್ರಾಮಸ್ಥರು ಹಾಜರಿದ್ದರು.

ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಕೆ.ಎಂ.ವಿಜಯ್ ಸಾಧನೆ



ಗೋವಾದಲ್ಲಿ ನಡೆದ 2025–26ನೇ ಸಾಲಿನ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಮೈಸೂರಿನ ರತ್ನ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಕಾಲೇಜಿನ ಎಂಐಟಿ ವಿದ್ಯಾರ್ಥಿ, ಕೆ.ಆರ್. ನಗರ ಪಟ್ಟಣದ ಆಂಜನೇಯನ ಬಡಾವಣೆಯ ಎನ್.ಮಂಜುನಾಥ್ ಮತ್ತು ಸರಿತ ದಂಪತಿ ಪುತ್ರ ಕೆ.ಎಂ.ವಿನಯ್ ಅವರು 400 ಮೀಟರ್ ಓಟ ಹಾಗೂ 60 ಮೀಟರ್ ಕಪ್ಪೆ ಜಿಗಿತದಲ್ಲಿ ಪ್ರಥಮ ಸ್ಥಾನ ಪಡೆದ ಹಿನ್ನೆಲೆಯಲ್ಲಿ ಪುರಸಭೆ ಸದಸ್ಯರಾದ ಸಂತೋಷ್ ಗೌಡ, ಕೆ.ಉಮೇಶ್ ಹಾಗೂ ಜಾದಳ ವಕ್ತಾರ ಕೆ.ಎಲ್.ರಮೇಶ್ ಪಟ್ಟಣದ ನಾಗರಿಕರ ಪರವಾಗಿ ಅಭಿನಂದಿಸಿದರು.

ಸಾಲ ಪಾವತಿಸಿ, ಸಹಕಾರ ಸಂಘ ಅಭಿವೃದ್ಧಿಗೆ ಸಹಕರಿಸಿ



ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಎಂ.ಕುಮಾರಸ್ವಾಮಿ ಮಾತನಾಡಿದರು.

ತಿ.ನರಸೀಪುರ, ಆ.23– ಸಹಕಾರ ಸಂಘದಿಂದ ಸಾಲ ಪಡೆದ ರೈತರು ಸಕಾಲಕ್ಕೆ ಸಾಲ ಮರು ಪಾವತಿ ಮಾಡಿದಾಗ ಮಾತ್ರವೇ ಸಂಘ ಅಭಿವೃದ್ಧಿ ಪಥದತ್ತ ಸಾಗಲು ಸಾಧ್ಯ ಎಂದು ನೆರಗ್ಯಾತನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಕುಮಾರಸ್ವಾಮಿ ಹೇಳಿದರು.

ತಾಲೂಕಿನ ನೆರಗ್ಯಾತನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ನಡೆದ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಹಕಾರ ಸಂಘದಲ್ಲಿ ಹಲವು ಸುಸ್ತಿದಾರರಿದ್ದು, ಲಕ್ಷಾಂತರ ಹಣ ಬಾಕಿ ಉಳಿದುಕೊಂಡಿದೆ. ಪಡೆದ ಸಾಲ ಮರು ಪಾವತಿ ಮಾಡದೇ ಇರುವುದರಿಂದ ಸಂಘವು ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಕಾಣಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಒಂದೇ ಬಾರಿ ಪಡೆದಿರುವವರು ಸಾಲ ಪಾವತಿ ಮಾಡಿದರೆ ಸಂಘವು ರಿಯಾಯಿತಿ ನೀಡುತ್ತದೆ. ಹಾಗಾಗಿ ಸಂಘದ ಸದಸ್ಯರು ಸಾಲವನ್ನು ಪಾವತಿಸಿ ಸಂಘದ ಏಳಿಗೆಗೆ ಸಹಕರಿಸಬೇಕೆಂದರು.

ಸಂಘದ ಸದಸ್ಯರು ಆಸ್ಪತ್ರೆಗೆ ದಾಖಲಾಗಬೇಕಿದ್ದಲ್ಲಿ ಯಶಸ್ವಿನಿ ಕಾರ್ಡ್‌ಗಾಗಿ ಸಂಘಕ್ಕೆ ಪಾವತಿಸಿದ ಹಣದ ರಶೀದಿಯನ್ನು ಪ್ರಸ್ತುತ ಪಡಿಸಿದರೆ ಮೇಲಧಿಕಾರಿಗಳಿಗೆ ಕರೆ ಮಾಡಿ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುವುದಾಗಿ ಅವರು ಭರವಸೆ ನೀಡಿದರು.

ಸಂಘದ ಕಾರ್ಯ ನಿರ್ವಾಹಕ ಅಧಿಕಾರಿ ಎನ್.ಎಸ್.ಧನಂಜಯ 2024–25 ಸಾಲಿನ ವಾರ್ಷಿಕ ವರದಿ ಮಂಡಿಸಿ ಸಂಘವು 4.60 ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿರುವುದಾಗಿ ತಿಳಿಸಿದರು.

ಸಭೆಯಲ್ಲಿ ಉಪಾಧ್ಯಕ್ಷೆ ಕೆಂಪಮ್ಮಣ್ಣಿ, ಎಂ.ಪುಟ್ಟಸ್ವಾಮಿ, ಡೈರಿ ಗುರುಮೂರ್ತಿ, ನಾಗೇಶ್, ಕೆ.ವಿ.ರುದ್ರಸ್ವಾಮಿ, ಪ್ರೇಮಾ, ಮುದ್ದಯ್ಯ, ಬಸವರಾಜಪ್ಪ ಶಿವಮ್ಮ ಮಹದೇವಮ್ಮ, ಗುರುಸ್ವಾಮಿ, ಜಿಲ್ಲಾ ಬ್ಯಾಂಕ್ ಮೇಲ್ವಿಚಾರಕ ಎನ್.ಎಸ್.ಸ್ವಾಮಿ, ಗುಮಾಸ್ತೆ ಎಂ.ಮನು ಕಂಪ್ಯೂಟರ್ ಆಪರೇಟರ್ ಎನ್.ಮಮತಾ ಹಾಜರಿದ್ದರು

ಒಳ ಮೀಸಲಾತಿ ಜಾರಿಗೊಳಿಸಿದ ಸಿಎಂ ಸಿದ್ದರಾಮಯ್ಯಗೆ ಅಭಿನಂದನೆ

ಮಾದಿಗ ಸಮುದಾಯಕ್ಕೆ ಈಗ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಶಕ್ತಿ ಬಂದಿದೆ

ತಿ.ನರಸೀಪುರ, ಆ.23, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಒಳ ಮೀಸಲಾತಿ ಜಾರಿಗೊಳಿಸುವ ಮೂಲಕ ಮಾದಿಗ ಸಮಾಜದವರಿಗೆ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಶಕ್ತಿ ತುಂಬಿದೆ ಎಂದು ತಾಲೂಕು ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಹೇಳಿದರು.

ಒಳ ಮೀಸಲಾತಿ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಮರಯ್ಯ ಮುಖ್ಯಮಂತ್ರಿಗೆ ಅಭಿನಂದನೆ ಸಲ್ಲಿಸಿ ಪತ್ರಕರ್ತರೊಂದಿಗೆ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗ ರಚಿಸಿ ಸಂಪುಟದಲ್ಲಿ ಚರ್ಚೆ ಮಾಡಿ ಮಾದಿಗ ಸಮಾಜಕ್ಕೆ ಶೇ6 ರಷ್ಟು ಒಳ ಮೀಸಲಾತಿ ನೀಡುವ ದಿಟ್ಟ ನಿರ್ಧಾರ ತೆಗೆದುಕೊಂಡ ರಾಜ್ಯ ಸರ್ಕಾರಕ್ಕೆ ಮಾದಿಗ ಸಮಾಜದ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಸದಾಶಿವ ಆಯೋಗದ ವರದಿ ಜಾರಿ ಮಾಡುವುದಿಲ್ಲ ಎಂಬ ವಿರೋಧ ಪಕ್ಷಗಳ ಆರೋಪಕ್ಕೆ ಸಿದ್ದರಾಮಯ್ಯ ಒಳಮೀಸಲಾತಿ ಜಾರಿಮಾಡುವ ಮೂಲಕ ಉತ್ತರ ನೀಡಿದ್ದು, ಸಿದ್ದರಾಮಯ್ಯ ಅವರು ನುಡಿದಂತೆ ನಡೆದಿದ್ದಾರೆ, ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಾದಿಗ ಸಮಾಜದ ವಿರೋಧಿಯಾಗಿದ್ದು ಒಳ ಮೀಸಲಾತಿ ಜಾರಿಗೆ ಅಡ್ಡಿ ಪಡಿಸುತ್ತಾರೆಂದು ವಿಪಕ್ಷಗಳು ಇಲ್ಲ ಸಲ್ಲದ ಹೇಳಿಕೆ ಮೂಲಕ ಮುಜುಗರ ಉಂಟು ಮಾಡಿದ್ದವು. ಆದರೆ ಸಿದ್ದರಾಮಯ್ಯ ಮತ್ತು ಹೆಚ್.ಸಿ.ಮಹದೇವಪ್ಪ ಒಂದೇ ನಾಣ್ಯದ ಎರಡು ಕಣ್ಣುಗಳಿದ್ದಂತೆ, ಒಳ ಮೀಸಲಾತಿ ಜಾರಿಯಲ್ಲಿ ಮಹದೇವಪ್ಪರವರ ಶ್ರಮ ಕೂಡ ಇದೆ ಎಂದರು.



ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಜಾರಿಗೊಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಾದಿಗ ಸಮಾಜದ ಪರವಾಗಿ ತಿ.ನರಸೀಪುರ ತಾಲೂಕು ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಅಭಿನಂದಿಸಿದರು.

ಮಾದಿಗ ಸಂಘಟನೆಯು ಹಲವು ದಶಕಗಳಿಂದ ಒಳ ಮೀಸಲಾತಿ ಜಾರಿಗೊಳಿಸುವಂತೆ ನಿರಂತರವಾದ ಹೋರಾಟ ಮಾಡುತ್ತಾ ಬಂದಿತ್ತು. ನ್ಯಾಯಾಲಯದಲ್ಲೂ ಈ ಸಂಬಂಧವಾದ ಮಂಡನೆ ಮಾಡಲಾಗಿತ್ತು. ಅಂತಿಮವಾಗಿ ಕೇಂದ್ರದ ಉನ್ನತ ನ್ಯಾಯಾಲಯ ರಾಜ್ಯ ಸರ್ಕಾರಕ್ಕೆ ಒಳ ಮೀಸಲಾತಿ ಜಾರಿಗೊಳಿಸುವಂತೆ ಸೂಚನೆ ನೀಡಿತ್ತು. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನಾಗಮೋಹನ್ ದಾಸ್ ಆಯೋಗದ ವರದಿಯಂತೆ ಎಡಗೈನ ಮಾದಿಗ ಸಮಾಜಕ್ಕೆ ಶೇ6 ರಷ್ಟು ಒಳ ಮೀಸಲಾತಿ ನೀಡಿದೆ.ಮಾದಿಗ ಸಮುದಾಯದ ಪ್ರತಿಯೊಬ್ಬರೂ ಸರ್ಕಾರದ ನಿರ್ಧಾರವನ್ನು ಸ್ವಾಗತಿಸುತ್ತೇವೆ ಹಾಗು ವರದಿ ಅನುಷ್ಠಾನಕ್ಕೆ ಶ್ರಮಿಸಿದ ಎಲ್ಲ ಸಚಿವರು, ಶಾಸಕರಿಗೂ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಮಹದೇವಪ್ಪ ಮಾದಿಗ ಸಮಾಜದ ವಿರೋಧಿಯಲ್ಲ.!: ಪ.ಜಾತಿಯ ಶೇ.17 ರ ಮೀಸಲಾತಿಯನ್ನು ಸಮಾನವಾಗಿ ಹಂಚಿಕೆ ಮಾಡಿರುವ ಸಿದ್ದರಾಮಯ್ಯರವರ ನಿರ್ಧಾರದಿಂದ ಮಾದಿಗ ಸಮಾಜಕ್ಕೆ ಆರ್ಥಿಕ, ಶೈಕ್ಷಣಿಕ ಹಾಗು ಸಾಮಾಜಿಕವಾಗಿ ಹೆಚ್ಚಿನ ಬಲ ಬಂದಿದ್ದು, ಮುಂದೆ ಯಾವುದೇ ಸಂದರ್ಭದಲ್ಲಿ ಚುನಾವಣೆ ಬಂದರೂ ಮಾದಿಗ ಸಮಾಜ ಅವರ ಬೆಂಬಲಕ್ಕೆ ನಿಲ್ಲಲಿದೆ, ಮಹದೇವಪ್ಪರ ವರೂ ಕೂಡ ಮಾದಿಗ ಸಮಾಜದ ವಿರೋಧಿಯಲ್ಲ ಹಾಗಾಗಿ ಅವರಿಗೂ ನಮ್ಮ ಬೆಂಬಲವಿದೆ ಎಂದರು.

ವರುಣಾ ಕ್ಷೇತ್ರದಲ್ಲಿ ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯರವರು ಮಿಂಚಿನ ಸಂಚಾರದ ಮೂಲಕ ಪ್ರತಿ ಗ್ರಾಮಗಳಿಗೆ ಭೇಟಿ ನೀಡಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ನಂಜನಗೂಡಿನಿಂದ ತಿ.ನರಸೀಪುರ ಹಾಗು ತಿ.ನರಸೀಪು ರದಿಂದ ಮೈಸೂರಿನ ವರೆಗೂ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುವ ಮೂಲಕ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ಈ ವೇಳೆ ಮಾಜಿ ಸಚಿವ ಹೆಚ್.ಆಂಜನೇಯ, ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ, ಕೆಡಿಪಿ ಸದಸ್ಯ ದಿವಾಕರ್ ಸೇರಿದಂತೆ ಮತ್ತಿತರರಿದ್ದರು.

ಪರಿಸರ ಸ್ನೇಹಿ ಗಣಪನ ಮಾಡಿ ಖುಷಿಪಟ್ಟ ವಿವಿಧ ಶಾಲಾ ಮಕ್ಕಳು





ಮೈಸೂರು ಆಲನಹಳ್ಳಿಯ ಶ್ರೀ ಬಸವೇಶ್ವರ ಯೋಗ ಪಾರ್ಕ್‌ನಲ್ಲಿ ನಡೆದ ಪರಿಸರ ಸ್ನೇಹಿ ಮಣ್ಣಿನ ಗಣಪತಿ ಮಾಡುವ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ವಿವಿಧ ಶಾಲೆಯ ವಿದ್ಯಾರ್ಥಿಗಳು, ತಾವು ತಯಾರಿಸಿದ ಗಣಪತಿ ಮೂರ್ತಿಗಳನ್ನು ಪ್ರದರ್ಶಿಸಿದರು.

ಮೈಸೂರು, ಆ.23– ಮೈಸೂರಿನ ಪರಿಸರ ಬಳಗವು ರಾಜೀವ್ ಸ್ನೇಹ ಬಳಗ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿ ಸಹ ಯೋಗದಲ್ಲಿ ಶಾಲಾ ಮಕ್ಕಳಿಗೆ ಪರಿಸರ ಸ್ನೇಹಿ ಮಣ್ಣಿನ ಗಣಪತಿ ಮಾಡುವ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಆಲನಹಳ್ಳಿಯ ಶ್ರೀ ಬಸವೇಶ್ವರ ಯೋಗ ಪಾರ್ಕ್‌ನಲ್ಲಿ ಎರಡು ದಿನ ನಡೆದ ಕಾರ್ಯಾಗಾರದಲ್ಲಿ ಜೆಎಸ್‌ಎಸ್ ಸಂಸ್ಥೆಯ ನಾಲ್ಕು ಶಾಲೆಗಳು, ಮಹಾವೀರ ಜೈನ್ ವಿದ್ಯಾಲಯ, ಈಶ್ವರ ವಿದ್ಯಾಲಯ, ಆಲನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ವಿವೇಕ ವಿದ್ಯಾಲಯ, ಎಸ್‌ಎನ್‌ಎಸ್ ಶಾಲೆ, ಶಾಶ್ವತ ಸೇವಾ ಶಾಲೆ ಸೇರಿದಂತೆ 12ಕ್ಕೂ ಹೆಚ್ಚು ಶಾಲೆಯ 4ರಿಂದ 9ನೇ ತರಗತಿವರೆಗಿನ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ, ಮಣ್ಣಿನ ಗಣಪತಿ ಮೂರ್ತಿ ಮಾಡುವುದನ್ನು ಕಲಿತರು.

ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಇಂತಹ ರಚನಾತ್ಮಕ ಕಾರ್ಯಕ್ರಮಗಳು ಮಕ್ಕಳು ಮತ್ತು ಸಾರ್ವಜನಿಕರಿಗೆ ಪರಿಸರ ಜಾಗೃತಿ ಮೂಡಿಸುವಲ್ಲಿ ಸಹಕಾರಿಯಾಗುತ್ತವೆ. ಇಂತಹ ಚಟುವಟಿಕೆಗಳು ಇನ್ನೂ ಹೆಚ್ಚಾಗಬೇಕು. ಆಡಂಬರ, ಅಬ್ಬರ, ತೋರಿಕೆಗಾಗಿ ಗಣಪತಿ ಉತ್ಸವ ಮಾಡುವುದಕ್ಕಿಂತ ಪರಿಸರ ಸ್ನೇಹಿಯಾದ ನೈಸರ್ಗಿಕ ಗಣಪತಿ ಮೂರ್ತಿಯ ಉತ್ಸವ ನಡೆಯಬೇಕು ಎಂದು ಆಶಿಸಿದರು.

ಪರಿಸರ ಬಳಗದ ಸಂಸ್ಥಾಪಕ ಸದಸ್ಯ ಪರಶುರಾಮೇಗೌಡ ಮಾತನಾಡಿ, ಪಿಓಪಿ ಮತ್ತು ರಾಸಾಯನಿಕ ಬಣ್ಣದ ಗಣಪತಿ ಮೂರ್ತಿಗಳನ್ನು ಪೂಜಿಸಿ, ಅವುಗಳನ್ನು ಜಲ ಮೂಲಗಳಲ್ಲಿ ವಿಸರ್ಜನೆ ಮಾಡುವುದು ಬಹಳ ಅಪಾಯಕಾರಿ. ಜಿಪ್ಸಮ್ ಯುಕ್ತ ಪಿಓಪಿಯಲ್ಲಿ ಕ್ಯಾಲ್ಸಿಯಂ ಸಲ್ಫೇಟ್ ಹೆಮಿಹೈಡ್ರೇಟ್ ರಾಸಾಯನಿಕವಿದ್ದು, ಅದರಿಂದ ಮಾಡಿದ ಮೂರ್ತಿಗಳು ನೀರಿನಲ್ಲಿ ಕರಗುವುದಿಲ್ಲ. ಇನ್ನು ಬಣ್ಣದ ಗಣಪತಿ ಮೂರ್ತಿಗಳಿಗೆ ಬಳಸುವ ಬಣ್ಣದಲ್ಲಿ ಸೀಸ, ಪಾದರಸ ಮತ್ತು ಕ್ಯಾಡ್ಮಿಯಂ ರಾಸಾಯನಿಕಗಳಿದ್ದು, ಅಂತಹ ಮೂರ್ತಿಗಳನ್ನು ವಿಸರ್ಜನೆ ಮಾಡುವುದರಿಂದ ನೀರು ವಿಷಮಯವಾಗುತ್ತದೆ. ಆ ನೀರು ಬಳಸುವ ಜನ–ಜಾನುವಾರುಗಳ ಆರೋಗ್ಯಕ್ಕೆ ಹಾನಿಯುಂಟಾಗುತ್ತದೆ ಎಂದು ವಿವರಿಸಿದರು.

ನಮ್ಮ ಸಂಪ್ರದಾಯ ಹಾಗೂ ಆಚರಣೆಗಳು ಪರಿಸರಕ್ಕೆ ಪೂರಕವಾಗಿರಬೇಕು. ಗೌರಿ–ಗಣೇಶ ಹಬ್ಬದಲ್ಲಿ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಪೂಜಿಸುವುದರಲ್ಲಿ ಪರಿಸರ ಕಾಳಜಿ ಇರಬೇಕು. ಆದ್ದರಿಂದ ಪಿಓಪಿ ಹಾಗೂ ರಾಸಾಯನಿಕ ಬಣ್ಣದ ಗೌರಿ–ಗಣಪತಿ ಮೂರ್ತಿಗಳ ಬದಲಾಗಿ ಮಣ್ಣು, ಗೋಧಿ, ಅಕ್ಕಿ ಹಿಟ್ಟು, ಅರಿಶಿನ, ಬೆಲ್ಲ ಮುಂತಾದ ನೈಸರ್ಗಿಕ ವಸ್ತುಗಳಿಂದ ತಯಾರಿಸಿದ ಗೌರಿ–ಗಣಪತಿ ಮೂರ್ತಿಗಳನ್ನು ಪೂಜಿಸಬೇಕು ಎಂದು ಮಕ್ಕಳಿಗೆ ಸಲಹೆ ನೀಡಿದರು.

ಕಾರ್ಯಾಗಾರದಲ್ಲಿ ಪರಿಸರ ಬಳಗದ ಗಂಟಯ್ಯ(ಕೃಷ್ಣಪ್ಪ), ಲೀಲಾ ಶಿವಕುಮಾರ್, ಭಾಗ್ಯ, ರವಿ ಬಳೆ, ಮೈಸೂರು ಮಠ್, ಶೈಲಜೇಶ್, ಕಸ್ತೂರಿ, ಗಾಯತ್ರಿ, ಮಧುಶ್ರೀ, ವರ್ಷಿಣಿ, ಕಲಾ, ಶಂಕರ್, ವೆಂಕಟೇಶ್, ಅಕ್ಬರ್, ಬಂಗಾರನಾಯಕ, ಕೋಮಲ, ಕೃಷ್ಣ ಅರಸ್, ಪೂರ್ಣಿಮಾ, ಶ್ರೀಲಕ್ಷ್ಮೀ ಶಿವಕುಮಾರ್, ಲೋಲಕುಮಾರ್, ಚರಣ್, ಪ್ರಭಾ ನಂದೀಶ್, ಇಂದಿರಾ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಇಂದ್ರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕೂಲಿ (ಕ) + ಕೂಲಿ (ತ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವಾರ್ –2 (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ವಾರ್–2 (ತೆ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಹಚ್ಚೆ (ಕ) + ವಾರ್–2 (ತೆ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಜಸ್ಟ್ ಮ್ಯಾರಿಡ್ (ಕ) + ಕಮರೊ2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರನ್ ಫಾರ್ ಗಣೇಶ ; ಸೇ ನೋ ಟು ಡ್ರಗ್ಸ್
ಇಂದು ಮಾದಕ ದ್ರವ್ಯ ವಿರುದ್ಧ ಜಾಗೃತಿ ಓಟ



ಮೈಸೂರಿನ ಕುವೆಂಪುನಗರದ ಕಾಮಾಕ್ಷಿ ಆಸ್ಪತ್ರೆಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ (ಎಡದಿಂದ 2ನೇಯವರು) ಕಾಮಾಕ್ಷಿ ಆಸ್ಪತ್ರೆಗಳ ವ್ಯವಸ್ಥಾಪಕ ಟ್ರಸ್ಟಿ ಎಂ.ಮಹೇಶ್ ಶೆಣೈ ಮಾತನಾಡಿದರು. (ಎಡದಿಂದ) ಕಾಮಾಕ್ಷಿ ಆಸ್ಪತ್ರೆಗಳ ಜಂಟಿ ವ್ಯವಸ್ಥಾಪಕ ಟ್ರಸ್ಟಿ ಗಜಾನನ ಶೆಣೈ, ವೈದ್ಯಕೀಯ ಅಧೀಕ್ಷಕ ಡಾ.ಸಿ.ಉಮೇಶ್ ಕಾಮತ್, ಪ್ರಧಾನ ವ್ಯವಸ್ಥಾಪಕ ಎನ್.ವಿ.ಪ್ರಸನ್ನಕುಮಾರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಆ.23(ಪಿಎಂ)– ಶ್ರೀ ಜನ ಜಾಗರಣ ಟ್ರಸ್ಟ್‌ನ ಮಾಧವ ಕೃಪಾ ಗಣೇಶ ಉತ್ಸವ ಸಮಿತಿ ವತಿಯಿಂದ ಮೈಸೂರಿನ ಕಾಮಾಕ್ಷಿ ಆಸ್ಪತ್ರೆಗಳ (ಕುವೆಂಪುನಗರ ಮತ್ತು ಜೆಪಿ ನಗರ) ಸಹಯೋಗದಲ್ಲಿ ನಾಳೆ (ಆ.24) ನಗರದಲ್ಲಿ 'ರನ್ ಫಾರ್ ಗಣೇಶ ; ಸೇ ನೋ ಟು ಡ್ರಗ್ಸ್' ಶೀರ್ಷಿಕೆಯಡಿ ಮಾದಕ ದ್ರವ್ಯದ ವಿರುದ್ಧ ಜಾಗೃತಿಗಾಗಿ ಸಮುದಾಯ ಮ್ಯಾರಥಾನ್ (ಓಟ) ಆಯೋಜಿಸಲಾಗಿದೆ.

ಓಟಕ್ಕೆ ಬೆಳಗ್ಗೆ 6.45ಕ್ಕೆ ಅರಮನೆ ಉತ್ತರ ದ್ವಾರದಲ್ಲಿರುವ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಚಾಲನೆ ದೊರೆಯಲಿದೆ. ಮಾದಕ ದ್ರವ್ಯ ಸೇವನೆಯಿಂದ ಉಂಟಾಗುವ ಅಪಾಯಗಳ ಕುರಿತು ಜಾಗೃತಿ ಮೂಡಿಸುವುದು ಈ ಓಟದ ಉದ್ದೇಶವಾಗಿದೆ. ಜೊತೆಗೆ ಯುವಪೀಳಿಗೆಯನ್ನು ರಕ್ಷಿಸಲು ನಾಗರಿಕರಲ್ಲಿ ಜಾಗರೂಕತೆಗೆ ಉತ್ತೇಜಿಸುವುದು ಈ ಓಟದ ಮತ್ತೊಂದು ಉದ್ದೇಶವಾಗಿದೆ.

ವಿದ್ಯಾರ್ಥಿಗಳು, ಯುವ ಜನರು, ಫಿಟ್‌ನೆಸ್ ಸಂಘಟನೆಗಳು ಸೇರಿದಂತೆ 1000ದಿಂದ 1500 ಓಟಗಾರರನ್ನು ಆಯೋಜಕರು ನಿರೀಕ್ಷಿಸಿದ್ದಾರೆ. ವಯಸ್ಕರಿಗೆ ನೋಂದಣಿ ಶುಲ್ಕ 200 ರೂ. ನಿಗದಿ ಮಾಡಿದ್ದು, ಮಕ್ಕಳಿಗೆ ಉಚಿತ ಪ್ರವೇಶಾವಕಾಶ ನೀಡಲಾಗಿದೆ. ಪಾಲ್ಗೊಳ್ಳುವವರಿಗೆ ಟಿ ಶರ್ಟ್, ಪದಕ ಹಾಗೂ ಪ್ರಮಾಣಪತ್ರ ದೊರಕಲಿದ್ದು, ಉಪಾಹಾರದ ವ್ಯವಸ್ಥೆ ಸಹ ಇರಲಿದೆ.

ಮೈಸೂರಿನ ಕುವೆಂಪುನಗರದ ಕಾಮಾಕ್ಷಿ ಆಸ್ಪತ್ರೆಯಲ್ಲಿ ಮ್ಯಾರಥಾನ್ ಕುರಿತು ಸುದ್ದಿಗೋಷ್ಠಿಯಲ್ಲಿ ಶನಿವಾರ ಕಾಮಾಕ್ಷಿ ಆಸ್ಪತ್ರೆಗಳ ವ್ಯವಸ್ಥಾಪಕ ಟ್ರಸ್ಟಿ ಎಂ.ಮಹೇಶ್ ಶೆಣೈ ಮಾಹಿತಿ ನೀಡಿದರು. ನೋಂದಣಿಗಾಗಿ ಚರಣ್ ಎಸ್.ರಾಜ್ ಅವರನ್ನು (ಮೊ.ಸಂ. 93421–82142) ಸಂಪರ್ಕಿಸಬಹುದು. ಕಾಮಾಕ್ಷಿ ಆಸ್ಪತ್ರೆಗಳ ಜಂಟಿ ವ್ಯವಸ್ಥಾಪಕ ಟ್ರಸ್ಟಿ ಗಜಾನನ ಶೆಣೈ, ವೈದ್ಯಕೀಯ ಅಧೀಕ್ಷಕ ಡಾ.ಸಿ.ಉಮೇಶ್ ಕಾಮತ್, ಪ್ರಧಾನ ವ್ಯವಸ್ಥಾಪಕ ಎನ್.ವಿ. ಪ್ರಸನ್ನಕುಮಾರ್ ಮತ್ತಿತರರು ಹಾಜರಿದ್ದರು.

ಕೇರ್ಗಳ್ಳಿ ವಿದ್ಯಾಮಿತ್ರ ಅಕಾಡೆಮಿ ಫಾರ್ ಎಕ್ಸಲೆನ್ಸ್ ಸಂಸ್ಥೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ



ಮೈಸೂರಿನ ಕೇರ್ಗಳ್ಳಿಯಲ್ಲಿರುವ ವಿದ್ಯಾಮಿತ್ರ ಅಕಾಡೆಮಿ ಫಾರ್ ಎಕ್ಸಲೆನ್ಸ್ ಸಂಸ್ಥೆಯಲ್ಲಿ ಶನಿವಾರ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು. ಶಾಲಾ ಮಕ್ಕಳು, ಶ್ರೀಕೃಷ್ಣ, ರಾಧೆ ರುಕ್ಮಿಣಿ ಸೇರಿದಂತೆ ವಿವಿಧ ವೇಷಭೂಷಣಗಳನ್ನು ಧರಿಸಿ ಎಲ್ಲರ ಗಮನ ಸೆಳೆದರು.

ರಾಯಣ್ಣನ ಹೋರಾಟ, ದೇಶಭಕ್ತಿ ಸದಾ ಸ್ಮರಣೀಯ
ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅಭಿಮತ



ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಮೈಸೂರು ಕನ್ನಡ ವೇದಿಕೆ ಆಯೋಜಿಸಿದ್ದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ 'ರಾಯಣ್ಣ ಪ್ರಶಸ್ತಿ' ಪ್ರದಾನ ಮಾಡಿ, ಗೌರವಿಸಲಾಯಿತು.

ಮೈಸೂರು,ಆ.23(ಎಂಟಿವೈ)– ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿ ಕೊಡುವಲ್ಲಿ ಪರಾಕ್ರಮದಿಂದ ಹೋರಾಟ ನಡೆಸಿದ್ದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದರು. ಅವರ ಹೋರಾಟ ಹಾಗೂ ದೇಶಭಕ್ತಿ ಜನ ಮಾನಸದಲ್ಲಿ ಅಚ್ಚಳಿಯದೇ ಉಳಿದಿದೆ ಎಂದು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಮೈಸೂರು ಕನ್ನಡ ವೇದಿಕೆ ಆಯೋಜಿಸಿದ್ದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ 'ರಾಯಣ್ಣ ಪ್ರಶಸ್ತಿ' ಪ್ರದಾನ ಮಾಡಿ ಮಾತನಾಡಿದ ಅವರು, ದೇಶ ಕಂಡ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಸಂಗೊಳ್ಳಿ ರಾಯಣ್ಣ ಮುಂಚೂಣಿಯಲ್ಲಿದ್ದಾರೆ. ಸಂಗೊಳ್ಳಿ ರಾಯಣ್ಣನ ಹೆಸರೇ ರೋಮಾಂಚನವನ್ನುಂಟು ಮಾಡುತ್ತದೆ. ದೇಶಕ್ಕೆ ಹಲವು ಮಹನೀಯರ ಹೋರಾಟದ ಫಲದಿಂದ ಸ್ವಾತಂತ್ರ್ಯ ಸಿಕ್ಕಿದೆ.

ಕಾಲಾನುಕಾಲಕ್ಕೆ ದೇಶಪ್ರೇಮಿಗಳು, ಸ್ವಾತಂತ್ರ್ಯ ಹೋರಾಟಗಾರರು ಬ್ರಿಟಿಷರನ್ನು ಹೊರದಬ್ಬಲು ಭಾರಿ ಶ್ರಮಪಟ್ಟರು. ಕಿತ್ತೂರು ರಾಣಿ ಚೆನ್ನಮ್ಮನ ಬಂಟನಾಗಿದ್ದಂತಹ ಸಂಗೊಳ್ಳಿ ರಾಯಣ್ಣನ ವಿರುದ್ಧ ನಮ್ಮವರೇ ಪಿತೂರಿ ಮಾಡಿದರು. ರಾಯಣ್ಣನ ಗೆರಿಲ್ಲಾ ಯುದ್ಧ ತಂತ್ರಗಳು ಬ್ರಿಟಿಷರ ಪಾಲಿಗೆ ಸಿಂಹಸ್ವಪ್ನವಾಗಿತ್ತು. ರಾಯಣ್ಣನ ಹೋರಾಟ ಮತ್ತು ಪರಾಕ್ರಮ ಸದಾ ಕಾಲ ಭಾರತೀಯರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯುತ್ತದೆ. ಅಂತಹ ಮಹನೀಯರ ಹೆಸರಿನಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ನೀಡುತ್ತಿರುವುದು ಸಮಯೋಚಿತ ಎಂದರು.

ರಾಯಣ್ಣನ ದೇಶಪ್ರೇಮ, ಅಪ್ರತಿಮ ಹೋರಾಟ ಇಂದಿನ ಯುವ ಪೀಳಿಗೆಗೆ ಆದರ್ಶ ಮತ್ತು ದಾರಿದೀಪ. ಸ್ವಾರ್ಥ ಪ್ರಪಂಚದಲ್ಲಿ ಕೇವಲ ನಮ್ಮ ಸ್ವಾರ್ಥವನ್ನು ಅಷ್ಟೇ ನೋಡಿಕೊಳ್ಳದೆ ಸಮಾಜದಲ್ಲಿ ತುಳಿತಕ್ಕೊಳಗಾದ, ಅವಕಾಶವಂಚಿತ ಜನರಿಗೆ ಸೇವೆ ಮಾಡುವುದೇ ನಿಜವಾದ ದೊಡ್ಡ ಕಾಯಕ. ಅಂತಹ ನಿಸ್ವಾರ್ಥ ಸೇವೆ ಸಲ್ಲಿಸಿದವರಿಗೆ ಸಂಗೊಳ್ಳಿ ರಾಯಣ್ಣ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಸಾಮಾಜಿಕ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದರು.

ಪಿರಿಯಾಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಉಪನ್ಯಾಸಕ ಪ್ರೊ.ನಂಜುಂಡಸ್ವಾಮಿ ಮಾತನಾಡಿದರು.

ಪ್ರಶಸ್ತಿ ಪ್ರದಾನ: ಇದೇ ವೇಳೆ ಯೋಧ ಪೊನ್ನಪ್ಪ, ಉದ್ಯಮಿ ಕೆ.ಎಂ.ಬಾಲಚಂದ್ರ, ಹೋರಾಟಗಾರ ಸುಂದರ್ ಹಣಕೊಳ, ಸಮಾಜ ಸೇವಕ ಪ್ರಕಾಶ್ ಪ್ರಿಯದರ್ಶಿನಿ, ಧಾರ್ಮಿಕ ಸೇವಕ ನಂಜುಂಡಸ್ವಾಮಿ ರಾಜು, ಪತ್ರಕರ್ತ ರಾಜುಕಾರ್ಯ, ಸಮಾಜಸೇವಕ ಮರಿಗೌಡ, ಪಿರಮಿಡ್ ಧ್ಯಾನಿಯಾದ ಚಿಕ್ಕಲೂರು ಮಂಜೇಗೌಡ, ಕ್ರೀಡಾ ಕ್ಷೇತ್ರದ ಸಾಧಕರಾದ ಕುಮಾರಿ ಪ್ರಣತಿ ಗಿರಿಧರ್ ಅವರಿಗೆ ಸಂಗೊಳ್ಳಿ ರಾಯಣ್ಣ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು ಕನ್ನಡ ವೇದಿಕೆಯ ಅಧ್ಯಕ್ಷ ಎಸ್.ಬಾಲಕೃಷ್ಣ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಸಮಾಜ ಸೇವಕ ರಘುರಾಮ್ ವಾಜಪೇಯಿ, ನಾಲಾಬೀದಿ ರವಿ, ಶಿಕ್ಷಕ ಸಾಲುಂಡಿದೊರೆ ಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಆ. 23– ಮೈಸೂರು ಜಿಲ್ಲಾ ಕುಂಬಾರ ಮಹಿಳಾ ಸಂಘವು 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ ಕುಂಬಾರ ಜನಾಂಗದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ.

ಅರ್ಹ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ, ವಿಳಾಸ, ಮೊಬೈಲ್ ನಂಬರ್‌ಗಳೊಂದಿಗೆ ಕಾರ್ಯದರ್ಶಿ ಶ್ರೀಮತಿ ನಿರ್ಮಲಾ ಅಥವಾ ಕಾರ್ಯಾಧ್ಯಕ್ಷರ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ. ಅರ್ಜಿಗಳನ್ನು ಸೆ. 15 ರೊಳಗೆ ತಲುಪಿಸುವಂತೆ ಕೋರಲಾಗಿದೆ.

ಕನ್ನಡ ಪರ ಹೋರಾಟಗಾರ ಸ.ರ.ಸುದರ್ಶನ್‌ಗೆ ಶ್ರದ್ಧಾಂಜಲಿ



ಕನ್ನಡಪರ ಹೋರಾಟಗಾರ ಸ.ರ.ಸುದರ್ಶನ್ ಅವರಿಗೆ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಪುರಭವನದ ಮುಂಭಾಗ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಆ.23(ಜಿಎ)– ಇತ್ತೀಚೆಗೆ ನಿಧನರಾದ ಕನ್ನಡಪರ ಹೋರಾಟಗಾರ ಸ.ರ.ಸುದರ್ಶನ್ ಅವರಿಗೆ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಪುರಭವನದ ಮುಂಭಾಗ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್ (ಜೆಪಿ) ಸೇರಿದಂತೆ ವಿವಿಧ ಕನ್ನಡ ಪರ ಸಂಘಟನೆಗಳ ಮುಖಂಡರು ಸ.ರ.ಸುದರ್ಶನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು.

ಈ ವೇಳೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಸ.ರ. ಸುದರ್ಶನ್ ಅವರು ಕಾವೇರಿ ಸೇರಿದಂತೆ ಕನ್ನಡ ಪರ ಹೋರಾಟಗಳಲ್ಲಿ ಪಾಲ್ಗೊಂಡು ಕನ್ನಡಕ್ಕಾಗಿ ಶ್ರಮಿಸಿದ್ದಾರೆ. ಅನೇಕ 18 ಪ್ರಕರಣಗಳಲ್ಲಿ ಬಂಧನಗೊಂಡು ಕಾನೂನು ಹೋರಾಟ ಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ವಿಧಾನಪರಿಷತ್‌ನಲ್ಲಿ ಮಾತನಾಡಿ ಚಳಿಗಾಲದ ಅಧಿವೇಶನದಲ್ಲಿ ಕನ್ನಡ ಪರವಾಗಿ, ಕಾವೇರಿ ಹೋರಾಟಕ್ಕಾಗಿ ಹೋರಾಡಿದವರ ಕೇಸುಗಳನ್ನು ತೆರವುಗೊಳಿಸುವಂತೆ ಆಗ್ರಹಿಸುತ್ತೇನೆ ಎಂದರು.

ನಂತರ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್(ಜೆಪಿ) ಮಾತನಾಡಿ, ಸುದರ್ಶನ್ ಅವರು ಭೂವಿಜ್ಞಾನದಲ್ಲಿ ಮಾಸ್ಟರ್ ಡಿಗ್ರಿ ಮಾಡಿ ನಂತರ ಕನ್ನಡ ಎಂಎ ಮಾಡಿದ್ದರು. ಅನೇಕ ಹೋರಾಟಗಳ ಮೂಲಕ ಸ್ಫೂರ್ತಿ ನೀಡಿದ್ದಾರೆ ಎಂದರು.

ಸ್ವಾತಂತ್ರ್ಯ ಹೋರಾಟಗಾರರಿಗೆ ವಿಶೇಷ ಸ್ಥಾನಮಾನವಿದೆ. ಆದರೆ ಕನ್ನಡಪರ ಹೋರಾಟಗಾರರ ಜೀವನ ಸಂಕಷ್ಟದಲ್ಲಿದೆ. ಕುಟುಂಬದ ಬಗ್ಗೆ ಯೋಚಿಸದೇ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ. ಅವರಿಗೆ ಆರ್ಥಿಕ ಬೆಂಬಲ ನೀಡುವ ನಿಟ್ಟಿನಲ್ಲಿ ಸರ್ಕಾರ ಮಾಸಾಶನ ನೀಡುವಂತೆ ಆಗ್ರಹಿಸಿದರು.

ಕಾರ್ಯಕ್ರಮದಲ್ಲಿ ಕಾವೇರಿ ಕ್ರಿಯಾ ಸಮಿತಿಯ ಪ್ರಧಾನ ಸಂಚಾಲಕರಾದ ಮೂಗೂರು ನಂಜುಂಡಸ್ವಾಮಿ, ಸುರೇಶ್ ಗೌಡ, ತೇಜಸ್ ಲೋಕೇಶ್‌ಗೌಡ, ಬಿ.ಬಿ.ರಾಜಶೇಖರ್, ನಜರ್‌ಬಾದ್ ನಟರಾಜ್, ಟೈಗರ್ ಬಾಲಾಜಿ, ಆನಂದ್, ನೇಹಾ, ವಿಷ್ಣು ಮತ್ತಿತರರು ಉಪಸ್ಥಿತರಿದ್ದರು.

ಕೊಡವ ಸಂಸ್ಕೃತಿ ಅನಾವರಣಗೊಳಿಸಿದ 'ಕೊಡವಾಮೆರ ಆರ ಬೇರ' ಕಾರ್ಯಕ್ರಮ



ಮೈಸೂರಿನ ವಿಜಯನಗರದಲ್ಲಿರುವ ಕೊಡವ ಸಮಾಜದಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಮೈಸೂರು ಕೊಡವ ಸಮಾಜ ವತಿಯಿಂದ ಆಯೋಜಿಸಿದ್ದ 'ಕೊಡವಾಮೆರ ಆರ ಬೇರ' ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ ಆದ ವಿರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಚಾಲನೆ ನೀಡಿದರು.



ಕೊಡವ ಸಂಸ್ಕೃತಿ ಸಾರುವ ಪಾರಂಪರಿಕ ಉಡುಗೆ ತೊಟ್ಟಿರುವ ಮಹಿಳೆಯರನ್ನು ಕಾಣಬಹುದು

ಮೈಸೂರು, ಆ.23(ಜಿಎ)–ಕೊಡಗಿನ ಸಂಸ್ಕೃತಿ, ಪರಂಪರೆಯನ್ನು ಸಾರುವ ನಿಟ್ಟಿನಲ್ಲಿ ಮೈಸೂರಿನ ವಿಜಯನಗರದಲ್ಲಿರುವ ಕೊಡವ ಸಮಾಜದಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಮೈಸೂರು ಕೊಡವ ಸಮಾಜ ವತಿಯಿಂದ ಆಯೋಜಿಸಿದ್ದ 'ಕೊಡವಾಮೆರ ಆರ ಬೇರ' ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ ಆದ ವಿರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಚಾಲನೆ ನೀಡಿದರು.

ಕಾರ್ಯಕ್ರಮಕ್ಕೆ ಬಂದ ಕೊಡವ ಸಮುದಾಯದ ಪ್ರತಿಯೊಬ್ಬರು ಸಾಂಪ್ರದಾಯಿಕ ಉಡುಗೆ ತೊಟ್ಟು, ಕೊಡವ ಸಂಸ್ಕೃತಿಯನ್ನು ಸಾರಿದರು. ಅಲ್ಲದೇ ಮುಖ್ಯ ಅತಿಥಿಯಾದ ಶಾಸಕ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಅವರನ್ನು ಕೊಡಗಿನ ಸಾಂಸ್ಕೃತಿಕ ಶೈಲಿಯಲ್ಲಿ ವಿಭಿನ್ನವಾಗಿ ಕರೆತರಲಾಯಿತು.

ಈ ವೇಳೆ ಯುವಕ, ಯುವತಿಯರು ಇಂದು ಕೊಡಗನ್ನು ಬಿಟ್ಟು ಬೇರೆ ಕಡೆ ಕೆಲಸ ಮಾಡಿಕೊಂಡು ತಮ್ಮ ಸಂಸ್ಕೃತಿ ಮರೆಯುತ್ತಿರುವುದನ್ನು ನಾಟಕದ ಮೂಲಕ ಪ್ರದರ್ಶಿಸಿ ಎಲ್ಲರ ಮೆಚ್ಚುಗೆ ಗಳಿಸಿಕೊಂಡರು.

ನಂತರ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಮಾತನಾಡಿ, ಸರ್ಕಾರ ಕೊಡವ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸುವ ಹಿನ್ನೆಲೆಯಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಕೊಡವ ಸಮಾಜದ ವತಿಯಿಂದ ಕೊಡವ ಸಂಸ್ಕೃತಿ ಬಿಂಬಿಸುವ ಕೆಲಸವನ್ನು ಮಾಡುತ್ತಿದ್ದು, ಅನೇಕ ಕಾರ್ಯಕ್ರಮವನ್ನು ಈಗಾಗಲೇ ಕೊಡಗಿನಲ್ಲಿ ಮಾಡಲಾಗಿದೆ. ಮೈಸೂರಿನಲ್ಲಿ ಕೊಡಗಿನವರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ವಿಶೇಷವಾಗಿ ಕಾರ್ಯಕ್ರಮ ಆಯೋಜಿಸಲಾಗಿದೆ. ಕೊಡಗಿನ ಸಂಸ್ಕೃತಿ ಬಗ್ಗೆ ತಿಳಿಸಲು ಕೊಡಗಿನ ನಂತರ ಮೈಸೂರು ಸೂಕ್ತ ಸ್ಥಳವಾಗಿರುವುದರಿಂದ ಇಲ್ಲಿ ಕಾರ್ಯಕ್ರಮ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಇಂದು ಕೊಡಗಿನಲ್ಲಿಯೂ ಸಾಕಷ್ಟು ಬದಲಾವಣೆ ನಡುವೆ ಪರಂಪರೆ ಕಲೆಯನ್ನು ಉಳಿಸುವುದು ಮುಖ್ಯವಾಗಿದೆ. ನಾಟಕದಲ್ಲಿ ಪ್ರದರ್ಶಿಸಿದಂತೆ ಕೊಡಗು ಬಿಟ್ಟು ಬೇರೆ ಕಡೆ ಕೆಲಸಕ್ಕೆ ತೆರಳಿದರೂ ತಮ್ಮ ಸಂಸ್ಕೃತಿಯನ್ನು ಮರೆಯಬಾರದು. ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸಿ, ಸಮತೋಲನ ಕಾಯ್ದುಕೊಳ್ಳಬೇಕು, ಜೊತೆಗೆ ಸಂಸ್ಕೃತಿ ಉಳಿಸಿಕೊಳ್ಳಬೇಕು ಎಂದರು.

ವಿಜೃಂಭಣೆ ದಸರಾ : ಪ್ರತಿ ವರ್ಷ ಕೊಡಗಿನಲ್ಲಿ ಮಡಿಕೇರಿ ಮತ್ತು ಗೋಣಿಕೊಪ್ಪದಲ್ಲಿ ಅದ್ಧೂರಿಯಾಗಿ ದಸರಾ ಮಾಡಲಾಗುತ್ತಿದೆ. ಕಳೆದ ವರ್ಷ ಮುಖ್ಯಮಂತ್ರಿಗಳು ಮಡಿಕೇರಿ ದಸರಾಗೆ 1.25 ಕೋಟಿ ರೂ. ಹಾಗೂ ಗೋಣಿಕೊಪ್ಪ ದಸರಾಗೆ 75 ಲಕ್ಷ ರೂ. ನೀಡಿದ್ದರು. ಅದರಂತೆ ಈ ಬಾರಿಯೂ ವಿಜೃಂಭಣೆಯಿಂದ ದಸರಾ ಆಚರಿಸಲಾಗುತ್ತದೆ. ಬಹುತೇಕ ಪ್ರವಾಸಿಗರು ಮೈಸೂರಿನಲ್ಲಿ ದಸರಾ ಮುಗಿಸಿಕೊಂಡು ನಂತರ ಮಡಿಕೇರಿಗೆ ಬರುತ್ತಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ, ಕೊಡಗು ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ಮೈಸೂರು ಕೊಡವ ಸಮಾಜದ ಅಧ್ಯಕ್ಷ ಪೊಂಜಂಡ ಎ.ಗಣಪತಿ, ಸಂಚಾಲಕಿ ಕಂಬೆಯಂಡ ಡೀನಾ ಬೋಜಣ್ಣ, ಸಹ ಸಂಚಾಲಕರಾದ ಪುತ್ತರಿರ ಪಪ್ಪು ತಿಮ್ಮಯ್ಯ, ಕೊಂಡಿ ಜಮ್ಮನ ಎಂ.ಬಾಲಕೃಷ್ಣ, ನಾಪಂಡ ಸಿ.ಗಣೇಶ್, ಕೊಡವ ಸಾಹಿತ್ಯ ಅಕಾಡೆಮಿ ಸದಸ್ಯರಾದ ಮೊಳ್ಳೆಕುಟ್ಟಂಡ ದಿನು ಬೋಜಪ್ಪ, ಪಾನಿಕುಟ್ಟಿರ ಕೆ.ಕುಟ್ಟಪ್ಪ, ಪೊನ್ನಿರ ಯು.ಗಗನ್, ಕುಡಿಯರ ಕಾವೇರಪ್ಪ, ನಾಯಂಡಿರ ಆರ್.ಶಿವಾಜಿ, ಚೆಪ್ಪುಡಿರ ಎಸ್.ಉತ್ತಪ್ಪ, ನಾಯಕಂಡ ಬೇಬಿ ಚಿಣ್ಣಪ್ಪ, ಚೊಟ್ಟೆಯಂಡ ಎ.ಸಂಜು ಕಾವೇರಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಧರ್ಮ, ಪರಂಪರೆಯ ಮುಂದಿನ ಪೀಳಿಗೆಗೂ ಪರಿಚಯಿಸುವುದು ನಮ್ಮೆಲ್ಲರ ಕರ್ತವ್ಯ

ಹುಲಿಯೂರು ದುರ್ಗ ಮಠದ ಶ್ರೀ ಸಿದ್ಧಲಿಂಗ ಶಿವಾನಂದ ಸ್ವಾಮೀಜಿ ಅಭಿಮತ



ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಸಮಾರೋಪದ ಸಮಾರಂಭದಲ್ಲಿ ಶ್ರೀ ಸಿದ್ಧಲಿಂಗ ಶಿವಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಈ ವೇಳೆ ಕುದೇರು ಮಠದ ಇಮ್ಮಡಿ ಗುರುಲಿಂಗಸ್ವಾಮೀಜಿ, ವೀರರುದ್ರ ಶಿವಾಚಾರ್ಯ ಸ್ವಾಮೀಜಿ, ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಉಪಸ್ಥಿತರಿದ್ದರು.

ಮೈಸೂರು, ಆ.23(ಎಸ್‌ಪಿಎನ್)– ನಮ್ಮ ಧರ್ಮ, ಪರಂಪರೆ ಉಳಿಸಿಕೊಂಡು ಮುಂದಿನ ಪೀಳಿಗೆಗೂ ಪರಿಚಯಿಸುವುದು ನಮ್ಮ–ನಿಮ್ಮೆಲ್ಲರ ಕರ್ತವ್ಯ ಎಂದು ಹುಲಿಯೂರು ದುರ್ಗ ಮಠದ ಶ್ರೀ ಸಿದ್ಧಲಿಂಗ ಶಿವಾನಂದ ಸ್ವಾಮೀಜಿ ಅಭಿಪ್ರಾಯ ಪಟ್ಟರು.

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ಶನಿವಾರ ನಡೆದ ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಸಮಾರೋಪದ ಸಮಾರಂಭದಲ್ಲಿ ಸಾನ್ನಿಧ್ಯವಹಿಸಿ ಶ್ರೀಗಳು ಮಾತನಾಡಿದರು. ಸದಾ ಕಾಲ ಧರ್ಮ ಉಳಿವಿಗೆ ಧಾರ್ಮಿಕ ಪ್ರಚನ, ಕಾರ್ಯ ಚಟುವಟಿಕೆಗಳ ನಡೆಸುವುದು ಅವಶ್ಯ ಎಂದರು.

ಶರಣ ಪರಂಪರೆ ಕಾಲಘಟ್ಟದ ಮಲೆ ಮಹದೇಶ್ವರರು ಯಾವುದೇ ಮೂಲ ಸೌಕರ್ಯವಿಲ್ಲದ, ಗುಡ್ಡಗಾಡು ಪ್ರದೇಶದಲ್ಲಿ ವಾಸ ಮಾಡುತ್ತಿದ್ದ ಜನರನ್ನು ನಾಗರಿಕರನ್ನಾಗಿ ಪರಿವರ್ತಿಸಿ, ಅವರ ಬದುಕಿಗೊಂದು ಸಾರ್ಥಕತೆ ಕಲ್ಪಿಸಿದರು. ಅಂತಹ ಕಾಡಿನ ಜನರನ್ನೇ ಪರಿವರ್ತನೆ ಮಾಡಿದ ಹೆಗ್ಗಳಿಕೆ ಶರಣ ಪರಂಪರೆಗಿದೆ. ಈ ಆಧ್ಯಾತ್ಮ ಪರಂಪರೆಯು ಈಗಲೂ ಮುಂದುವರೆದಿದೆ. ತನ್ಮೂಲಕ ನಾಗರಿಕರ ಸಮಾಜವನ್ನು ಎಚ್ಚರಿಸುವ ಕೆಲಸ ಮಾಡುತ್ತಿದೆ ಎಂದರು.

ಶ್ರಾವಣ ಮಾಸದಲ್ಲಿ ಪ್ರತಿನಿತ್ಯ ಸುಮಾರು ಒಂದು ಗಂಟೆಗಳ ಕಾಲ ಪ್ರವಚನವನ್ನು ಆಲಿಸಿರುವುದರಿಂದ ತಿಂಗಳಲ್ಲಿ ಮೂವತ್ತು ಗಂಟೆಗಳನ್ನು ಇದಕ್ಕೆ ಸಮರ್ಪಿಸಿಕೊಂಡಿರುವ ಶ್ರೀ ಮಠದ ಭಕ್ತರು, ಪ್ರವಚನದಲ್ಲಿ ಕೇಳಿದ, ಆಲಿಸಿದ ಸತ್ಕಾರ್ಯಗಳನ್ನು, ಧರ್ಮದ ಅಂಶಗಳನ್ನು ಜೀವನದಲ್ಲಿ ಅನುಷ್ಠಾನಗೊಳಿಸಬೇಕು. ಆಗ ಮಾತ್ರ ಇಂತಹ ಕಾರ್ಯಕ್ರಮಗಳ ಆಯೋಜನೆಯಿಂದ ಸಾರ್ಥಕತೆ ಬರುತ್ತದೆ ಎಂದರು.

ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ವ ಚಿಂತಾಮಣಿ' ಕೃತಿಯೂ ನಮಗೆ ಧರ್ಮದ ಮೌಲ್ಯಗಳನ್ನು ತಿಳಿಸುತ್ತದೆ. ನಮ್ಮ ನಾಡಿನ ಐತಿಹ್ಯಗಳ ಬಗ್ಗೆ ಮಾಹಿತಿ ನೀಡುತ್ತದೆ. ಈ ಕೃತಿಯನ್ನು ಪ್ರವಚನದ ಮೂಲಕ ಆಲಿಸುವುದರಿಂದ ನಮಗೆ ಧರ್ಮದ ಜ್ಞಾನ ವೃದ್ಧಿಯಾಗುತ್ತದೆ ಎಂದರು.

ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆಯ ಉಪ ನಿರ್ದೇಶಕ ಎಲ್.ಮೇಘಲ ಅವರು ಶ್ರೋತೃಗಳಿಗೆ ಬಹುಮಾನ ವಿತರಣೆ ಮಾಡಿದರು. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ನಗರ ಮಾಪನ ಯೋಜನಾಧಿಕಾರಿ ಜಿ.ಸೀಮಂತಿನಿ ಅಧ್ಯಕ್ಷತೆ ವಹಿಸಿದ್ದರು. ಕುದೇರು ಮಠದ ಇಮ್ಮಡಿ ಗುರುಲಿಂಗ ಸ್ವಾಮೀಜಿ, ವೀರರುದ್ರ ಶಿವಾಚಾರ್ಯ ಸ್ವಾಮೀಜಿ, ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಅನಂತರಾಮು, ಡಾ.ಬಿ.ವಿ.ವಸಂತ ಕುಮಾರ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಗೌರವ ಕಾರ್ಯದರ್ಶಿ ಶಿವಕುಮಾರಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

Date : 23/08/2025

CAUTION NOTICE

The General Public is hereby informed that Mr. Mr. V.Krishnamurthy Mr. H. Guruswamy are the absolute Co-owners of the schedule property described in schedule, have entered into a Development Agreement & General Power of Attorney dated 25/03/2022 with "Shree Sai Ayush Enterprises" Mr. Prakash alias Maddur prakash.

The Landowner initiated arbitration proceedings by filing Com A.A.No. 1/2024, MFA No. 8371/2025, Com Appeal No. 80/2025, CMP No. 62/2024, and Proceedings in Arbitration Centre presently pending adjudication.

Accordingly, the general public is hereby cautioned not to enter into any transaction of any agreement or deed, or otherwise in respect of the schedule property. Any person who deals with Mr.Prakash alias Maddur prakash in this regard shall be doing so entirely at their own risk, cost, and consequences. The landowners shall not be held responsible or liable for any loss, damage, or hardship that may arise there from.

SCHEDULE

All that piece and parcel of immovable property agricultural lands in Sy Nos.361/2, (Old Sy. No.361), Sy No.361/3, (Old Sy. No.361), Sy No.153/1, (Old Sy.No. 153/1) Sy No.153/4,(Old Sy: No. 153/2) totally measuring an extent of about 10 Acres 16/1/2 Guntas (excluding 6'Guntas of Kharab land) all situated in Hanchya Village, Kasaba Hobli, Mysuru.

Property Owner :-
Sri. V. KRISHNAMURTHY.
Email:- K.kooshix@icloud.com

Sd/- GIRISHA. S *B.A.L., LL.B*
ADVOCATE-Legallis, KAR/1607/2011
2513, CH-34, 2nd Floor,
New Kantharaj Urs Road, K.G. Koppal, Mysuru.

ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿ. ಮೈಸೂರು

ಹಿರಿಯ ಸಹಕಾರಿಗಳ ಸನ್ಮಾನ ಮತ್ತು ಬ್ಯಾಂಕಿನ ಸದಸ್ಯರುಗಳ ಮಕ್ಕಳ ಪ್ರತಿಭಾ ಪುರಸ್ಕಾರ ಸಮಾರಂಭ

ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು
ದಿನಾಂಕ : 24.08.2025, ಬೆಳಗ್ಗೆ 11 ಗಂಟೆಗೆ

ದಿವ್ಯ ಸಾನಿಧ್ಯ : ಶ್ರೀ ಮದಭಿನವ ವಾಗೀಶ ಬ್ರಹ್ಮ ತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳು ಪರಕಾಲ ಮಠ, ಮೈಸೂರು
ಉದ್ಘಾಟನೆ : ಶ್ರೀ ದಿನೇಶ್ ಗುಂಡೂರಾವ್ ರವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ
ಅಧ್ಯಕ್ಷತೆ : ಶ್ರೀ ಕೆ. ಹರೀಶ್ ಗೌಡರವರು ಶಾಸಕರು, ಚಾಮರಾಜ ವಿಧಾನಸಭಾ ಕ್ಷೇತ್ರ ಮೈಸೂರು
ಮುಖ್ಯ ಅತಿಥಿಗಳು: ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ರವರು ಲೋಕಸಭಾ ಸದಸ್ಯರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ
ಶ್ರೀ ಎ.ಹೆಚ್. ವಿಶ್ವನಾಥ್ ರವರು,ವಿಧಾನಪರಿಷತ್ ಸದಸ್ಯರು.

ಸನ್ಮಾನಿತರು :ಶ್ರೀಮತಿ ನಾಗಮಣಿ, ಶ್ರೀಮತಿ ಚಾಮುಂಡಮ್ಮ, ಶ್ರೀ ಸತ್ಯನಾರಾಯಣ ಪಿ ಶ್ರೀಮತಿ ಮಹದೇವಮ್ಮ, ಶ್ರೀಮತಿ ದಾಕ್ಷಾಯಣಿ ಎಂ.ಬಿ. ಶ್ರೀ ಕೃಷ್ಣರಾವ್ ಬಿ.ಎಸ್. ಶ್ರೀಮತಿ ಜಯಂತಿ, ಶ್ರೀ ಓಂ ಕಾರ್ ಪ್ರಸಾದ್ ಬಿ, ಶ್ರೀಮತಿ ಚಿಕ್ಕವೀರಮ್ಮ, ಶ್ರೀಮತಿ ನಾಗರತ್ನಮ್ಮ ಎಂ. ಶ್ರೀ ಜಗದೀಶ, ಶ್ರೀ ವೆಂಕಟೇಶ್ ಟಿ.ಎಸ್, ಶ್ರೀಮತಿ ಛಾಯ ಹೆಚ್.ಪಿ, ಶ್ರೀಕೃಷ್ಣಪ್ಪ ಎಂ, ಶ್ರೀಮತಿ ಪ್ರೇಮಕುಮಾರಿ ಬಿ.ಎನ್, ಶ್ರೀ ಶಿವಶಂಕರಸ್ವಾಮಿ ಎಂ, ಶ್ರೀನಿವಾಸಮೂರ್ತಿ ಎನ್ ಇವರುಗಳಿಗೆ ಸಹಕಾರ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು

100ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಸಮಾರಂಭ

ದಿನಾಂಕ : 24.08.2025, ಬೆಳಗ್ಗೆ: 12.00 ಗಂಟೆಗೆ

ಬ್ಯಾಂಕಿನ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಡಿ. ಬಸವರಾಜು (ಬಸಪ್ಪ) ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿರುತ್ತೆ. ಈಗಾಗಲೇ ಮಾನ್ಯ ಸದಸ್ಯರುಗಳಿಗೆ ಅಂಚೆ ಮೂಲಕ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆಯೆಂದು ತಿಳಿದು ಸಭೆಗೆ ಸಕಾಲಕ್ಕೆ ಆಗಮಿಸಬೇಕಾಗಿ ಕೋರುತ್ತೇವೆ.

ಶ್ರೀ ಡಿ.ಬಸವರಾಜು (ಬಸಪ್ಪ). ಅಧ್ಯಕ್ಷರು	ಶ್ರೀಮತಿ ಹೆಚ್ ಎನ್.ಸರ್ವಮಂಗಳ. ಉಪಾಧ್ಯಕ್ಷರು	ಶ್ರೀ ಡಿ. ಅನಂತವೀರಪ್ಪ. ಪ್ರ. ವ್ಯವಸ್ಥಾಪಕರು

ವಿ. ಸೂಚನೆ: ASG ಕಣ್ಣಿನ ಆಸ್ಪತ್ರೆ ಹಾಗೂ NJ ಆಸ್ಪತ್ರೆ ವತಿಯಿಂದ ಬ್ಯಾಂಕಿನ ಸದಸ್ಯರುಗಳಿಗೆ ಉಚಿತ ಆರೋಗ್ಯ ತಪಾಸಣೆ ನಡೆಯುವುದು ಬ್ಯಾಂಕಿನ ಸದಸ್ಯರು ಸದುಪಯೋಗಪಡಿಸಿಕೊಳ್ಳಬೇಕಾಗಿ ವಿನಂತಿ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ

ಹಲಗನಹಳ್ಳಿ, ಪಿರಿಯಾಪಟ್ಟಣ ತಾಲ್ಲೂಕು

ಚುನಾವಣಾ ವೇಳಾಪಟ್ಟಿ

ಇದರ ಆಡಳಿತ ಮಂಡಳಿಯ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳವರೆಗೆ ಚುನಾವಣೆ ನಡೆಯಲಿದ್ದು ಚುನಾವಣಾ ಮತದಾನ ದಿನಾಂಕ: 7/09/2025ನೇ ಭಾನುವಾರ ಬೆಳಗ್ಗೆ 9:00 ರಿಂದ ಸಂಜೆ 4:00 ಘಂಟೆ ವರೆಗೆ ಸ್ಥಳ ಸಂಘದ ಕಛೇರಿ ಆವರಣ ಹಲಗನಹಳ್ಳಿ ಪಿರಿಯಾಪಟ್ಟಣ ತಾಲ್ಲೂಕು ನಾಮ ಪತ್ರ ಸಲ್ಲಿಸುವ ದಿನಾಂಕ:25/08/2025ನೇ ಸೋಮವಾರ ದಿಂದ ದಿನಾಂಕ:30/08/2025ನೇ ಶನಿವಾರ ಮಧ್ಯಾಹ್ನ 2:00 ಘಂಟೆಯ ವರೆಗೆ ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯವರಿಗೆ ಸಲ್ಲಿಸತಕ್ಕದ್ದು. ದಿನಾಂಕ:31/08/2025 ಭಾನುವಾರ ಬೆಳಗ್ಗೆ 11:00 ಘಂಟೆಗೆ ನಾಮ ಪತ್ರ ಪರಿಶೀಲನೆ ನಡೆಯಲಿದೆ ನಂತರ ದಿನಾಂಕ:7/09/2025ನೇ ಭಾನುವಾರ ಬೆಳಗ್ಗೆ 9:00 ಘಂಟೆ ಯಿಂದ ಸಂಜೆ 4:00 ಘಂಟೆಯ ವರೆಗೆ ಚುನಾವಣೆ ನಡೆಯಲಿದೆ ಒಟ್ಟು ಸ್ಥಾನಗಳು 12 ಇದರಲ್ಲಿ 5 ಸಾಮಾನ್ಯ, 1 ಹಿಂದುಳಿದ ಪ್ರವರ್ಗ ಎ, 1 ಹಿಂದುಳಿದ ಪ್ರವರ್ಗ ಬಿ, 1 ಪರಿಶಿಷ್ಟ ಜಾತಿ, 1 ಪರಿಶಿಷ್ಟ ಪಂಗಡ, 2 ಮಹಿಳಾ ಮೀಸಲು ಸ್ಥಾನ, ಹಾಗೂ 1 ಸ್ಥಾನ ಸಾಲಗಾರರಲ್ಲದ ಕ್ಷೇತ್ರಕ್ಕೆ ಚುನಾವಣೆ ನಡೆಯಲಿದೆ.

ಸಹಿ/– ಸಿ.ಎನ್ ಗಿರೀಶ್ ರಿಟರ್ನಿಂಗ್ ಅಧಿಕಾರಿ
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ
ಹಲಗನಹಳ್ಳಿ ಪಿರಿಯಾಪಟ್ಟಣ ತಾಲ್ಲೂಕು.

ಸ್ಥಾಪನೆ: 1994

ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., (ರಿ)

ಪ್ರಧಾನ ಕಛೇರಿ: # 1414, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು–570 004. ದೂರವಾಣಿ: 2330014
ಶಾಖಾ ಕಛೇರಿ: # ಸಿಎ16, ವಿಜಯನಗರ, ಎರಡನೇ ಹಂತ, ಮೈಸೂರು–570 017. ದೂರವಾಣಿ: 2411556
e-mail: agastyasocietymysore@gmail.com GST NO.:29AADAA7412N1ZI

2024–25ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪ್ರಕಟಣೆ

ಮಾನ್ಯ ಸದಸ್ಯರೆ,

ಮೇಲ್ಕಂಡ ಸೊಸೈಟಿಯ 2024–25 ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯನ್ನು **ದಿನಾಂಕ:24/08/2025ನೇ ಭಾನುವಾರ ಬೆಳಗ್ಗೆ 11.00 ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಎಂ ಡಿ ಗೋಪಿನಾಥ್ ಇವರ ಘನ ಅಧ್ಯಕ್ಷತೆಯಲ್ಲಿ ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಮೈಸೂರು** ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರೆಲ್ಲರಿಗೂ ಆಹ್ವಾನ ಪತ್ರಿಕೆಯನ್ನು ಅಂಚೆಯ ಮುಖಾಂತರ ಈಗಾಗಲೇ ಕಳುಹಿಸಿದ್ದು, ಅದು ತಲುಪದಿದ್ದಲ್ಲಿ ಇದನ್ನೇ ಆಹ್ವಾನವೆಂದು ಪರಿಗಣಿಸಿ ಸದಸ್ಯರು ಸರ್ವಸದಸ್ಯರ ಸಭೆಗೆ ಸಕಾಲಕ್ಕೆ ಆಗಮಿಸಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಸರ್ವಸದಸ್ಯರ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

ಸದಸ್ಯರಿಗೆ ಸೂಚನೆ: 1) ಸದಸ್ಯರು ಕಡ್ಡಾಯವಾಗಿ ಷೇರು ಪಾಸ್ ಪುಸ್ತಕ ಅಥವಾ ಗುರುತಿನ ಚೀಟಿಯನ್ನು ತರತಕ್ಕದ್ದು. 2) ಸಂಘದ ಉಪನಿಯಮ 91ರಂತೆ ಲಾಭಾಂಶ ಘೋಷಿಸಿದ ದಿನಾಂಕದಿಂದ 3 ವರ್ಷದೊಳಗೆ ಲಾಭಾಂಶ ಪಡೆಯದೇ ಇರುವ ಸದಸ್ಯರ ಮೊತ್ತವನ್ನು ಮೀಸಲು ನಿಧಿಗೆ ವರ್ಗಾವಣೆ ಮಾಡುವುದರಿಂದ ಲಾಭಾಂಶವನ್ನು ಪಡೆಯದೇ ಇರುವ ಸದಸ್ಯರು ದಿನಾಂಕ: 30/09/2025ರ ಒಳಗೆ ಪಡೆಯಬೇಕಾಗಿ ತಿಳಿಸಲಾಗಿದೆ. ಇದೇ ಅಂತಿಮ ತಿಳುವಳಿಕೆ ಎಂದು ಪರಿಗಣಿಸುವುದು. 3) 2024–25ನೇ ಸಾಲಿನ ಸರ್ವ ಸದಸ್ಯರ ಸಭೆಯ ವರದಿ ಪುಸ್ತಕ ಮತ್ತು ಹಿಂದಿನ ಸಾಲಿನ ಸರ್ವಸದಸ್ಯರ ಸಭೆಯ ನಡಾವಳಿಗಳು, ದಿನಾಂಕ:01/04/2024 ರಿಂದ 31/03/2025ರವರೆಗಿನ ಕ್ರೋಢೀಕೃತ ಜಮಾ ಖರ್ಚಿನ ತಃಖ್ತೆಯನ್ನು ವೆಬ್‌ಸೈಟ್ www.agastyasociety.comರಲ್ಲಿ ವೀಕ್ಷಿಸಲು ಲಭ್ಯವಿರುತ್ತದೆ.
4) ಪ್ರತಿಭಾ ಪುರಸ್ಕಾರ ಹಾಗೂ ಸಂಘದ ಹಿರಿಯ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮವನ್ನು ಬೆಳಿಗ್ಗೆ 9.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿ/ವಿದ್ಯಾರ್ಥಿನಿಯರು, ಹಿರಿಯ ಸದಸ್ಯರು ಸಕಾಲಕ್ಕೆ ಕಾರ್ಯಕ್ರಮಕ್ಕೆ ಆಗಮಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಪ್ರಭಾರ ಕಾರ್ಯದರ್ಶಿ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ ಕೆ.ಸಿ. ಜಾನ್‌ರವರ ಮಗ, ಶ್ರೀ ಚೆರಿಯನ್ ಕೆ. ಜಾನ್, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮರಟಿಕ್ಯಾತನಹಳ್ಳಿ, ರೂಪನಗರ, ಡಿ ಕ್ರಾಸ್, ದೇವಸ್ಥಾನದ ರಸ್ತೆಯಲ್ಲಿರುವ, ಮನೆ ನಂ. 26 (ಹಳೇ ನಿವೇಶನ ಸಂಖ್ಯೆ 610), ಹಾಲೀ ಬೋಗಾದಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟ ಸ್ವತ್ತಿನ ಸಂಖ್ಯೆ: 9262563786, ಅಸೆಸ್ಮೆಂಟ್ ನಂ. 984/957/26 & ವಾರ್ಡ್ ನಂ. 10, ರ ವಿಸ್ತೀರ್ಣ ಪೂರ್ವಕ್ಕೆ : 15.24 ಮೀಟರ್, ಪಶ್ಚಿಮಕ್ಕೆ : 25.74 ಮೀಟರ್, ಉತ್ತರಕ್ಕೆ : 27.43 ಮೀಟರ್ ಮತ್ತು ದಕ್ಷಿಣಕ್ಕೆ : 24.39 ಮೀಟರ್, ಒಟ್ಟು ವಿಸ್ತೀರ್ಣ: 553.4489 ಚದರ ಮೀಟರ್‌ಗಳು, ಇದರಲ್ಲಿರತಕ್ಕ ಕಟ್ಟಡವನ್ನೊಳಗೊಂಡ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ – ದೇವಸ್ಥಾನದ ರಸ್ತೆ, 'ಡಿ' ಕ್ರಾಸ್, ಪಶ್ಚಿಮಕ್ಕೆ – ನಿವೇಶನ ಸಂಖ್ಯೆ 40 ಮತ್ತು 39, ಉತ್ತರಕ್ಕೆ – ರಸ್ತೆ ಮತ್ತು ದಕ್ಷಿಣಕ್ಕೆ ನಿವೇಶನ ಸಂಖ್ಯೆ 27.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641. email: sldlawfirm2021@gmail.com

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್ ಬಿ. ಲೋಕಪ್ಪ ರವರ ಧರ್ಮಪತ್ನಿ ಶ್ರೀಮತಿ ಬಿ. ಲಲಿತಮ್ಮ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಸರಗೂರು ತಾಲ್ಲೂಕು, ಕಂದಲಿಕೆ ಹೋಬಳಿ, ಆಗತ್ತೂರು ಗ್ರಾಮದಲ್ಲಿರುವ ಖುಷ್ಕಿ ಸರ್ವೆ ನಂ. 28/2 ಮತ್ತು ಸರ್ವೇ ನಂ. 28/3 ಜಮೀನುಗಳ ಒಟ್ಟು ವಿಸ್ತೀರ್ಣ 10 ಎಕರೆ 25 ಗುಂಟೆ ವಿವರ ಈ ಕೆಳಕಂಡಂತಿದೆ:

ಐಟಂ ನಂ. 01: ಸರ್ವೆ ನಂ. 28/2 (ಹಳೇ ಸರ್ವೆ ನಂ. 28/4) ರಲ್ಲಿ ವಿಸ್ತೀರ್ಣ 09 ಎಕರೆ 25 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ– ಸರ್ವೆ ನಂ. 28/3 ರಲ್ಲಿ ಶ್ರೀಮತಿ ಬಿ. ಲಲಿತಮ್ಮ ರವರ ಜಮೀನು [ಐಟಂ ನಂ. 2], ಪಶ್ಚಿಮಕ್ಕೆ – ಸರ್ಕಾರಿ ಕಾಲುವೆ, ಉತ್ತರಕ್ಕೆ – ಕಪಿಲಾ ನದಿ ಮತ್ತು ದಕ್ಷಿಣಕ್ಕೆ – ರಸ್ತೆ.

ಐಟಂ ನಂ. 02: ಸರ್ವೆ ನಂ. 28/3 ರಲ್ಲಿ ವಿಸ್ತೀರ್ಣ 01 ಎಕರೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ – ಸರ್ವೇ ನಂ. 28/4 ರಲ್ಲಿ ಶ್ರೀಮತಿ. ತಾಯಮ್ಮ ರವರ ಜಮೀನು, ಪಶ್ಚಿಮಕ್ಕೆ – ಸರ್ವೆ ನಂ. 28/2 ರಲ್ಲಿ ಶ್ರೀಮತಿ ಬಿ. ಲಲಿತಮ್ಮ ರವರ ಜಮೀನು [ಐಟಂ ನಂ. 1], ಉತ್ತರಕ್ಕೆ – ಸರ್ವೇ ನಂ. 28/2 ರಲ್ಲಿ ಶ್ರೀಮತಿ ಬಿ. ಲಲಿತಮ್ಮ ರವರ ಜಮೀನು [ಐಟಂ ನಂ. 1], ಮತ್ತು ದಕ್ಷಿಣಕ್ಕೆ – ರಸ್ತೆ.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641. email: sldlawfirm2021@gmail.com